# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1377
ಉತ್ತರಿಸಬೇಕಾದ ದಿನಾಂಕ : 24.12.2021
ಸದಸ್ಯರ ಹೆಸರು : ಶ್ರೀಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ಸಚಿವರು : ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಜಾರಿಯಲ್ಲಿರುವ ಯೋಜನೆಗಳ (ವಿವರ ನೀಡುವುದು) ಸದರಿ ಯೋಜನೆಗಳ ಮಾರ್ಗಸೂಚಿಗಳನ್ನು ಒದಗಿಸುವುದು: | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಕೆಳಕಂಡ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ:-<br><br>**ನಗದು ಪುರಸ್ಕಾರ:** ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ವಿಜೇತರಾದ ಕ್ರೀಡಾಪಟುಗಳಿಗೆ ನಗದು ಪುರಸ್ಕಾರವನ್ನು ನೀಡಲಾಗುತ್ತಿದೆ.<br>**ಏಕಲವ್ಯ ಪ್ರಶಸ್ತಿ:** ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಏಕಲವ್ಯ ಪ್ರಶಸ್ತಿ ನೀಡಲಾಗುತ್ತಿದೆ.<br>**ಜೀವಮಾನ ಸಾಧನೆ ಪ್ರಶಸ್ತಿ** : ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗೆ ತರಬೇತಿ ನೀಡಿದ ರಾಜ್ಯದ ತರಬೇತುದಾರರಿಗೆ ಅವರ ಜೀವಮಾನ ಸಾಧನೆಗೆ ಪ್ರಶಸ್ತಿ ನೀಡಲಾಗುತ್ತಿದೆ.<br>**ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ:** ದೇಸೀ ಗ್ರಾಮೀಣ ಕ್ರೀಡೆಗಳಲ್ಲಿ ವಿಶೇಷ ಸಾಧನೆ ಮಾಡಿದ ರಾಜ್ಯದ ಗ್ರಾಮೀಣ ಕ್ರೀಡಾಪ್ರತಿಭೆಗಳಿಗೆ ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ ಹಾಗೂ ನಗದನ್ನು ನೀಡಿ ಗೌರವಿಸಲಾಗುತ್ತಿದೆ.<br>**ಶೈಕ್ಷಣಿಕ ಶುಲ್ಕ ಮರುಪಾವತಿ** : ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾಜ್ಯದಿಂದ ಪ್ರತಿನಿಧಿಸಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಶೈಕ್ಷಣಿಕ ಶುಲ್ಕ ಮರು ಪಾವತಿ ಮಾಡಲಾಗುತ್ತಿದೆ.<br>**ಕ್ರೀಡಾ ವಿದ್ಯಾರ್ಥಿ ವೇತನ**: ರಾಜ್ಯ ಮಟ್ಟದಲ್ಲಿ ಪದಕ ವಿಜೇತರಾಗಿ ರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರೂ.10,000/-ಗಳ ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.<br>ಪರಿಶಿಷ್ಟ ಜಾತಿ ಮತ್ತು ಪಂಗಡದ ಉಪಯೋಜನೆಯಲ್ಲಿ ಅಂತಾರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಕ್ರೀಡಾಕೂಟಗಳಲ್ಲಿ ಪದಕ ವಿಜೇತ ಕ್ರೀಡಾಪಟುಗಳಿಗೆ ಕ್ರಮವಾಗಿ ತಲಾ ರೂ.5.00, 3.00 ಮತ್ತು ರೂ.1.00 ಲಕ್ಷಗಳ ಪ್ರೋತ್ಸಾಹಧನ ನೀಡಲಾಗುತ್ತಿದೆ. |

ಅಂತಾರಾಷ್ಟ್ರೀಯ/ ರಾಷ್ಟ್ರೀಯ ಮಟ್ಟದಲ್ಲಿ ಸಾಧನೆ

| | | |
|---|---|---|
| | | ಮಾಡಿದ ಕ್ರೀಡಾಪಟುಗಳಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಜಿಮ್ ಸಾಮಗ್ರಿಗಳನ್ನು ನೀಡಲಾಗುತ್ತಿದೆ. ಕ್ರೀಡಾ ವಸತಿ ಶಾಲೆ/ ನಿಲಯಗಳಲ್ಲಿ ಪ್ರವೇಶ ಪಡೆಯುವ ಪ್ರತಿಭಾವಂತ ಯುವ ಕ್ರೀಡಾಪಟುಗಳಿಗೆ ಉಚಿತ ಊಟೋಪಹಾರ, ವಸತಿ, ಕ್ರೀಡಾ ತರಬೇತಿ ಮತ್ತು ಕ್ರೀಡಾ ಸಮವಸ್ತ್ರ ಒದಗಿಸಲಾಗುತ್ತಿದೆ. ದೈಹಿಕ ಕ್ಷಮತಾ ಪರೀಕ್ಷೆಗಳಲ್ಲಿ ಹಾಗೂ ಕ್ರೀಡಾ ಕೌಶಲ್ಯ ಪರೀಕ್ಷೆ ಆಧಾರಿತವಾಗಿ 5ನೇ ತರಗತಿ ಮೇಲ್ಪಟ್ಟ ಕ್ರೀಡಾಪಟುಗಳಿಗೆ ಆಯ್ಕೆ ಪ್ರಕ್ರಿಯೆ ನಡೆಸಿ, ಪ್ರವೇಶಾವಕಾಶ ಕಲ್ಪಿಸಲಾಗುತ್ತಿದೆ.<br>**ಕ್ರೀಡಾ ಮೂಲಭೂತ ಸೌಕರ್ಯಗಳ ಸೃಜನೆ:** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ನಿವೇಶನಗಳಲ್ಲಿ ಕ್ರೀಡಾ ಮೂಲ ಸೌಕರ್ಯಗಳನ್ನು ಸೃಜಿಸುವ ಮೂಲಕ ಕ್ರೀಡಾಪಟುಗಳ ಕ್ರೀಡಾ ತರಬೇತಿಗೆ ಉತ್ತೇಜನ ನೀಡಲಾಗುತ್ತಿದೆ.<br>ಮಾರ್ಗಸೂಚಿಗಳನ್ನು **ಅನುಬಂಧ-01** ರಲ್ಲಿ ನೀಡಲಾಗಿದೆ. |
| ಆ | ಕಳೆದ 5 ವರ್ಷಗಳಿಂದ ಜಾರಿಯಲ್ಲಿರುವ ಯೋಜನೆಗಳ ಪ್ರಗತಿಯ ವಿವರ ಒದಗಿಸುವುದು | ಕಳೆದ 5 ವರ್ಷಗಳಿಂದ ಜಾರಿಯಲ್ಲಿರುವ ಯೋಜನೆಗಳ ಪ್ರಗತಿಯ ವಿವರಗಳನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ. |
| ಇ | ಯಾವುದಾದರು ಹೊಸ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ: (ಹಾಗಿದ್ದಲ್ಲಿ, ವಿವರಗಳನ್ನು ನೀಡುವುದು) | ಹೌದು. ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸವಿನೆನಪಿಗಾಗಿ ಮಾನ್ಯ ಮುಖ್ಯ ಮಂತ್ರಿಯವರು ಘೋಷಿಸಿರುವ ಅಮೃತ ಕ್ರೀಡಾ ದತ್ತು ಯೋಜನೆಯಲ್ಲಿ, ಮುಂದಿನ ಪ್ಯಾರೀಸ್ ಒಲಂಪಿಕ್ ಕ್ರೀಡಾಕೂಟದಲ್ಲಿ ಉತ್ತಮ ಸಾಧನೆ ತೋರಿ ಪದಕ ವಿಜೇತ ಸಾಮರ್ಥ್ಯವುಳ್ಳ ಆಯ್ದ 75 ಕ್ರೀಡಾಪಟುಗಳನ್ನು ರೂಪಿಸಲು ಅಗತ್ಯವಾದ ತರಬೇತಿ ಮತ್ತು ಪ್ರೋತ್ಸಾಹ ಕಲ್ಪಿಸುವ ನಿಟ್ಟಿನಲ್ಲಿ, ಪ್ರತಿ ಕ್ರೀಡಾಪಟುವಿಗೆ ಗರಿಷ್ಠ ರೂ.5.00 ಲಕ್ಷಗಳ ಪ್ರೋತ್ಸಾಹ ಧನದ ನಿಗಧಿಯೊಂದಿಗೆ ಅನುಷ್ಠಾನಕ್ಕಾಗಿ ಕ್ರಮವಹಿಸಲಾಗುತ್ತಿದೆ.<br>ಸದರಿ ಯೋಜನೆಯ ಮಾರ್ಗಸೂಚಿ ವಿವರಗಳನ್ನು **ಅನುಬಂಧ-03**ರಲ್ಲಿ ನೀಡಲಾಗಿದೆ. |

**ವೈಎಸ್‌ಡಿ/ಇಬಿಬಿ/213/2021**

**(ಡಾ. ನಾರಾಯಣಗೌಡ)**
ರೇಷ್ಮೆ, ಯುವ ಸಬಲೀಕರಣ ಮತ್ತು
ಕ್ರೀಡಾ ಸಚಿವರು.

ಅನುಬಂಧ-1

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : ವಿವಿಧ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ ಪದಕ ಪಡೆದ ಕರ್ನಾಟಕದ ಕ್ರೀಡಾಪಟುಗಳಿಗೆ ನಗದು ಬಹುಮಾನ ನೀಡುವ ಮಾರ್ಗಸೂಚಿಯನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಯುಸೇಇ 179 ಯುಸೇಕ್ರೀ 2013, ದಿನಾಂಕ:27.09.2013
2. ಸರ್ಕಾರದ ಆದೇಶ ಸಂಖ್ಯೆ: ಯುಸೇಇ 278 ಯುಸೇಕ್ರೀ 2013, ದಿನಾಂಕ:30.11.2013
3. ಸರ್ಕಾರದ ಆದೇಶ ಸಂಖ್ಯೆ: ಯುಸೇಇ 450 ಯುಸೇಕ್ರೀ 2014, ದಿನಾಂಕ:15.10.2014
4. ಸರ್ಕಾರದ ಆದೇಶ ಸಂಖ್ಯೆ: ಯುಸೇಇ 96 ಯುಸೇಕ್ರೀ 2014, ದಿನಾಂಕ:19.05.2017
5. ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪತ್ರಗಳ ಸಂಖ್ಯೆ: ಡಿವೈಇಎಸ್/ಕ್ರೀ.ಚ.ಪ್ರೋ/79/2017-18, ದಿನಾಂಕ:21.08.2017 ಮತ್ತು 06.09.2017

******

ಪ್ರಸ್ತಾವನೆ:

ಮೇಲೆ ಓದಲಾದ (1) ರಿಂದ (4) ರ ಆದೇಶಗಳಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿ ವಿಜೇತರಾದ ಕರ್ನಾಟಕದ ಕ್ರೀಡಾಪಟುಗಳಿಗೆ ನಗದು ಪುರಸ್ಕಾರ ನೀಡುವ ಕುರಿತು ಮಾರ್ಗಸೂಚಿಗಳನ್ನು ರಚಿಸಿ ಆದೇಶಿಸಲಾಗಿದೆ.

ಪ್ರಸ್ತುತ ರಾಷ್ಟ್ರೀಯ ಮಟ್ಟದಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಪದಕ ಪಡೆದ ಕರ್ನಾಟಕದ ಕ್ರೀಡಾಪಟುಗಳು ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಪ್ರತಿನಿಧಿಸಿ ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿ ರಾಷ್ಟ್ರಕ್ಕೆ ಕೀರ್ತಿ ತಂದ ಕರ್ನಾಟಕದ ಕ್ರೀಡಾಪಟುಗಳಿಗೆ ರಾಜ್ಯ ಸರ್ಕಾರದ ವತಿಯಿಂದ ನಗದು ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ. ನಗದು ಪುರಸ್ಕಾರಕ್ಕೆ ಭಾಜನರಾಗಿರುವ ಕ್ರೀಡಾಪಟುಗಳು ಮತ್ತು ಅವರು ಪ್ರತಿನಿಧಿಸಿರುವ ಕ್ರೀಡೆಗಳ ಬಗ್ಗೆ ಪರಿಷ್ಕರಿಸಲಾಗಿ ಒಲಂಪಿಕ್ ಕ್ರೀಡೆಗಳಲ್ಲದ ಕ್ರೀಡೆಗಳಿಗೂ ಸಹ ಒಲಂಪಿಕ್ ಕ್ರೀಡೆಗಳ ಸಮಾನವಾಗಿ ನಗದು ಪುರಸ್ಕಾರ ನೀಡುತ್ತಿರುವುದನ್ನು ಗಮನಿಸಲಾಗಿದೆ. ಈ ಹಿನ್ನೆಲೆಯಲ್ಲಿ ನಗದು ಪುರಸ್ಕಾರ ನೀಡಲು ಹೊರಡಿಸಿರುವ ಮಾರ್ಗಸೂಚಿಗಳನ್ನು ಪರಿಷ್ಕರಿಸಿ ಆದೇಶ ಹೊರಡಿಸುವಂತೆ ಮೇಲೆ ಓದಲಾದ (4)ರ ಪತ್ರಗಳಲ್ಲಿ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಸರ್ಕಾರವನ್ನು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ, ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 280 ಯುಸೇಕ್ರೀ 2017**
**ಬೆಂಗಳೂರು, ದಿನಾಂಕ: 09.10.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಷ್ಟ್ರೀಯ ಮಟ್ಟದಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಪದಕ ಪಡೆದ ಕರ್ನಾಟಕದ ಕ್ರೀಡಾಪಟುಗಳು ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಪ್ರತಿನಿಧಿಸಿ ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿ ರಾಷ್ಟ್ರಕ್ಕೆ ಕೀರ್ತಿ ತಂದ ಕರ್ನಾಟಕದ ಕ್ರೀಡಾಪಟುಗಳಿಗೆ, ರಾಜ್ಯ ಸರ್ಕಾರದ ವತಿಯಿಂದ ನೀಡಲಾಗುತ್ತಿರುವ ನಗದು ಪುರಸ್ಕಾರವನ್ನು ಈ ಕೆಳಗಿನಂತೆ ಸೂಚಿಸಿರುವ ಪರಿಷ್ಕೃತ ಮಾರ್ಗಸೂಚಿಯನ್ವಯ ನೀಡಿ ಗೌರವಿಸಲು ಸಹಮತಿ ನೀಡಿ ಆದೇಶಿಸಿದೆ.

ನಗದು ಪುರಸ್ಕಾರ:

(ರೂ. ಲಕ್ಷಗಳಲ್ಲಿ)

| ಕ್ರ ಸಂ. | ವಿವರ | ಚಿನ್ನ | ಬೆಳ್ಳಿ | ಕಂಚು |
|---|---|---|---|---|
| 1. | ಒಲಂಪಿಕ್ ಗೇಮ್ಸ್ | 500.00 | 300.00 | 200.00 |
| 2. | ಏಷಿಯನ್ ಗೇಮ್ಸ್ | 25.00 | 15.00 | 8.00 |
| 3. | ಕಾಮನ್ ವೆಲ್ತ್ ಗೇಮ್ಸ್ | 25.00 | 15.00 | 8.00 |
| 4. | ವರ್ಲ್ಡ್ ಕಪ್/ ಚಾಂಪಿಯನ್‌ಷಿಪ್ (ಭಾರತ ಸರ್ಕಾರದಿಂದ ಅಂಗೀಕೃತವಾಗಿ ಭಾರತ ತಂಡದ ಭಾಗವಾಗಿ ಪ್ರತಿನಿಧಿಸಿರಬೇಕು.) | 5.00 | 3.00 | 2.00 |
| 5. | ನ್ಯಾಷನಲ್ ಗೇಮ್ಸ್ (ಪ್ರತಿ ನಾಲ್ಕು ವರ್ಷಗೊಳಿಗೊಮ್ಮೆ ನಡೆಯುವ ಕ್ರೀಡೆಗಳು) | 5.00 | 3.00 | 2.00 |
| 6. | ನ್ಯಾಷನಲ್ ಚಾಂಪಿಯನ್‌ಷಿಪ್ (ಒಲಂಪಿಕ್ ಕ್ರೀಡೆಗಳಿಗೆ ಮಾತ್ರ) | 2.00 | 1.00 | 0.50 |
| 7. | ಜೂನಿಯರ್ ನ್ಯಾಷನಲ್ (ಒಲಂಪಿಕ್ ಕ್ರೀಡೆಗಳಿಗೆ ಮಾತ್ರ) | 0.50 | 0.25 | 0.15 |
| 8. | ಸಬ್ ಜೂನಿಯರ್ ನ್ಯಾಷನಲ್ (ಒಲಂಪಿಕ್ ಕ್ರೀಡೆಗಳಿಗೆ ಮಾತ್ರ) | 0.25 | 0.15 | 0.10 |

ಭಾರತ ಸರ್ಕಾರದಿಂದ ಅಂಗೀಕೃತವಾಗಿರುವ ಅಂತರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿ ಭಾಗವಹಿಸಿದಲ್ಲಿ/ಪದಕ ವಿಜೇತರಾದಲ್ಲಿ ರೂ.50,000/-ಗಳ ನಗದು ಪುರಸ್ಕಾರ ನೀಡುವುದು.

ಮಾರ್ಗಸೂಚಿಗಳು:

ಒಲಂಪಿಕ್ಸ್ ಗೇಮ್ಸ್, ಕಾಮನ್‌ವೆಲ್ತ್ ಗೇಮ್ಸ್ ಮತ್ತು ಏಷ್ಯನ್ ಗೇಮ್ಸ್ ಕ್ರೀಡಾಕೂಟಗಳನ್ನು ಹೊರತುಪಡಿಸಿ ಇನ್ನುಳಿದ ಎಲ್ಲಾ ಕ್ರೀಡಾಕೂಟಗಳಲ್ಲಿ ಪದಕ ಪಡೆಯುವ ಕ್ರೀಡಾಪಟುಗಳಿಗೆ ವಾರ್ಷಿಕ ಗರಿಷ್ಠ ರೂ.5.00 ಲಕ್ಷ ಅಥವಾ ವಾರ್ಷಿಕ ಅತ್ಯುತ್ತಮ ಎರಡು ಸಾಧನೆಗಳನ್ನು ಪರಿಗಣಿಸಿ ಯಾವುದು ಕಡಿಮೆಯೊ ಆ ಮೊತ್ತಕ್ಕೆ ನಗದು ಬಹುಮಾನವನ್ನು ಸೀಮಿತಗೊಳಿಸುವುದು.

- ಈ ನಗದು ಪುರಸ್ಕಾರವನ್ನು ಕರ್ನಾಟಕದ ಕ್ರೀಡಾಪಟುಗಳಿಗೆ ಮಾತ್ರ ನೀಡತಕ್ಕದ್ದು.
- ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ಭಾರತ ಸರ್ಕಾರದಿಂದ ಅಂಗೀಕೃತವಾದಂತಹ ರಾಷ್ಟ್ರೀಯ ಕ್ರೀಡಾ ತಂಡಗಳಿಗೆ ಆಯ್ಕೆಯಾಗಿ ಭಾರತವನ್ನು ಪ್ರತಿನಿಧಿಸುತ್ತಿರುವ, ಅಂತರಾಷ್ಟ್ರೀಯ ಕ್ರೀಡಾಕೂಟಗಳಿಗೆ ಮಾತ್ರ ನೀಡತಕ್ಕದ್ದು.
- ಕ್ರೀಡಾಪಟುಗಳು ಕರ್ನಾಟಕ ಮೂಲದವರಾಗಿದ್ದು, ರಾಜ್ಯದ ಹೊರಗಡೆ ವಾಸಿಸುತ್ತಿರುವ ಬೇರೆ ರಾಜ್ಯ ಅಥವಾ ಕ್ರೀಡಾ ತಂಡಗಳನ್ನು ಪ್ರತಿನಿಧಿಸುವ ಕ್ರೀಡಾಪಟುಗಳು ಈ ನಗದು ಪುರಸ್ಕಾರಕ್ಕೆ ಅರ್ಹರಾಗಿರುವುದಿಲ್ಲ.
- ಅಂತರಾಷ್ಟ್ರೀಯ ಕ್ರೀಡಾಕೂಟಕ್ಕೆ ಕ್ರೀಡಾಪಟು ಯಾವ ರಾಜ್ಯವನ್ನು ಅಥವಾ ಯಾವ ಸಂಸ್ಥೆಯನ್ನು ಪ್ರತಿನಿಧಿಸಿ ಆಯ್ಕೆಯಾಗಿದ್ದಾರೆ ಎಂಬುದರ ಬಗ್ಗೆ ಭಾರತ ಸರ್ಕಾರದ ಮಾನ್ಯತೆ ಪಡೆದ ಸಂಬಂಧಪಟ್ಟ ಕ್ರೀಡೆಯ ರಾಷ್ಟ್ರೀಯ ಫೆಡರೇಷನ್/ಭಾರತೀಯ ಕ್ರೀಡಾ ಪ್ರಾಧಿಕಾರ ಇವರಿಂದ ದೃಢೀಕರಣ ಪತ್ರ ಒದಗಿಸತಕ್ಕದ್ದು.
- ಯಾವುದೇ ಅಂತರಾಷ್ಟ್ರೀಯ ಕ್ರೀಡಾ ಸ್ಪರ್ಧೆಯಲ್ಲಿ ನೇರ ಪ್ರವೇಶ ಪಡೆದಂತಹ ಕ್ರೀಡಾಪಟುಗಳಿಗೆ ಈ ಪುರಸ್ಕಾರ ನೀಡಲು ಅವಕಾಶವಿರುವುದಿಲ್ಲ.
- ಅಂತರಾಷ್ಟ್ರೀಯ ಸಂಸ್ಥೆ ಮತ್ತು ಇತರೆ ಮಾನ್ಯತೆ ಪಡೆದ ಕ್ರೀಡಾ ಸಂಸ್ಥೆಗಳು ನಡೆಸುವ ಅಧಿಕೃತ ಗೇಮ್ಸ್‌ಗಳಿಗೆ ಮಾತ್ರ ನಗದು ಪುರಸ್ಕಾರ ನೀಡಲಾಗುವುದು.
- ಭಾಗವಹಿಸಿದ ಕ್ರೀಡಾಪಟುಗಳು ರಾಜ್ಯ ಕ್ರೀಡಾ ಸಂಸ್ಥೆಯ ಮುಖಾಂತರ ಪ್ರಾಧಿಕಾರದೊಂದಿಗೆ ದಾಖಲಾತಿಯನ್ನು ಸಲ್ಲಿಸತಕ್ಕದ್ದು.

33

- ಪ್ರತಿ 3 ತಿಂಗಳಿಗೊಮ್ಮೆ ನಗದು ಪುರಸ್ಕಾರಕ್ಕೆ ಅರ್ಹ ಇರುವ ಕ್ರೀಡಾಪಟುಗಳ ಪ್ರಸ್ತಾವನೆಗಳನ್ನು ಈ ಕೆಳಕಾಣಿಸಿದ ಸಮಿತಿಯು ಅಂತಿಮಗೊಳಿಸುವುದು.

| | | | |
|---|---|---|---|
| 1 | ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು | – | ಅಧ್ಯಕ್ಷರು |
| 2 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ. | – | ಸದಸ್ಯರು |
| 3 | ಅಧ್ಯಕ್ಷರು, ಕರ್ನಾಟಕ ಒಲಂಪಿಕ್ಸ್ ಸಂಸ್ಥೆ | – | ಸದಸ್ಯರು |
| 4 | ಒಬ್ಬರು ಅರ್ಜುನ ಪ್ರಶಸ್ತಿ ಪುರಸ್ಕೃತರು (ನಾಮ ನಿರ್ದೇಶನಗೊಂಡವರು) | – | ಸದಸ್ಯರು |
| 5 | ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ | – | ಸದಸ್ಯ ಕಾರ್ಯದರ್ಶಿಗಳು |

- 2015ನೇ ಸಾಲಿನಿಂದ ನಗದು ಪುರಸ್ಕಾರಕ್ಕೆ ಭಾಜನರಾಗುವ ಕ್ರೀಡಾಪಟುಗಳು ಇಲಾಖೆಯ ಈ ಕೆಳಕಂಡ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

1. ಇಲಾಖೆಯಿಂದ ನೀಡಬೇಕಾದ ನಗದು ಪುರಸ್ಕಾರದ ಮೊತ್ತವನ್ನು 5 ವರ್ಷಗಳ ಅವಧಿಯಲ್ಲಿ ಹಂತ ಹಂತವಾಗಿ ನೀಡುವುದು.
2. ಅಂತರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸುವಾಗ ಧರಿಸುವ ಸಮವಸ್ತ್ರಗಳಲ್ಲಿ ಇಲಾಖೆಯ ಲಾಂಛನ ಬಳಸುವುದು (ಸ್ಪರ್ಧೆಗಳ ನಿಯಮಗಳಲ್ಲಿ ಅವಕಾಶವಿದ್ದಲ್ಲಿ ಮಾತ್ರ)
3. ನಗದು ಪುರಸ್ಕಾರವನ್ನು ಪಡೆಯುವ ಸಾಧಕ ಕ್ರೀಡಾಪಟುಗಳು ವಾರ್ಷಿಕ 30 ದಿನಗಳನ್ನು ಇಲಾಖೆಯ ಈ ಕೆಳಕಂಡ ಕ್ರೀಡಾ ಪ್ರೋತ್ಸಾಹ/ಉತ್ತೇಜನ ಕಾರ್ಯಗಳಲ್ಲಿ ಭಾಗವಹಿಸಲು ಕಡ್ಡಾಯವಾಗಿ ಮೀಸಲಿಡಬೇಕು

- ಕಿರಿಯ ಕ್ರೀಡಾಪಟುಗಳಿಗೆ ತರಬೇತಿ
- ಕ್ರೀಡಾ ಶಾಲೆ/ನಿಲಯಗಳಿಗೆ ಭೇಟಿ ನೀಡಿ ಕ್ರೀಡಾಪಟುಗಳಿಗೆ ಉತ್ತೇಜಿಸುವುದು.
- ಕ್ರೀಡಾಪಟುಗಳೊಂದಿಗೆ ಸಂವಾದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದು.
- ಸರ್ಕಾರಿ ಕ್ರೀಡಾಕೂಟಗಳ ಉದ್ಘಾಟನಾ ಸಮಾರಂಭಗಳಲ್ಲಿ ಪಾಲ್ಗೊಳ್ಳುವುದು.
- ಮತ್ತಿತರ ಕ್ರೀಡಾ ಕಾರ್ಯಕ್ರಮಗಳು.
- ಒಂದು ವೇಳೆ ಈ ಮೇಲಿನ ಸೂಚನೆಗಳನ್ನು ಉಲ್ಲಂಘಿಸಿದಲ್ಲಿ ನಗದು ಪುರಸ್ಕಾರವನ್ನು ರದ್ದುಗೊಳಿಸುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಈ ಆದೇಶ ಹೊರಡಿಸಿದ ದಿನಾಂಕದ ನಂತರ ಮಂಜೂರು ಮಾಡಲಾಗುವ ಎಲ್ಲಾ ಪ್ರಕರಣಗಳಿಗೂ ಈ ಮಾರ್ಗಸೂಚಿಗಳು ಅನ್ವಯವಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಆರ್.ಪ್ರಭುಶಂಕರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ), ಕರ್ನಾಟಕ, ಪಿ.ಬಿ. ನಂ.5329, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು, (ಜಿ&ಎಸ್ ಎಸ್.ಎ), ಕರ್ನಾಟಕ, ಪಿ.ಬಿ. ನಂ.5398, ಬೆಂಗಳೂರು.

3. ಪ್ರಧಾನ ಮಹಾಲೇಖಪಾಲರು. (ಇ&ಆರ್.ಎಸ್.ಎ), ಕರ್ನಾಟಕ, ಪಿ.ಬಿ ನಂ.539 ಬೆಂಗಳೂರು.
4. ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
5. ನಿರ್ದೇಶಕರು. ರಾಜ್ಯ ಹುಜೂರ್ ಖಜಾನೆ. ಬೆಂಗಳೂರು.
6. ಮಾನ್ಯ ಮೀನುಗಾರಿಕೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.
8. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಏಕಲವ್ಯ ಪ್ರಶಸ್ತಿಗಾಗಿ ರೂಪಿಸಲಾಗಿರುವ ಮಾರ್ಗಸೂಚಿಗಳನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 312 ಯುಸೇಕ್ರೀ 2014, ದಿನಾಂಕ: 22.07.2014

2) ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪತ್ರ ಸಂಖ್ಯೆ: ಡಿವೈಎಸ್/ಕ್ರಿಕಪಂ/ಏಕಲವ್ಯ/ಮಾಸೂ/06/ 2015-16, ದಿನಾಂಕ: 03.07.2015.

******

**ಪ್ರಸ್ತಾವನೆ:**

ಕರ್ನಾಟಕ ಸರ್ಕಾರವು ಅಪ್ರತಿಮ ಸಾಧಕರಿಗಾಗಿ ಪ್ರತಿ ವರ್ಷ ನೀಡುತ್ತಿರುವ ಏಕಲವ್ಯ ಪ್ರಶಸ್ತಿಗೆ ಸಂಬಂಧಿಸಿದಂತೆ ಮೇಲೆ ಓದಲಾದ ಉಲ್ಲೇಖ(1)ರ ದಿನಾಂಕ: 22.07.2014ರ ಆದೇಶದ ಮೂಲಕ ರಚಿಸಲಾಗಿರುವ ಮಾರ್ಗಸೂಚಿಗಳನ್ನು ಏಕಲವ್ಯ ಪ್ರಶಸ್ತಿಗಾಗಿ ಅರ್ಹತಾ ಮಾನದಂಡವಾಗಿ ಅನುಸರಿಸಲಾಗುತ್ತಿದೆಯೆಂದು ನಿರ್ದೇಶಕರು ತಿಳಿಸಿರುತ್ತಾರೆ.

2014ನೇ ಸಾಲಿನ ಏಕಲವ್ಯ ಪ್ರಶಸ್ತಿಗಾಗಿ ರಚಿಸಲಾದ ಮಾರ್ಗಸೂಚಿಗಳಲ್ಲಿ ಅನುಬಂಧ-3 ರಲ್ಲಿ ಹಿರಿಯರ ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಮಾಡಿದ ಸಾಧನೆಯನ್ನು ಮಾತ್ರ ನಮೂದಿಸಿದ್ದು, ಕಿರಿಯರ ರಾಷ್ಟ್ರೀಯ ಕ್ರೀಡಾಕೂಟಗಳ ಸಾಧನೆಯನ್ನು ಸಹ ಪರಿಗಣಿಸಬೇಕೆಂದು ಶ್ರೀ ವಿ.ವರ್ಷಿತ್, ರೋಲರ್ ಸ್ಕೇಟಿಂಗ್ ಕ್ರೀಡಾಪಟು ಇವರು ಕರ್ನಾಟಕ ಸರ್ಕಾರದ ಉಚ್ಚ ನ್ಯಾಯಾಲಯದಲ್ಲಿ ಡಬ್ಲ್ಯೂಪಿ-49543/2014 (ಜಿಎಂ) ಪ್ರಕರಣ ದಾಖಲಿಸಿದ್ದು, ಈ ಸಂಬಂಧ ವಿಚಾರಣೆ ವೇಳೆ ಮಾನ್ಯ ಉಚ್ಚ ನ್ಯಾಯಾಲಯವು ಕಿರಿಯ ಕ್ರೀಡಾಪಟುಗಳು ಹಿರಿಯ ಕ್ರೀಡಾಪಟುಗಳಿಗಿಂತ ಹೆಚ್ಚಿನ ಪದಕ ಪಡೆದಲ್ಲಿ ಅವರ ಸಾಧನೆಯನ್ನು ಸಹ ಪರಿಗಣಿಸಬೇಕೆಂದು ನಿರ್ದೇಶನ ನೀಡಿರುವ ಹಿನ್ನೆಲೆಯಲ್ಲಿ ಏಕಲವ್ಯ ಪ್ರಶಸ್ತಿಗಾಗಿ ಇಲಾಖೆಯು ರೂಪಿಸಿರುವ ಮಾರ್ಗಸೂಚಿಗಳಲ್ಲಿ ಕೆಲವೊಂದು ಮಾರ್ಪಾಡು ಮಾಡುವುದು ಸೂಕ್ತವೆಂದು ಕಂಡುಬಂದಿದ್ದು, ಅದರಂತೆ ಮಾರ್ಗಸೂಚಿಗಳನ್ನು ಪುನರ್ ರಚಿಸಿ ಸರ್ಕಾರದ ಆದೇಶವನ್ನು ನೀಡುವಂತೆ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಮೇಲೆ ಓದಲಾದ ಉಲ್ಲೇಖ(2)ರ ದಿನಾಂಕ: 03-07-2015ರ ಪತ್ರದಲ್ಲಿ ಸರ್ಕಾರವನ್ನು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ, ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 381 ಯುಸೇಕ್ರೀ 2015,**

**ಬೆಂಗಳೂರು, ದಿನಾಂಕ: 24-08-2015**

ಕರ್ನಾಟಕ ಸರ್ಕಾರದ ಉಚ್ಚ ನ್ಯಾಯಾಲಯದ ಆದೇಶದಂತೆ, ಮೇಲೆ ಓದಲಾದ ಉಲ್ಲೇಖ(1)ರ ದಿನಾಂಕ: 22.07.2014ರ ಆದೇಶದ ಸರ್ಕಾರಿ ಆದೇಶಲ್ಲಿನ ಕರ್ನಾಟಕ ಏಕಲವ್ಯ ಪ್ರಶಸ್ತಿಗಾಗಿ ರೂಪಿಸಿರುವ ಮಾರ್ಗಸೂಚಿಗಳಲ್ಲಿ ಕೆಲವೊಂದು ಮಾರ್ಪಾಡು ಮಾಡಿ ಮಾರ್ಗಸೂಚಿಗಳನ್ನು ಪುನರ್ ರಚಿಸಿ ಅನುಮೋದನೆ ನೀಡಿ ಆದೇಶಿಸಿದೆ. ಅನುಬಂಧ-1ರಲ್ಲಿ ಅರ್ಜಿಯ ನಮೂನೆ, ಕ್ರೀಡಾ ಸಾಧನೆಯ ಬಗ್ಗೆ ಪೂರ್ಣ ಮಾಹಿತಿ ಒದಗಿಸುವ ನಮೂನೆ ಹಾಗೂ ಸ್ವಯಂ ಮೌಲ್ಯ ಮಾಪನದ ನಮೂನೆಗಳನ್ನು ಮತ್ತು ಅನುಬಂಧ-2ರಲ್ಲಿ ಏಕಲವ್ಯ ಪ್ರಶಸ್ತಿಗೆ ಪರಿಗಣಿಸಲಾಗಿರುವ ಕ್ರೀಡೆಗಳ ವಿವರ ಹಾಗೂ ಅನುಬಂಧ-3ರಲ್ಲಿ ಅಂಕಪಟ್ಟಿಯ ನಮೂನೆಯನ್ನು ಇದರೊಂದಿಗೆ ಲಗತ್ತಿಸಿದೆ.

...2

ಕರ್ನಾಟಕ ಏಕಲವ್ಯ ಪ್ರಶಸ್ತಿ ಮಾರ್ಗಸೂಚಿಗಳಿಗೆ ಸಂಬಂಧಿಸಿದಂತೆ ಈ ಹಿಂದೆ ಹೊರಡಿಸಿರುವ ಮಾರ್ಗಸೂಚಿಗಳನ್ನು ಈ ಮೂಲಕ ರದ್ದುಪಡಿಸಲಾಗಿದೆ.

ಕರ್ನಾಟಕ ಏಕಲವ್ಯ ಪ್ರಶಸ್ತಿಗಾಗಿ ಅರ್ಜಿಗಳನ್ನು ಪರಿಶೀಲಿಸುವ ಸಲುವಾಗಿ ಪರಿಶೀಲನಾ ಸಮಿತಿ ಹಾಗೂ ಆಯ್ಕೆ ಸಮಿತಿಯನ್ನು ರಚಿಸಲು ಪ್ರತ್ಯೇಕವಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿಕೊಡುವಂತೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

24/8/2015
**(ಜಿ.ಹನುಮಂತರಾಯಪ್ಪ)**
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಗೆ:

1. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ), ಕರ್ನಾಟಕ, ಪಿ.ಬಿ. ನಂ.5329, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು, (ಜಿ & ಎಸ್.ಎಸ್.ಎ), ಕರ್ನಾಟಕ, ಪಿ.ಬಿ.ನಂ.5398, ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು, (ಇ&ಆರ್.ಎಸ್.ಎ), ಕರ್ನಾಟಕ, ಪಿ.ಬಿ. ನಂ.5398, ಬೆಂಗಳೂರು.
4. ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
5. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ., ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7. ಮಾನ್ಯ ಯುವಜನ ಸೇವಾ ಮತ್ತು ಮೀನುಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
8. ಆಂತರಿಕ ಆರ್ಥಿಕ ಸಲಹೆಗಾರರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
10. ಸರ್ಕಾರದ ಉಪ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಆಪ್ತ ಸಹಾಯಕರು.
11. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

# ಏಕಲವ್ಯ ಪ್ರಶಸ್ತಿ ಮಾರ್ಗಸೂಚಿ - 2014

1. ಈ ನಿಯಮಾವಳಿಗಳು ತಕ್ಷಣದಿಂದ ಜಾರಿಗೆ ಬರುತ್ತದೆ.
2. **ಪರಿಭಾಷೆಗಳು** : ಈ ನಿಯಮಾವಳಿಗಳಲ್ಲಿ ಸಂದರ್ಭ ಅನ್ಯತಾ ಅಗತ್ಯ ಪಡಿಸಿದ ಹೊರತು.
   - **ಕ್ರೀಡೆ**:- ಕ್ರೀಡೆ ಅಂದರೆ ಅನುಬಂಧ-1 ರಲ್ಲಿ ಕಾಣಿಸಿರುವ ಕ್ರೀಡೆಗಳು
   - **ಸರ್ಕಾರ**:- ಸರ್ಕಾರ ಅಂದರೆ ಕರ್ನಾಟಕ ಸರ್ಕಾರ
   - **ವರ್ಷ**:- ಕ್ಯಾಲೆಂಡರ್ ವರ್ಷ (ಜನವರಿ 1 ರಿಂದ ಡಿಸೆಂಬರ್-31ರ ವರೆಗೆ)

3. **ಉದ್ದೇಶ**:- ರಾಜ್ಯದಲ್ಲಿ ಕ್ರೀಡೆಯ ಅಭಿವೃದ್ಧಿಗಾಗಿ ಹಾಗೂ ಆಯಾ ಕ್ರೀಡೆಯಲ್ಲಿ ಸಾಧಿಸಿದ ಅತ್ಯುನ್ನತ ಸಾಧನೆಗಳನ್ನು ಗುರುತಿಸಿ ಗೌರವಿಸಿ ಪ್ರೋತ್ಸಾಹಿಸುವುದು.

4. **ಅರ್ಜಿ ಸ್ವೀಕಾರ**:- ಏಕಲವ್ಯ ಪ್ರಶಸ್ತಿಗೆ ಕೆಳಕಾಣಿಸಿದ ಇಲಾಖೆ, ಸಂಘ ಸಂಸ್ಥೆಗಳ ಮೂಲಕ ಸ್ವೀಕರಿಸಲಾಗುವುದು.

   ಅ) ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
   ಆ) ಕರ್ನಾಟಕ ಕ್ರೀಡಾ ಪ್ರಾಧಿಕಾರ
   ಇ) ವಿಶ್ವವಿದ್ಯಾನಿಲಯಗಳು
   ಈ) ಕ್ರೀಡಾ ಸಂಘ ಸಂಸ್ಥೆಗಳು ಅರ್ಹ ಕ್ರೀಡಾಪಟುಗಳ ಹೆಸರುಗಳನ್ನು ಅಗತ್ಯ ದಾಖಲೆಗಳೊಂದಿಗೆ ಶಿಫಾರಸ್ಸು ಮಾಡಬಹುದು.

   ಉ) ನಾಡಿನ ಹೆಸರಾಂತ ಕ್ರೀಡಾಪಟುಗಳ ಸಾಧನೆಯನ್ನು ಸರ್ಕಾರವು ನೇರವಾಗಿ ಗುರುತಿಸಿ ಪ್ರಶಸ್ತಿಗಾಗಿ ಶಿಫಾರಸ್ಸು ಮಾಡಬಹುದು.

5. ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿ ನಿರ್ದೇಶಕರು / ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ನಿಗಧಿತ ದಿನಾಂಕದೊಳಗೆ ಸಲ್ಲಿಸತಕ್ಕದ್ದು

6. ಅನುಬಂಧ-2ರಲ್ಲಿ ಅರ್ಜಿ ನಮೂನೆಯ ಎಲ್ಲಾ ಕಾಲಂಗಳನ್ನು ಕಡ್ಡಾಯವಾಗಿ ತುಂಬತಕ್ಕದ್ದು.

7. ಪ್ರಶಸ್ತಿ ನೀಡುವ ವರ್ಷ ಸೇರಿದಂತೆ 5 ವರ್ಷಗಳ ಕ್ರೀಡಾ ಸಾಧನೆಯ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು.

8. ಅರ್ಜಿ ನಮೂನೆಯೊಂದಿಗೆ ನೀಡಿರುವ ಸ್ವಯಂ ಮೌಲ್ಯಮಾಪನ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಅದರಲ್ಲಿ ಹೆಚ್ಚು ಅಂಕ ಪಡೆಯುವ 3 ಸಾಧನೆಗಳನ್ನು ಪರಿಗಣಿಸ ಲಾಗುವುದು.

9. ಈ ಸ್ವಯಂ ಮೌಲ್ಯಮಾಪನ ಪತ್ರದಲ್ಲಿ ಕ್ರೀಡಾಪಟು ಪ್ರಶಸ್ತಿಗಾಗಿ ದಾಖಲಿಸಿರುವ ಕಳೆದ 5 ವರ್ಷಗಳ ಸಾಧನೆಯನ್ನು ನಮೂದಿಸಿ ಪ್ರಮುಖವಾದ ಮತ್ತು ಹೆಚ್ಚು ಅಂಕಗಳನ್ನು ಪಡೆಯಲು ಅರ್ಹವಾಗುವ 3 ಸಾಧನೆಗಳ ಅಂಕಗಳನ್ನು ಗುರುತಿಸುವುದು.

10. ಆಯ್ಕೆಯ ನಿಯಮ: ಈ ಪ್ರಶಸ್ತಿ ನೀಡಲು ಆಯ್ಕೆ ಸಮಿತಿಯು ಕ್ರೀಡಾಪಟುಗಳು ಸಲ್ಲಿಸಿರುವ ಅರ್ಜಿಯನ್ನು ಪರಿಶೀಲಿಸಿ ನಿರ್ಣಯ ಕೈಗೊಂಡು ಸರ್ಕಾರದ ಅನುಮೋದನೆಗಾಗಿ ಸಲ್ಲಿಸತಕ್ಕದ್ದು.

...4

11. ನಿಯಮ 5ರಲ್ಲಿ ತಿಳಿಸಿರುವಂತೆ ಪ್ರಶಸ್ತಿಗಾಗಿ ಸಲ್ಲಿಸಲಾದ ಅರ್ಜಿಗಳಿಗೆ ಆಯ್ಕೆ ಸಮಿತಿಯ ಶಿಫಾರಸ್ಸಿನ ಮೇಲೆ ಸರ್ಕಾರವು ಈ ಏಕಲವ್ಯ ಪ್ರಶಸ್ತಿಯನ್ನು ಕ್ರೀಡೆಗಳಲ್ಲಿ ಅತ್ಯುನ್ನತ ಸಾಧನೆ ಮಾಡಿರುವ ಕ್ರೀಡಾಪಟುಗಳಿಗೆ ನೀಡತಕ್ಕದ್ದು. ಸರ್ಕಾರದ ತೀರ್ಮಾನವೇ ಅಂತಿಮವಾದದ್ದು. ಈ ಆಯ್ಕೆ ನಿಯಮಗಳ ಅರ್ಥೈಸುವಿಕೆ ಸಂಬಂಧಿಸಿದಂತೆ ಸರ್ಕಾರದ ನಿರ್ಣಯ ಅಂತಿಮ. ಈ ಬಗ್ಗೆ ಮೇಲ್ಮನವಿಗೆ ಅವಕಾಶವಿರುವುದಿಲ್ಲ.

12. **ಅರ್ಹತೆ:** i) ಕಳೆದ 5 ವರ್ಷಗಳ ಕ್ರೀಡಾ ಸಾಧನೆಯನ್ನು ಪರಿಗಣಿಸಲಾಗುವುದು.

ii) ರಾಷ್ಟ್ರ ಮಟ್ಟದ ಕ್ರೀಡಾಕೂಟಗಳಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ ಕ್ರೀಡಾಪಟುಗಳು ಪ್ರಶಸ್ತಿಗೆ ಅರ್ಹರಿರುತ್ತಾರೆ.

iii) ರಾಷ್ಟ್ರ ಮಟ್ಟದ ಕ್ರೀಡೆಗಳಲ್ಲಿ ಕರ್ನಾಟಕವನ್ನು 5 ವರ್ಷ ಪ್ರತಿನಿಧಿಸಿದ ಭಾರತದ ನಿವಾಸಿಯಾದ ಕ್ರೀಡಾಪಟುಗಳು ಪ್ರಶಸ್ತಿಗೆ ಅರ್ಜಿ ಸಲ್ಲಿಸಬಹುದು.

iv) ಕರ್ನಾಟಕದ ನಿವಾಸಿಯಾಗಿದ್ದು, ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾರತವನ್ನು ಪ್ರತಿನಿಧಿಸಿದ ಕ್ರೀಡಾಪಟುಗಳು ಪ್ರಶಸ್ತಿಗೆ ಅರ್ಜಿ ಸಲ್ಲಿಸಬಹುದು. ಇಂತಹ ಸಂದರ್ಭ ದಲ್ಲಿ ಕನಿಷ್ಠ ಒಂದು ವರ್ಷ ರಾಷ್ಟ್ರ ಮಟ್ಟದ ಕ್ರೀಡಾಕೂಟದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿರಲೇಬೇಕು.

v) ಆದರೆ ಕರ್ನಾಟಕದಿಂದ ಯಾವುದೇ ಕ್ರೀಡಾ ತಂಡ ಅಥವಾ ರಾಜ್ಯ ಕ್ರೀಡಾ ಸಂಸ್ಥೆಗಳು ಇಲ್ಲದಿದ್ದಲ್ಲಿ, ಒಂದು ವರ್ಷ ರಾಷ್ಟ್ರ ಮಟ್ಟದ ಕ್ರೀಡಾಕೂಟದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿರಬೇಕು ಎಂಬ ಷರತ್ತು ಅನ್ವಯಿಸುವುದಿಲ್ಲ.

13. **ಪ್ರಶಸ್ತಿ:** ಏಕಲವ್ಯ ಪ್ರಶಸ್ತಿಯು ಏಕಲವ್ಯನ ಕಂಚಿನ ಪ್ರತಿಮೆ, ಪ್ರಮಾಣ ಪತ್ರ, ಸಮವಸ್ತ್ರ, (ಮೈಸೂರು ಸಿಲ್ಕ್ ಸೀರೆ- ಪರ್ಪಲ್ ಕಲರ್, ಬ್ಲೇಜರ್- ಡಾರ್ಕ್ ಕಾಫಿ ಕಲರ್) ಸ್ಟೋಲ್, ನಗದು ಬಹುಮಾನ – ರೂ. 2,00,000/- ಗಳನ್ನು ಒಳಗೊಂಡಿರುತ್ತದೆ. ಪ್ರಶಸ್ತಿ ವಿಜೇತ ಕ್ರೀಡಾಪಟುಗಳಿಗೆ ಆಯಾ ವರ್ಷದ ಆಗಸ್ಟ್ 29ರಂದು ಪ್ರಶಸ್ತಿ ನೀಡಿ ಸನ್ಮಾನಿಸತಕ್ಕದ್ದು.

14. **ಅನರ್ಹತೆ:** i) ನೀಡಲಾದ ದಾಖಲೆಗಳಲ್ಲಿ ತಪ್ಪು ಮಾಹಿತಿಯನ್ನು ನೀಡಿರುವುದು ಗಮನಕ್ಕೆ ಬಂದಲ್ಲಿ ಅಂತಹ ಅರ್ಜಿಗಳನ್ನು ಅನರ್ಹಗೊಳಿಸುವುದರ ಜೊತೆಗೆ ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ಆಜೀವ ನಿಷೇಧ ಹೇರಲಾಗುವುದು ಮತ್ತು ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು.

ii) ಈ ಹಿಂದೆ ಈಗಾಗಲೇ ಈ ಪ್ರಶಸ್ತಿಯನ್ನು ಪಡೆದವರು ಅರ್ಹರಿರುವುದಿಲ್ಲ.

15. ಕ್ರೀಡಾಪಟು ಅರ್ಜಿ ಸಲ್ಲಿಸಿದ ನಂತರ ಮರಣ ಹೊಂದಿದಲ್ಲಿ ಆ ಕ್ರೀಡಾಪಟು ಪ್ರಶಸ್ತಿಗೆ ಅರ್ಹರಾಗಿದ್ದಲ್ಲಿ ಮರಣೋತ್ತರ ಪ್ರಶಸ್ತಿಗೆ ಪರಿಗಣಿಸಲಾಗುವುದು.

16. ಪ್ರಶಸ್ತಿಯನ್ನು ರದ್ದುಗೊಳಿಸುವುದು: ಸರ್ಕಾರವು ನೀಡಲಾದ ಏಕಲವ್ಯ ಪ್ರಶಸ್ತಿಯನ್ನು ಈ ಕೆಳಕಂಡ ಕಾರಣಗಳಿಗಾಗಿ ರದ್ದುಗೊಳಿಸಬಹುದಾಗಿರುತ್ತದೆ.

1) ಸುಳ್ಳು (ನಕಲಿ) ಪ್ರಮಾಣ ಪತ್ರ ಸಲ್ಲಿಸಿರುವುದು ದೃಢಪಟ್ಟಲ್ಲಿ
2) ಯಾವುದೇ ಕಾರಣಕ್ಕೆ ಇವರು ಪ್ರಶಸ್ತಿಗೆ ಅರ್ಹರಾಗಿಲ್ಲದೇ ಇದ್ದಲ್ಲಿ
3) ಪ್ರಶಸ್ತಿಯ ಮಾರ್ಗಸೂಚಿಯನ್ನು ಅನುಸರಿಸದೇ ಇದ್ದ ಪಕ್ಷದಲ್ಲಿ

...5

17. ಪ್ರಶಸ್ತಿಯನ್ನು ಪಡೆಯಲು ನೀಡಬೇಕಾದ ಮಾಹಿತಿಯು ತಪ್ಪಾಗಿದ್ದು ಪ್ರಶಸ್ತಿಯನ್ನು ನೀಡಿದ್ದಲ್ಲಿ ಪ್ರಶಸ್ತಿ ನೀಡಿರುವುದು ತಪ್ಪೆಂದು ತಿಳಿದು ಬಂದಲ್ಲಿ ಪ್ರಶಸ್ತಿಯನ್ನು ಹಿಂದಕ್ಕೆ ಪಡೆಯಲಾಗುವುದು ಹಾಗೂ ಅಂತಹ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು.

18. ನಿಯಮಗಳನ್ನು ತಪ್ಪಾಗಿ ಅರ್ಥೈಸಿಕೊಳ್ಳುವುದು: ನಿಯಮಗಳನ್ನು ತಪ್ಪಾಗಿ ತಿಳಿದು ಕೊಂಡಿದ್ದಲ್ಲಿ, ಈ ಸಂದರ್ಭದಲ್ಲಿ ಸರ್ಕಾರವು ತೆಗೆದುಕೊಳ್ಳುವ ನಿರ್ಧಾರವೇ ಅಂತಿಮವಾಗಿರುತ್ತದೆ. ಇದರ ಬಗ್ಗೆ ಯಾವುದೇ ಮೇಲ್ಮನವಿಯನ್ನು ಪರಿಗಣಿಸಲಾಗುವುದಿಲ್ಲ.

19. **ಪ್ರಶಸ್ತಿಯನ್ನು ಅಂಗೀಕರಿಸುವ ಬಗ್ಗೆ:** ಏಕಲವ್ಯ ಪ್ರಶಸ್ತಿಗಾಗಿ ಶಿಫಾರಸ್ಸು ಮಾಡಿರುವ ಕ್ರೀಡಾಪಟುಗಳು ಈ ಪ್ರಶಸ್ತಿಯ ನೀತಿ ನಿಯಮಗಳನ್ನು ಒಪ್ಪಿಕೊಳ್ಳತಕ್ಕದ್ದು.

20. **ಪ್ರಶಸ್ತಿಯ ಸಂಖ್ಯೆ:** ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ ಪುರುಷ ಹಾಗೂ ಮಹಿಳೆಯರು ಮತ್ತು ಓರ್ವ ಭಿನ್ನಸಾಮರ್ಥ್ಯದ ಕ್ರೀಡಾಪಟು ಸೇರಿದಂತೆ 15 ಕ್ರೀಡಾಪಟುಗಳಿಗೆ ಪ್ರಶಸ್ತಿಯನ್ನು ನೀಡಲಾಗುವುದು. ಸಂಖ್ಯಾ ಮಿತಿ ನಿರ್ಧರಿಸುವುದು ಸರ್ಕಾರದ ತೀರ್ಮಾನಕ್ಕೆ ಒಳಪಟ್ಟಿರುತ್ತದೆ.

21. ಕ್ರೀಡಾಪಟುಗಳ ಆಯ್ಕೆಗೆ ಅನುಬಂಧ-3ರಲ್ಲಿ ನೀಡಿರುವ ಅಂಕದ ಪಟ್ಟಿ ಆಧರಿಸಿ ಮೌಲ್ಯಮಾಪನ ಮಾಡತಕ್ಕದ್ದು. ಮೌಲ್ಯಮಾಪನ ಸಮಯದಲ್ಲಿ ಚೆಸ್, ಟೇಬಲ್ ಟೆನ್ನಿಸ್, ಬ್ಯಾಡ್ಮಿಂಟನ್ ಇತ್ಯಾದಿ ಕ್ರೀಡೆಗಳಲ್ಲಿ ವೈಯಕ್ತಿಕ ಸಾಧನೆಗಳನ್ನು ಮಾತ್ರ ಪರಿಗಣಿಸುವುದು ಹಾಗೂ ರ್ಯಾಂಕಿಂಗ್ ಪಂದ್ಯಾವಳಿಯ ಸಾಧನೆಗಳನ್ನು ಪರಿಗಣಿಸಲಾಗುವುದಿಲ್ಲ.

22. ಪ್ರಶಸ್ತಿಗೆ ಪರಿಗಣಿಸಲಾಗುವ ಕ್ರೀಡಾ ಸಾಧನೆಗಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಪಡೆದ ಕ್ರೀಡಾ ಸಂಸ್ಥೆಗಳು ಆಯೋಜಿಸಿರುವ, ಅನುಬಂಧ-3ರಲ್ಲಿ ಪಟ್ಟಿ ಮಾಡಿರುವ ಕ್ರೀಡಾಕೂಟಗಳಾಗಿದ್ದು, ಇತರೆ ಅಂತರರಾಷ್ಟ್ರೀಯ ಕ್ರೀಡಾ ವಿಭಾಗದಲ್ಲಿ ಕನಿಷ್ಟ 10 ದೇಶಗಳು ಭಾಗವಹಿಸಿದ ಮತ್ತು ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ/ಸಂಬಂಧಪಟ್ಟ ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ನಿಂದ ಕ್ಲಿಯರೆನ್ಸ್ ಪಡೆದ ಕ್ರೀಡಾಕೂಟಗಳಾಗಿರತಕ್ಕದ್ದು.

23. ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ ಕಾಲಕಾಲಕ್ಕೆ ಕ್ರೀಡಾ ಸಂಸ್ಥೆಗಳಿಗೆ ನೀಡುವ ಮಾನ್ಯತೆಗಳನ್ನು ಆಯ್ಕೆ ಸಮಯದಲ್ಲಿ ಪರಿಗಣನೆಗೆ ತೆಗೆದುಕೊಳ್ಳ ಲಾಗುವುದು. ಕ್ರೀಡಾ ಸಂಸ್ಥೆಗಳ ಮಾನ್ಯತೆ ಬಗ್ಗೆ ವಿವಾದಗಳಿದ್ದಲ್ಲಿ, ಕ್ರೀಡಾಪಟುವಿಗೆ ಪ್ರಶಸ್ತಿ ನೀಡುವ ಬಗ್ಗೆ ಸರ್ಕಾರದ ನಿರ್ಣಯವೇ ಅಂತಿಮ.

24. ಏಕಲವ್ಯ ಪ್ರಶಸ್ತಿಗಾಗಿ ಸಲ್ಲಿಸಿರುವ ಎಲ್ಲಾ ದಾಖಲೆಗಳ ಮೇಲೆ ಅರ್ಜಿ ಸಲ್ಲಿಸುತ್ತಿರುವ ಕ್ರೀಡಾಪಟು ಸ್ವತಃ ಕಡ್ಡಾಯವಾಗಿ ಸಹಿ ಮಾಡಿ ದೃಢೀಕರಿಸತಕ್ಕದ್ದು. ಅರ್ಜಿಯ ಪ್ರತಿಯೊಂದು ಪುಟಕ್ಕೆ ಪುಟಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು. ಸ್ವಯಂ ದೃಢೀಕರಣ ವಿಲ್ಲದ ಅರ್ಜಿ ಮತ್ತು ದಾಖಲೆಗಳನ್ನು ತಿರಸ್ಕರಿಸಲಾಗುವುದು.

25. ಮೂರು ಪ್ರಮುಖ ಸಾಧನೆಗಳ ಒಟ್ಟಾರೆ ಅಂಕಗಳನ್ನು ಪರಿಶೀಲನಾ ಸಮಿತಿ ಪರಿಶೀಲಿಸಿ ದೃಢೀಕರಿಸಿದ ನಂತರ ಆಯ್ಕೆ ಸಮಿತಿಯು ಪ್ರಶಸ್ತಿಗೆ ಪರಿಗಣಿಸತಕ್ಕದ್ದು.

26. ಇಬ್ಬರು ಕ್ರೀಡಾಪಟುಗಳು ಸಮಾನ ಅಂಕಗಳನ್ನು ಪಡೆದಲ್ಲಿ ಅನುಬಂಧ-1ರ ಪಟ್ಟಿ-1ರಲ್ಲಿನ ಕ್ರೀಡೆಗಳಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಪ್ರಥಮ ಪ್ರಾಶಸ್ತ್ಯವನ್ನು ಆಯ್ಕೆ ಸಮಿತಿ ನೀಡತಕ್ಕದ್ದು.

...6

27. ಪ್ರಸಕ್ತ ವರ್ಷ ಏಕಲವ್ಯ ಪ್ರಶಸ್ತಿ ನೀಡುವಾಗ ಹಿಂದಿನ ವರ್ಷಗಳಲ್ಲಿ ಏಕಲವ್ಯ ಪ್ರಶಸ್ತಿ ನೀಡಿರುವ ಕ್ರೀಡೆಗಳಿಗೆ ಹೆಚ್ಚು ಒತ್ತುಕೊಡದಿರಲು ಆಯ್ಕೆ ಸಮಿತಿ ಕ್ರಮವಹಿಸತಕ್ಕದ್ದು.

28. ಮಾರ್ಗಸೂಚಿಗಳಲ್ಲಿನ ಯಾವುದಾದರೂ ಕಲಂಗೆ ತಿದ್ದುಪಡಿ ಮಾಡಬೇಕಾದಲ್ಲಿ, ಆಯ್ಕೆ ಸಮಿತಿಯ ಅನುಮೋದನೆಯೊಂದಿಗೆ ಅದನ್ನು ಸಭಾ ನಡವಳಿಯಲ್ಲಿ ದಾಖಲಿಸಿ ಮಾರ್ಪಾಡು ಮಾಡುವ ಅಧಿಕಾರ ಆಯ್ಕೆ ಸಮಿತಿಯ ತೀರ್ಮಾನ ಅಂತಿಮವಾಗಿರುತ್ತದೆ.

29. ಕಾಲಕಾಲಕ್ಕೆ ಸಂಬಂಧಪಟ್ಟ ಕ್ರೀಡಾ ಫೆಡರೇಷನ್‌ಗಳಲ್ಲಿ ತಿದ್ದುಪಡಿ ಮಾಡಿದಲ್ಲಿ ಈ ತಿದ್ದುಪಡಿಗಳ ಅನುಸಾರವಾಗಿ ಅಂಕಗಳನ್ನು ನಿಗಧಿಪಡಿಸಲಾಗುವುದು.

30. **ಪರಿಶೀಲನಾ ಸಮಿತಿ:** 1. ಏಕಲವ್ಯ ಪ್ರಶಸ್ತಿಗಾಗಿ ಸ್ವೀಕರಿಸಲಾದ ಅರ್ಜಿಗಳನ್ನು ಪರಿಶೀಲಿಸಲು ಸರ್ಕಾರವು ನಿರ್ದೇಶಕರು / ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ಪರಿಶೀಲನಾ ಸಮಿತಿ ರಚಿಸತಕ್ಕದ್ದು. ಈ ಸಮಿತಿಯಲ್ಲಿರುವ ಅಧಿಕಾರೇತರ ಸದಸ್ಯರುಗಳ ಅವಧಿ 2 ವರ್ಷಗಳಾಗಿರುತ್ತದೆ.

| | | |
|---|---|---|
| i) | ನಿರ್ದೇಶಕರು/ ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ | – ಅಧ್ಯಕ್ಷರು |
| ii) | ಸರ್ಕಾರದ ಹೆಚ್ಚುವರಿ / ಉಪ / ಜಂಟಿ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ | – ಸದಸ್ಯರು |
| iii) | ಇಬ್ಬರು ಅರ್ಜುನ / ದ್ಯಾನ್‌ಚಂದ್ ಪ್ರಶಸ್ತಿ ಪುರಸ್ಕೃತರು | – ಸದಸ್ಯರು |
| iv) | ಉಪ ನಿರ್ದೇಶಕರು ಕರ್ನಾಟಕ ಕ್ರೀಡಾ ಪ್ರಾಧಿಕಾರ, | – ಸದಸ್ಯರು |
| v) | ಜಂಟಿ ನಿರ್ದೇಶಕರು, ಯುವ ಸಬಲೀಕರಣ ಕ್ರೀಡಾ ಇಲಾಖೆ | – ಸಂಚಾಲಕರು |

2. ಆಯಾ ಕ್ರೀಡೆಯ ಇಬ್ಬರು ನಿವೃತ್ತ / ಹಿರಿಯ ಕ್ರೀಡಾಪಟುಗಳನ್ನು ಪರಿಶೀಲನಾ ಸಮಿತಿ ಸಮಯದಲ್ಲಿ ಅಗತ್ಯತೆ ಕಂಡುಬಂದಾಗ ಆಹ್ವಾನಿಸಿ ಸಲಹೆ ಪಡೆಯಬಹುದು. ಈ ಆಹ್ವಾನಿತರ ನೇಮಕವನ್ನು ನಿರ್ದೇಶಕರು / ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಸೂಕ್ತ ಆದೇಶವನ್ನು ಹೊರಡಿಸತಕ್ಕದ್ದು. ಈ ಆಹ್ವಾನಿತರು ನೀಡುವ ಸಲಹೆಯನ್ನು ದಾಖಲಿಸತಕ್ಕದ್ದು. ಆದರೆ ಅಂತಿಮ ನಿರ್ಧಾರ ಪರಿಶೀಲನಾ ಸಮಿತಿಯ ಸದಸ್ಯರದೇ ಆಗಿರತಕ್ಕದ್ದು.

31. ಏಕಲವ್ಯ ಪ್ರಶಸ್ತಿಯ ಆಯ್ಕೆಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ಆಯ್ಕೆ ಸಮಿತಿ ರಚಿಸತಕ್ಕದ್ದು. ಈ ಸಮಿತಿಯಲ್ಲಿರುವ ಅಧಿಕಾರೇತರ ಸದಸ್ಯರುಗಳ ಅವಧಿ 2 ವರ್ಷಗಳಾಗಿರುತ್ತದೆ.

| | | |
|---|---|---|
| 1) | ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು | – ಅಧ್ಯಕ್ಷರು |
| 2) | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ | – ಉಪಾಧ್ಯಕ್ಷರು |
| 3) | ಅಧ್ಯಕ್ಷರು,ಕರ್ನಾಟಕ ರಾಜ್ಯ ಒಲಂಪಿಕ್ ಸಂಸ್ಥೆ, ಬೆಂಗಳೂರು | – ಸದಸ್ಯರು |
| 4) | ಆಯುಕ್ತರು / ನಿರ್ದೇಶಕರು, ಅಂಗವಿಕಲ ಕಲ್ಯಾಣ ಇಲಾಖೆ, ಬೆಂಗಳೂರು | – ಸದಸ್ಯರು |
| 5) | ಪ್ರಾದೇಶಿಕ ನಿರ್ದೇಶಕರು, ಭಾರತೀಯ ಕ್ರೀಡಾ ಪ್ರಾಧಿಕಾರ | – ಸದಸ್ಯರು |
| 6) | ಇಬ್ಬರು ಅರ್ಜುನ್ / ದ್ಯಾನ್‌ಚಂದ್ ಪ್ರಶಸ್ತಿ ಪುರಸ್ಕೃತರು | – ಸದಸ್ಯರು |
| 7) | ನಿರ್ದೇಶಕರು/ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ | – ಸದಸ್ಯ ಸಂಚಾಲಕರು |

ಅನುಬಂಧ–1

ಏಕಲವ್ಯ ಪ್ರಶಸ್ತಿಗೆ ಪರಿಗಣಿಸಲಾಗುವ ಕ್ರೀಡೆಗಳ ವಿವರ:

| ಪಟ್ಟಿ– ಎ (ಒಲಂಪಿಕ್ ಕ್ರೀಡೆಗಳು) | ಪಟ್ಟಿ–ಬಿ ( ಒಲಂಪಿಕೇತರ ಕ್ರೀಡೆಗಳು) |
|---|---|
| 1. ಅಥ್ಲೆಟಿಕ್ಸ್. | 1. ಬಾಡಿ ಬಿಲ್ಡಿಂಗ್ |
| 2. ಆರ್ಚರಿ | 2. ಬಿಲಿಯರ್ಡ್ಸ್ |
| 3. ಬ್ಯಾಡ್ಮಿಂಟನ್ | 3. ಬಾಲ್ ಬ್ಯಾಡ್ಮಿಂಟನ್ |
| 4. ಬಾಸ್ಕೆಟ್‌ಬಾಲ್ | 4. ಚೆಸ್ |
| 5. ಬಾಕ್ಸಿಂಗ್ | 5. ಕ್ರಿಕೆಟ್ (ಪುರುಷ ಮತ್ತು ಮಹಿಳೆ) |
| 6. ಸೈಕ್ಲಿಂಗ್ | 6. ಖೋ–ಖೋ |
| 7. ಫುಟ್‌ಬಾಲ್ | 7. ಕಬಡ್ಡಿ |
| 8. ಜಿಮ್ನಾಸ್ಟಿಕ್ | 8. ಪವರ್ ಲಿಫ್ಟಿಂಗ್ |
| 9. ಹಾಕಿ (ಪುರುಷ ಮತ್ತು ಮಹಿಳೆ) | 9. ಸ್ಕೇಟಿಂಗ್ |
| 10. ಹ್ಯಾಂಡ್‌ಬಾಲ್ | 10. ಯೋಗ |
| 11. ಜುಡೋ | 11. ಸ್ಪೋರ್ಟ್ಸ್ ಕ್ಲೈಂಬಿಂಗ್ ( ವಾಲ್ ಕ್ಲೈಂಬಿಂಗ್) |
| 12. ಶೂಟಿಂಗ್ | 12. ನೆಟ್ ಬಾಲ್ |
| 13. ರೋಯಿಂಗ್ | 13. ಥ್ರೋಬಾಲ್ |
| 14. ಈಜು (ಡೈವಿಂಗ್ ಸೇರಿ) | 14. ಸ್ಕ್ವಾಷ್ |
| 15. ಲಾನ್ ಟೆನ್ನಿಸ್ | |
| 16. ಟೇಕ್ವಾಂಡೋ | |
| 17. ಟ್ರಯಥ್ಲಾನ್ | |
| 18. ವಾಲಿಬಾಲ್ | |
| 19. ಭಾರ ಎತ್ತುವಿಕೆ | |
| 20. ಫೆನ್ಸಿಂಗ್ | |
| 21. ಈಕ್ವೆಸ್ಟ್ರೀಯನ್ | |
| 22. ವಾಟರ್ ಸ್ಪೋರ್ಟ್ಸ್ (ಕಯಾಕಿಂಗ್, ಕೆನೋಯಿಂಗ್ ಮತ್ತು ಸೇಲಿಂಗ್) | |
| 23. ರಗ್ಬಿ | |
| 24. ಕುಸ್ತಿ | |
| 25. ಗಾಲ್ಫ್ | |
| 26. ಟೇಬಲ್ ಟೆನ್ನಿಸ್ | |

24/8/2015

(ಜಿ.ಹನುಮಂತರಾಯಪ್ಪ)

ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಅನುಬಂಧ-2

ಕರ್ನಾಟಕ ಸರ್ಕಾರ

## 2014ನೇ ಸಾಲಿನ ಏಕಲವ್ಯ ಪ್ರಶಸ್ತಿಯ ಅರ್ಜಿ ನಮೂನೆ

ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ

| | | |
|---|---|---|
| 1 | ಕ್ರೀಡಾಪಟುವಿನ ಹೆಸರು | |
| 2 | ತಂದೆಯ ಹೆಸರು | |
| 3 | ಪುರುಷ / ಮಹಿಳೆ | |
| 4 | ಹುಟ್ಟಿದ ದಿನಾಂಕ | |
| 5 | ಸಾಧನೆ ಮಾಡಿದ ಕ್ರೀಡೆಯ ಹೆಸರು (ಅನುಬಂಧ-2ನ್ನು ಗಮನಿಸುವುದು) | |
| 6 | ವಿಳಾಸ: | |
| | (ಅ) ಖಾಯಂ ವಿಳಾಸ | |
| | (ಬ) ಪ್ರಸ್ತುತ ವಿಳಾಸ | |
| 7 | ದೂರವಾಣಿ ಸಂಖ್ಯೆ: | |
| | (ಅ) ಕಚೇರಿ | |
| | (ಬ) ಮನೆ | |
| 8 | ನೀವು ಉದ್ಯೋಗಸ್ಥರಾಗಿದ್ದರೆ ಉದ್ಯೋಗದ ಹೆಸರು ಮತ್ತು ವಿಳಾಸ ನೀವು ವಿದ್ಯಾರ್ಥಿಯಾಗಿದ್ದಲ್ಲಿ ಕಾಲೇಜಿನ ಪೂರ್ಣ ವಿಳಾಸ | |
| 9 | ವಿದ್ಯಾರ್ಹತೆ | |
| 10 | ನೀವು ಯಾವುದೇ ರಾಜ್ಯದ / ರಾಷ್ಟ್ರ ಪ್ರಶಸ್ತಿಯನ್ನು ಪಡೆದಿದ್ದರೆ ಅದರ ಪೂರ್ಣ ವಿವರ | |
| 11 | ನೀವು ಸಾಧನೆ ಮಾಡಿದ ಕ್ರೀಡೆಯ ಭಾವಚಿತ್ರ ಹಾಗೂ ಸರ್ಟಿಫಿಕೇಟ್‌ನ್ನು ಲಗತ್ತಿಸುವುದು. | |

ಮೇಲೆ ನೀಡಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿದೆಯೆಂದು ಮತ್ತು ಒದಗಿಸಿರುವ ಎಲ್ಲಾ ದಾಖಲೆಗಳು ಮೂಲ ದಾಖಲೆಗಳ ನೈಜ ಪ್ರತಿಗಳೆಂದು ಪ್ರಮಾಣೀಕರಿಸುತ್ತೇನೆ.

ಸಹಿ:

ಹೆಸರು:

ವಿಳಾಸ:

## 01-01-2010 ರಿಂದ 31-12-2014 ರವರೆಗೆ ಕ್ರೀಡಾ ಸಾಧನೆಯ ಬಗ್ಗೆ

## ಪೂರ್ಣ ವಿವರ

(ದೃಢೀಕರಿಸಿದ ಪ್ರಮಾಣಪತ್ರ ಲಗತ್ತಿಸುವುದು)

## ರಾಷ್ಟ್ರ ಮಟ್ಟ (ಕರ್ನಾಟಕವನ್ನು ಪ್ರತಿನಿಧಿಸಿದ್ದರೆ ಮಾತ್ರ)

| ಭಾಗವಹಿಸಿದ ವರ್ಷ | ಕ್ರೀಡಾಕೂಟ ನಡೆದ ಸ್ಥಳ | ಕ್ರೀಡಾಕೂಟ ನಡೆದ ದಿನಾಂಕ | ಭಾಗವಹಿಸುವಿಕೆ/ ಪದಕ | ಷರಾ |
|---|---|---|---|---|
| 2010 | | | | |
| 2011 | | | | |
| 2012 | | | | |
| 2013 | | | | |
| 2014 | | | | |

ಅಂತರರಾಷ್ಟ್ರೀಯ ಮಟ್ಟ

| ಭಾಗವಹಿಸಿದ ವರ್ಷ | ಕ್ರೀಡಾಕೂಟ ನಡೆದ ಸ್ಥಳ | ಕ್ರೀಡಾಕೂಟ ನಡೆದ ದಿನಾಂಕ | ಭಾಗವಹಿಸುವಿಕೆ / ಪದಕ | ಷರಾ |
|---|---|---|---|---|
| 2010 | | | | |
| 2011 | | | | |
| 2012 | | | | |
| 2013 | | | | |
| 2014 | | | | |

## ಸ್ವಯಂ ಮೌಲ್ಯಮಾಪನ

| ಭಾಗವಹಿಸಿದ ವರ್ಷ | ಕ್ರೀಡಾಕೂಟ ನಡೆದ ಸ್ಥಳ | ಕ್ರೀಡಾಕೂಟ ನಡೆದ ದಿನಾಂಕ | ಸಾಧನೆಯ ವಿವರ | ಅಂಕದ ಪಟ್ಟಿಯ ಪ್ರಕಾರ ದೊರೆಯುವ ಅಂಕ |
|---|---|---|---|---|
| | | | | |
| | | | | |
| | | | | |
| ಒಟ್ಟು ಅಂಕ | | | | |

## ದೃಢೀಕರಣ

ನಾನು______________________ಕೊಟ್ಟಿರುವ ಮಾಹಿತಿಗಳು ಪೂರ್ಣವಾಗಿ ಸತ್ಯವಾದುದೆಂದು ದೃಢೀಕರಿಸುತ್ತೇನೆ.

ಕ್ರೀಡಾಪಟುವಿನ ಸಹಿ:

ಹೆಸರು:

ಸ್ಥಳ:

ದಿನಾಂಕ:

## ಅನುಬಂಧ-3

### ಅಂಕ ಪಟ್ಟಿ

### ಅಂತರರಾಷ್ಟ್ರೀಯ- (ವೈಯಕ್ತಿಕ ಮತ್ತು ಗುಂಪು ಕ್ರೀಡೆಗಳು)

| ಕ್ರ.ಸ | ಸ್ಪರ್ಧೆಗಳು | ಚಿನ್ನ | ಬೆಳ್ಳಿ | ಕಂಚು | ಭಾಗವಹಿಸುವಿಕೆ |
|---|---|---|---|---|---|
| 1 | ಒಲಂಪಿಕ್ಸ್ | 150 | 100 | 80 | 100 |
| 2 | ವರ್ಲ್ಡ್ ಕಪ್/ ವರ್ಲ್ಡ್ ಚಾಂಪಿಯನ್‌ಷಿಪ್ಸ್ | 100 | 90 | 70 | 90 |
| 3 | ಏಷ್ಯನ್ ಗೇಮ್ಸ್ | 90 | 80 | 60 | 80 |
| | ಕಾಮನ್ ವೆಲ್ತ್ ಗೇಮ್ಸ್ | 80 | 70 | 50 | 70 |
| 4 | ಏಷ್ಯನ್ ಚಾಂಪಿಯನ್‌ಷಿಪ್ | 70 | 60 | 45 | 60 |
| 5 | ಕಾಮನ್‌ವೆಲ್ತ್ ಚಾಂಪಿಯನ್‌ಷಿಪ್ಸ್ | 60 | 50 | 40 | 50 |
| 6 | ಎಸ್‌ಎಎಲ್‌ಆರ್‌ಸಿ/ ಎಸ್‌ಎಎಫ್/ ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ಸ್/ಡೇವಿಸ್ ಕಪ್/ ವರ್ಲ್ಡ್ ಯೂನಿವರ್ಸಿಟಿ / ಏಷಿಯನ್ ಸ್ಕೂಲ್ ಗೇಮ್ಸ್ | 55 | 45 | 35 | 30 |
| 7 | ವಿಂಬಲ್ಡನ್/ಯುಎಸ್ ಓಪನ್/ಫ್ರೆಂಚ್ ಓಪನ್/ಆಸ್ಟ್ರೇಲಿಯನ್ ಓಪನ್ | 50 | 40 | 35 | 30 |
| 8 | ಇತರೆ (ಕಿರಿಯರ ಕ್ರೀಡೆಗಳು ಸೇರಿದಂತೆ) | 45 | 35 | 30 | 25 |

ರಾಷ್ಟ್ರೀಯ- (ವೈಯಕ್ತಿಕ ಮತ್ತು ಗುಂಪು ಕ್ರೀಡೆಗಳು)

| ಕ್ರ.ಸ | ಸ್ಪರ್ಧೆಗಳು | ಚಿನ್ನ | ಬೆಳ್ಳಿ | ಕಂಚು | ಭಾಗವಹಿಸುವಿಕೆ |
|---|---|---|---|---|---|
| 1 | ನ್ಯಾಷನಲ್ ಗೇಮ್ಸ್ | 40 | 30 | 20 | 30 |
| 2 | ಹಿರಿಯರ ನ್ಯಾಷನಲ್ ಚಾಂಪಿಯನ್‌ಷಿಪ್ (ಇಂಟರ್ ಸ್ಟೇಟ್ / ಫೆಡರೇಷನ್ ಕಪ್/ ಇಂಟರ್ ಜೋನಲ್) | 30 | 20 | 15 | 25 |
| 3 | ಆಲ್ ಇಂಡಿಯಾ ಇಂಟರ್ ಯೂನಿವರ್ಸಿಟಿ | 20 | 15 | 10 | 5 |
| 4 | ಜೂನಿಯನ್ ನ್ಯಾಷನಲ್ (ಆಲ್ ಇಂಡಿಯಾ ರೂರಲ್ ನ್ಯಾಷನಲ್ಸ್/ ವಿಮೆನ್ಸ್ ನ್ಯಾಷನಲ್ಸ್/ ಅಂಗೀಕೃತ ಕ್ರೀಡಾ ಫೆಡರೇಷನ್ ಮತ್ತು ನ್ಯಾಷನಲ್ ಸ್ಕೂಲ್ ಗೇಮ್ಸ್ ನಡೆಸುವ ಯು/19 & ಯು/16, ಕ್ರೀಡೆಗಳು) | 10 | 8 | 5 | 3 |

ಜಿ. ಹನುಮಂತರಾಯಪ್ಪ 24/8/2015

(ಜಿ.ಹನುಮಂತರಾಯಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕ್ರೀಡಾ ಕ್ಷೇತ್ರದಲ್ಲಿ ಜೀವನ ಪರ್ಯಂತ ಸಾಧನೆ ಮಾಡಿದ ಹಿರಿಯ ಕ್ರೀಡಾಪಟು / ತರಬೇತುದಾರರಿಗೆ "ಜೀವಮಾನ ಶ್ರೇಷ್ಠ ಸಾಧನೆ ಪ್ರಶಸ್ತಿ" ನೀಡುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಡಿವೈಇಎಸ್/ಕ್ರೀಕಪಂ/38/ಕ್ರೀಜೀಪಸಾಧ/2009-10, ದಿನಾಂಕ: 24-11-2009 ಮತ್ತು 23-03-2010.

******

**ಪ್ರಸ್ತಾವನೆ:**

ಮೇಲೆ ಓದಲಾದ ಉಲ್ಲೇಖಿತ ಪತ್ರಗಳಲ್ಲಿ, ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಇವರು ಕ್ರೀಡಾ ಕ್ಷೇತ್ರದಲ್ಲಿ ಕ್ರೀಡಾಪಟುವಾಗಿ, ತರಬೇತುದಾರರಾಗಿ ನಿರಂತರ ಸೇವೆ ಸಲ್ಲಿಸಿ ಸಾಧನೆ ಮಾಡಿದಂತಹ ಹಿರಿಯ ಕ್ರೀಡಾಪಟು / ಹಿರಿಯ ತರಬೇತುದಾರರನ್ನು ಗುರುತಿಸಿ, ಪ್ರತಿ ವರ್ಷ ಓರ್ವ ಹಿರಿಯ ಕ್ರೀಡಾಪಟು / ತರಬೇತುದಾರರಿಗೆ "ಕ್ರೀಡಾ ಕ್ಷೇತ್ರದಲ್ಲಿ ಜೀವನ ಪರ್ಯಂತ ಸಾಧನೆ ಪ್ರಶಸ್ತಿ" ಯನ್ನು ನೀಡುವ ಸಂಬಂಧ ಭಾರತ ಸರ್ಕಾರದಲ್ಲಿರುವ ದ್ರೋಣಾಚಾರ್ಯ ಪ್ರಶಸ್ತಿ ಆಧಾರದಂತೆ ಕರ್ನಾಟಕ ರಾಜ್ಯದಲ್ಲಿಯು ಸಹ ಒಂದು ಪ್ರತ್ಯೇಕ ನಿಯಮಾವಳಿ ರೂಪಿಸುವ ಸಂಬಂಧ ನಿಯಮಾವಳಿಗಳನ್ನು ತಯಾರಿಸಿ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಶಸ್ತಿಯು ರೂ. 1.00 ಲಕ್ಷ ನಗದು ಪುರಸ್ಕಾರ ಹಾಗೂ ಪ್ರಶಸ್ತಿ ಪ್ರಮಾಣ ಪತ್ರ ಒಳಗೊಂಡಿದ್ದು, ಸದರಿ ಪ್ರಶಸ್ತಿಗೆ ಏಕಲವ್ಯ ಪ್ರಶಸ್ತಿಗೆ ಅರ್ಜಿಗಳನ್ನು ಆಹ್ವಾನಿಸುವ ರೀತಿ ಯಲ್ಲಿಯೇ ಅರ್ಜಿ ಆಹ್ವಾನಿಸುವುದಾಗಿ ಹಾಗೂ ಏಕಲವ್ಯ ಆಯ್ಕೆ ಸಮಿತಿ ಅಧ್ಯಕ್ಷರು/ಸದಸ್ಯರು ಗಳೇ "ಜೀವನ ಪರ್ಯಂತ ಸಾಧನೆ ಪ್ರಶಸ್ತಿ ಆಯ್ಕೆ ಸಮಿತಿ"ಯನ್ನು ನಡೆಸಲಾಗುವುದೆಂದು ನಿರ್ದೇಶಕರು ತಿಳಿಸಿ, ಸದರಿ ಯೋಜನೆಯಡಿ ಪ್ರತಿ ವರ್ಷ ಓರ್ವ ಅರ್ಹ ತರಬೇತುದಾರ ರನ್ನು ಆಯ್ಕೆ ಮಾಡಿ ಪ್ರಶಸ್ತಿ ಪ್ರದಾನ ಮಾಡುವುದಲ್ಲದೇ, ಸದರಿ ವೆಚ್ಚವನ್ನು ಲೆಕ್ಕಶೀರ್ಷಿಕೆ 2204-00-104-0-02-015 ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹದಡಿ ಒದಗಿಸಿರುವ ಅನುದಾನದಲ್ಲಿ ಭರಿಸಲಾಗುವುದಾಗಿ ತಿಳಿಸಿರುತ್ತಾರೆ.

ತರಬೇತುದಾರರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡೆಗಳಲ್ಲಿ ಭಾಗವಹಿಸಿ, ಪದಕ ವಿಜೇತರಾಗಿ ರಾಜ್ಯಕ್ಕೆ ಕೀರ್ತಿ ತಂದ ಕ್ರೀಡಾಪಟುಗಳನ್ನು ತಯಾರಿಸಿದಂತಹ ತರಬೇತುದಾರರಿಗೆ "ಕ್ರೀಡಾ ಕ್ಷೇತ್ರದಲ್ಲಿ ಜೀವನ ಪರ್ಯಂತ ಸಾಧನೆ ಪ್ರಶಸ್ತಿ" ಯನ್ನು ನೀಡಲು ಮಾರ್ಗಸೂಚಿಗಳನ್ನು ಅಳವಡಿಸಿ ಸರ್ಕಾರಿ ಆದೇಶ ಹೊರಡಿಸುವಂತೆ ನಿರ್ದೇಶಕರು ಸರ್ಕಾರವನ್ನು ಕೋರಿರುತ್ತಾರೆ.

ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 357 ಯುಸೇಕ್ರೀ 2009,**

**ಬೆಂಗಳೂರು, ದಿನಾಂಕ: 17-04-2010**

ಕ್ರೀಡಾ ಕ್ಷೇತ್ರದಲ್ಲಿ ಕ್ರೀಡಾಪಟುವಾಗಿ, ತರಬೇತುದಾರರಾಗಿ ನಿರಂತರ ಸೇವೆ ಸಲ್ಲಿಸಿ ಸಾಧನೆ ಮಾಡಿದಂತಹ ಹಿರಿಯ ಕ್ರೀಡಾಪಟು/ಹಿರಿಯ ತರಬೇತುದಾರರನ್ನು ಗುರ್ತಿಸಿ, ಪ್ರತಿವರ್ಷ

ಇಬ್ಬರೂ ಹಿರಿಯ ಕ್ರೀಡಾಪಟು / ತರಬೇತುದಾರರಿಗೆ "ಕ್ರೀಡಾ ಕ್ಷೇತ್ರದಲ್ಲಿ ಜೀವನ ಪರ್ಯಂತ ಸಾಧನೆ ಪ್ರಶಸ್ತಿ"ಯನ್ನು ನೀಡಲು ಸರ್ಕಾರವು ತೀರ್ಮಾನಿಸಿ ಆದೇಶಿಸಿದೆ.

ಸದರಿ ಪ್ರಶಸ್ತಿಯು ರೂ. 1.00 ಲಕ್ಷ ನಗದು ಪುರಸ್ಕಾರ ಹಾಗೂ ಪ್ರಶಸ್ತಿ ಪ್ರಮಾಣ ಪತ್ರ ಒಳಗೊಂಡಿರುತ್ತದೆ. ಈ ಪ್ರಶಸ್ತಿಗೆ ಏಕಲವ್ಯ ಪ್ರಶಸ್ತಿಗೆ ಅರ್ಜಿಗಳನ್ನು ಆಹ್ವಾನಿಸುವ ರೀತಿಯಲ್ಲಿಯೇ ಅರ್ಜಿ ಆಹ್ವಾನಿಸುವುದಲ್ಲದೇ, ಏಕಲವ್ಯ ಆಯ್ಕೆ ಸಮಿತಿ ಅಧ್ಯಕ್ಷರು/ಸದಸ್ಯರುಗಳೇ "ಜೀವನ ಪರ್ಯಂತ ಸಾಧನೆ ಪ್ರಶಸ್ತಿ ಆಯ್ಕೆ ಸಮಿತಿ"ಯಲ್ಲಿರುತ್ತಾರೆ. ಸದರಿ ಪ್ರಶಸ್ತಿಯನ್ನು ಭಾರತ ಸರ್ಕಾರದಲ್ಲಿರುವ ದ್ರೋಣಾಚಾರ್ಯ ಪ್ರಶಸ್ತಿ ಆಧಾರದಂತೆ ಕರ್ನಾಟಕ ರಾಜ್ಯದಲ್ಲಿ ಸಹ ಒಂದು ಪ್ರತ್ಯೇಕ ನಿಯಮಾವಳಿಗಳನ್ನು ಸಿದ್ಧಪಡಿಸಿದ್ದು, ಅದನ್ನು ಅನುಬಂಧದಲ್ಲಿ ನಮೂದಿಸಿದೆ.

ಸದರಿ ವೆಚ್ಚವನ್ನು ಲೆಕ್ಕಶೀರ್ಷಿಕೆ 2204-00-104-0-02-015 ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹದಡಿ ಒದಗಿಸಿರುವ ಅನುದಾನದಡಿಯಲ್ಲಿ ಭರಿಸತಕ್ಕದ್ದು.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಐಎಫ್‌ಡಿ 01 ಟಿಎಫ್‌ಪಿ 2008, ದಿನಾಂಕ: 16-05-2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರದತ್ತವಾದ ಅಧಿಕಾರ ದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

S. M. Gangadhar

(ಎಸ್.ಎಂ.ಗಂಗಾಧರ್)
ಪೀಠಾಧಿಕಾರಿ
ಯುವಜನ ಸೇವಾ ಇಲಾಖೆ

17/4/10

ಗೆ,

1) ಮಹಾಲೇಖಪಾಲರು, (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು.
3) ಎಲ್ಲಾ ಜಿಲ್ಲಾಧಿಕಾರಿಗಳಿಗೆ (ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ಇವರ ಮುಖಾಂತರ).
4) ಉಪ ನಿರ್ದೇಶಕರು, ಟಿಪಿಎಸ್‌ಎಂಸಿ., ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
5) ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6) ಆಂತರಿಕ ಆರ್ಥಿಕ ಸಲಹೆಗಾರರು,ಯುವಜನ ಸೇವಾ ಇಲಾಖೆ, ಬ.ಮ.ಕಟ್ಟಡ,ಬೆಂಗಳೂರು.
7) ಮಾನ್ಯ ಸಚಿವರ,ಯುವಜನಸೇವಾ ಮತ್ತು ಕ್ರೀಡಾ ಸಚಿವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
8) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-7/8), ವಿಧಾನಸೌಧ, ಬೆಂಗಳೂರು.
9) ಸರ್ಕಾರದ ಕಾರ್ಯದರ್ಶಿಗಳು, ಯುವಜನ ಸೇವಾ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
10)ಸರ್ಕಾರದ ಅಪರ ಕಾರ್ಯದರ್ಶಿ, ಯುವಜನ ಸೇವಾ ಇಲಾಖೆ ಇವರ ಆಪ್ತ ಸಹಾಯಕರು.
11)ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು.

ಸರ್ಕಾರಿ ಆದೇಶ ಸಂಖ್ಯೆ ಯುಸೇಇ 357 ಯುಸೇಕ್ರೀ 2009,

ಬೆಂಗಳೂರು, ದಿನಾಂಕ: 17-04-2010ಕ್ಕೆ.

## ಅನುಬಂಧ

### ಕ್ರೀಡಾ ಕ್ಷೇತ್ರದಲ್ಲಿ ಜೀವನ ಪರ್ಯಂತ ಸಾಧನೆ ಪ್ರಶಸ್ತಿಗೆ ಅನುಸರಿಸಬೇಕಾದ ಮಾರ್ಗ ಸೂಚಿಗಳು

ಪೀಠಿಕೆ:

ಈ ಯೋಜನೆಯು ಕ್ರೀಡಾ ಕ್ಷೇತ್ರದಲ್ಲಿ ನಿರಂತರ ಸೇವೆ ಗೈದ ಹಾಗೂ ಸಾಧನೆ ಮಾಡಿದಂತೆ ತರಬೇತುದ್ದಾರರಿಗೆ ಜೀವಮಾನ ಶ್ರೇಷ್ಠಸಾಧನೆ ಪ್ರಶಸ್ತಿ.

ಉದ್ದೇಶ:

ಕ್ರೀಡಾ ಕ್ಷೇತ್ರಕ್ಕೆ ತರಬೇತುದಾರರು ರಾಷ್ಟ್ರೀಯ /ಅಂತರಾಷ್ಟ್ರೀಯ ಕ್ರೀಡೆಗಳಲ್ಲಿ ರಾಜ್ಯ/ರಾಷ್ಟ್ರಕ್ಕೆ ಕೀರ್ತಿ ತಂದು ನಿರಂತರವಾಗಿ ಕ್ರೀಡಾ ಕ್ಷೇತ್ರದ ಅಭಿವೃದ್ಧಿಗಾಗಿ ನಿರಂತರ ಶ್ರಮಿಸುತ್ತಿರುವ ತರಬೇತುದ್ದಾರರನ್ನು ಗುರುತಿಸಿ ಗೌರವಿಸುವುದು.

1) ಈ ಪ್ರಶಸ್ತಿಗೆ ಅರ್ಜಿ ಸಲ್ಲಿಸುವವರು ಕ್ರೀಡಾ ಕ್ಷೇತ್ರದಲ್ಲಿ ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಕ್ರೀಡೆಗಳಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸುವ ಕ್ರೀಡಾಪಟುಗಳನ್ನು ಕೊಡುಗೆಯಾಗಿ ನೀಡಿ ಈ ಕ್ರೀಡಾ ಕ್ಷೇತ್ರದಲ್ಲಿ ನಿರಂತರ ಸೇವೆ ಸಲ್ಲಿಸುತ್ತಿರಬೇಕು.

2) ತರಬೇತಿದಾರರು ನಾಯಕತ್ವದ ಗುಣ ಕ್ರೀಡಾ ಮನೋಭಾವ ಮತ್ತು ಶಿಸ್ತು ಬದ್ಧ ಜೀವನಕ್ಕೆ ಮಾದರಿಯಾಗಿರಬೇಕು.

3) ಜೀವನ ಪರ್ಯಂತ ಸಾಧನೆ ಪ್ರಶಸ್ತಿಗೆ ಕರ್ನಾಟಕ ಒಲಂಪಿಕ್ ಸಂಸ್ಥೆ, ವಿವಿಧ ಕ್ರೀಡೆ ರಾಜ್ಯ ಸಂಸ್ಥೆಗಳು, ಸಹಾಯಕ ನಿರ್ದೇಶಕರುಗಳು ಶಿಫಾರಸ್ಸು ಮಾಡಬಹುದಾಗಿದೆ ಹಾಗೂ ಪ್ರಶಸ್ತಿಗೆ ಅರ್ಜಿಸಲ್ಲಿಸುವರು ಕರ್ನಾಟಕದವರೆ ಆಗಿರಬೇಕು.

4) ಪ್ರತಿ ವರ್ಷ ಒರ್ವ ಅರ್ಹ ತರಬೇತಿದಾರರಿಗೆ ಮಾತ್ರ ಜೀವನ ಪರ್ಯಂತ ಸಾಧನೆ ಪ್ರಶಸ್ತಿ ನೀಡಲಾಗುವುದು ಹಾಗೂ ಆಯ್ಕೆಯ ಅಂತಿಮ ನಿರ್ಧಾರ ರಾಜ್ಯ ಸರ್ಕಾರದ ಆಯ್ಕೆ ಸಮಿತಿಯದಾಗಿರುತ್ತದೆ.

5) ಆಯ್ಕೆಯದ ತರಬೇತಿದಾರರಿಗೆ ರೂ. 1 ಲಕ್ಷ ನಗದು ಬಹುಮಾನ, ರೂ. 25,000/- ಗಳಿಗೆ ಒಳಪಟ್ಟು ನೆನಪಿನ ಕಾಣಿಕೆ, ಶಾಲು, ಪ್ಯಾಂಟು, ಶರ್ಟು, ಟೈ, ಬ್ಲೇಜರ್, ಶೂ, ಅಥವಾ ಚಪ್ಪಲ್, ಪ್ರಶಸ್ತಿ ಪತ್ರ ಮಹಿಳೆಯರಿಗೆ ಶಾರಿ, ಬ್ಲೇಜರ್, ಚಪ್ಪಲ್, (ಪ್ರಶಸ್ತಿಗೆ ಸಂಬಂಧಪಟ್ಟಂತೆ ಸಮವಸ್ತ್ರ) ನೀಡಿ ಸನ್ಮಾನಿಸಲಾಗುವುದು.

6) ಈ ಪ್ರಶಸ್ತಿಗೆ ಏಕಲವ್ಯ ಪ್ರಶಸ್ತಿಗೆ ಅರ್ಜಿಗಳನ್ನು ಆಹ್ವಾನಿಸುವ ರೀತಿಯಲ್ಲಿಯೇ ಅರ್ಜಿ ಆಹ್ವಾನಿಸಲಾಗುವುದು ಹಾಗೂ ಏಕಲವ್ಯ ಆಯ್ಕೆ ಸಮಿತಿ ಅಧ್ಯಕ್ಷರು/ ಸದಸ್ಯರುಗಳು ಜೀವನ ಪರ್ಯಂತ ಸಾಧನೆ ಪ್ರಶಸ್ತಿ ಆಯ್ಕೆ ಸಮಿತಿ ನಡೆಸುವುದು.

7) ಕ್ರೀಡಾ ಕ್ಷೇತ್ರದಲ್ಲಿ ಜೀವನ ಪರ್ಯಂತ ಸಾಧನೆ ಪ್ರಶಸ್ತಿಗೆ ಪ್ರಶಸ್ತಿ ಅರ್ಜಿ ಕರ್ನಾಟಕ ಕ್ರೀಡಾ ಪ್ರಾಧಿಕಾರದ ಮುಂಖಾತರ ಪ್ರತಿ ವರ್ಷ ಅರ್ಜಿಗಳನ್ನು ಆಹ್ವಾನಿಸಲಾಗುವುದು.

...2

8) ರಾಷ್ಟ್ರೀಯ / ಅಂತರ್‌ರಾಷ್ಟ್ರೀಯ/ ಏಕಲವ್ಯ/ ಧ್ಯಾನಚಂದ್ /ಅರ್ಜುನ್ ಪ್ರಶಸ್ತಿ ವಿಜೇತರಾದಂತಹ ಕ್ರೀಡಾಪಟುಗಳನ್ನು ತರಬೇತಿಗೊಳಿಸಿದ ಕರ್ನಾಟಕದ ತರಬೇತುದಾರರು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

9) ರಾಷ್ಟ್ರೀಯ /ಅಂತರ್‌ರಾಷ್ಟ್ರೀಯ ಕ್ರೀಡೆಗಳು ನಡೆದ ಸಂದರ್ಭದಲ್ಲಿ ಕ್ರೀಡಾಪಟು / ತರಬೇತುದಾರರು ಮಾದಕ ವಸ್ತುಗಳ ಸೇವನೆಯ ಅಪರಾದವೆಸಗಿದ್ದಲ್ಲಿ ಈ ಪ್ರಶಸ್ತಿಗೆ ಅರ್ಹರಾಗಿರುವುದಿಲ್ಲ.

10) ಈ ಪ್ರಶಸ್ತಿಗೆ ತರಬೇತುದಾರರು ಅರ್ಹತೆಯನ್ನು ಪರಿಗಣಿಸುವಾಗ ಈ ಕೆಳಕಂಡ ಅಂಶಗಳನ್ನು ಪರಿಗಣಿಸಲ್ಪಾಗುವುದು.

ಅ) ತರಬೇತುದಾರರು ತಮ್ಮ ತರಬೇತಿ ಅವದಿಯಲ್ಲಿ ರಾಷ್ಟ್ರೀಯ / ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಪದಕ ವಿಜೇತರಾದ ಕ್ರೀಡಾಪಟುಗಳನ್ನು ಬೆಳೆಸಿರಬೇಕು.

ಆ) ಅಂತರ್‌ರಾಷ್ಟ್ರೀಯ ಮಟ್ಟದ ಕ್ರೀಡೆಗಳಾದ ಒಲಂಪಿಕ್ ಕ್ರೀಡೆಗಳು, ವಿಶ್ವ ಚಾಂಪಿಯನ್, ವಿಶ್ವ ಕಪ್ ಕ್ರೀಡೆಗಳಲ್ಲಿ ಭಾಗವಹಿಸಿ ಕರ್ನಾಟಕವನ್ನು ಪ್ರತಿನಿಧಿಸಿ ಪದಕ ವಿಜೇತರಾದ ಕ್ರೀಡಾಪಟುಗಳಿಗೆ ತರಬೇತಿ ನೀಡಿದ ಸಾಧನೆಯಾಗಿರಬೇಕು.

ಇ) ಗುಂಪು ಕ್ರೀಡೆಗಳಲ್ಲಿ ತರಬೇತುದಾರರು ರಾಷ್ಟ್ರೀಯ / ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ ಕರ್ನಾಟಕವನ್ನು ಪ್ರತಿನಿಧಿಸಿ ಪದಕ ವಿಜೇತರಾದ ಕ್ರೀಡಾಪಟುಗಳಿಗೆ ತರಬೇತಿ ನೀಡಿದ ಸಾಧನೆ ಪರಿಗಣಿಸಲಾಗುವುದು.

S.G. Gangadhar

(ಎಸ್.ಜಿ.ಗಂಗಾಧರ್)

ಮೇಲಾಧಿಕಾರಿ

ಯುವಜನ ಸೇವಾ ಇಲಾಖೆ

17/4/10

— H — X

...ವನ ಪರ್ಯಂತ ಸಾಧನೆ ಮಾಡಿದ ಹಿರಿಯ ತರಬೇತುದಾರರು / ಕ್ರೀಡಾಪಟುಗಳಿಗೆ "ಜೀವನ ಪರ್ಯಂತ ಸಾಧನೆ ಪ್ರಶಸ್ತಿಗೆ" ಆಯ್ಕೆ ಮಾಡಲು ಪರಿಗಣಿಸಬೇಕಾದ ಅಂಕಪಟ್ಟಿ

| ಕ್ರ.ಸ | ಕ್ರೀಡಾ ವಿವರ<br>ಅಂತರ್‌ರಾಷ್ಟ್ರೀಯ ಮಟ್ಟದ ಸ್ಪರ್ಧೆಗಳು | ಕ್ರೀಡಾಪಟುವಾಗಿ ಮಾಡಿದ ಸಾಧನೆ | | | | ತರಬೇತುದಾರರಾಗಿ ತರಬೇತಿ ನೀಡಿದ ಕ್ರೀಡಾಪಟುಗಳ ಸಾಧನೆ | | | | ತಂಡದ ತರಬೇತುದಾರರಾಗಿ ಸ್ಪರ್ಧೆಗಳಲ್ಲಿ ಗಳಿಸಿದ ಸಾಧನೆ | | | |
|---|---|---|---|---|---|---|---|---|---|---|---|---|---|
| | | ಬಾ | ಚಿ | ಬೆ | ಕ | ಬಾ | ಚಿ | ಬೆ | ಕ | ಬಾ | ಚಿ | ಬೆ | ಕ |
| 1 | ಒಲಂಪಿಕ್ಸ್ | 100 | 100 | 80 | 60 | 100 | 150 | 100 | 50 | 50 | 60 | 50 | 40 |
| 2 | ವಿಶ್ವಕಪ್ / ವಿಶ್ವ ಚಾಂಪಿಯನ್ ಶೀಪ್ | 80 | 80 | 60 | 50 | 80 | 100 | 80 | 60 | 40 | 50 | 40 | 30 |
| 3 | ಏಷಿಯನ್ ಗೇಮ್ಸ್/ಚಾಂಪಿಯನ್ ಶೀಪ್ | 60 | 60 | 50 | 40 | 60 | 80 | 70 | 60 | 30 | 40 | 30 | 20 |
| 4 | ಕಾಮನ್‌ವೆಲ್ತ್ ಗೇಮ್ಸ್ | 50 | 50 | 40 | 30 | 50 | 60 | 50 | 40 | 25 | 30 | 25 | 20 |
| 5 | ಸಾರ್ಕ್ / ಸ್ಯಾಫ್ ಗೇಮ್ಸ್ | 30 | 40 | 30 | 25 | 40 | 50 | 40 | 30 | 20 | 25 | 20 | 15 |
| 6 | ಇತರೆ (ಜೂನಿಯರ್ ಒಳಗೊಂಡತೆ) | 20 | 25 | 20 | 15 | 30 | 40 | 30 | 20 | 15 | 20 | 15 | 10 |

ರಾಷ್ಟ್ರ ಮಟ್ಟದ ಸ್ಪರ್ಧೆಗಳು

| | | | | | | | | | | | | | |
|---|---|---|---|---|---|---|---|---|---|---|---|---|---|
| | ನ್ಯಾಷನಲ್ ಚಾಂಪಿಯನ್ ಶೀಪ್ (ಇಂಟರ್ ಸ್ಟೇಟ್ / ಫೆಡರೇಷನ್ ಕಪ್ / ನ್ಯಾಷನಲ್ ಗೇಮ್ಸ್ / ಇಂಟರ್ ಝೋನಲ್ | 20 | 20 | 15 | 10 | 30 | 30 | 20 | 10 | 15 | 20 | 15 | 10 |

ಮಾರ್ಗಸೂಚಿಗಳನ್ನು ಅಳವಡಿಸಿ ಸರ್ಕಾರಿ ಆದೇಶ ಹೊರಡಿಸುವಂತೆ ನಿರ್ದೇಶನ... [illegible]

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ 2014-15ನೇ ಸಾಲಿನ ನೂತನ ಯೋಜನೆಯಾದ "ಕರ್ನಾಟಕ ಕ್ರೀಡಾ ರತ್ನ" ಪ್ರಶಸ್ತಿಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: 1) ದಿನಾಂಕ: 21-08-2013ರಂದು ಮಾನ್ಯ ಯುವಜನ ಸೇವಾ ಮತ್ತು ಮೀನುಗಾರಿಕೆ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಏಕಲವ್ಯ ಹಾಗೂ ಜೀವಮಾನ ಸಾಧನೆ ಪ್ರಶಸ್ತಿ ಆಯ್ಕೆ ಸಮಿತಿ ಸಭೆಯ ನಡವಳಿ.

2) ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪತ್ರ ಸಂಖ್ಯೆ: ಡಿವೈಎಸ್/ಕ್ರೀಕಪಂ/11/2014-15, ದಿ: 12-05-2014 ಮತ್ತು 28-07-2014.

******

ಪ್ರಸ್ತಾವನೆ:

ಮೇಲೆ ಓದಲಾದ ಉಲ್ಲೇಖ(1)ರ ನಡವಳಿಯಲ್ಲಿ, ಮಾನ್ಯ ಯುವಜನ ಸೇವಾ ಮತ್ತು ಮೀನುಗಾರಿಕೆ ಸಚಿವರು ಕರ್ನಾಟಕದಲ್ಲಿ ಗ್ರಾಮೀಣ ಕ್ರೀಡಾ ಪ್ರತಿಭೆಗಳಿಗೆ ಏಕಲವ್ಯ ಪ್ರಶಸ್ತಿ ಮಾದರಿಯಲ್ಲಿಯೇ ಪ್ರೋತ್ಸಾಹ ನೀಡುವುದು ಇಲಾಖೆಯ ಕರ್ತವ್ಯವಾಗಿರುತ್ತದೆಯೆಂದು ತಿಳಿಸಿ, ಜನಪದ ಕ್ರೀಡೆಗಳಾದ ಕಂಬಳ, ಕುಸ್ತಿ, ಆಟ್ಯಾ-ಪಾಟ್ಯ ಇತ್ಯಾದಿ ಕ್ರೀಡೆಗಳಲ್ಲಿ ಕೀರ್ತಿ ಗಳಿಸಿದವರನ್ನು ಗುರುತಿಸಿ ಪ್ರೋತ್ಸಾಹಿಸಲು ಮಾರ್ಗಸೂಚಿ ಸೂತ್ರಗಳನ್ನು ರಚಿಸಲು ಸಭಾಧ್ಯಕ್ಷರು ಪ್ರಧಾನ ಕಾರ್ಯದರ್ಶಿಯವರಿಗೆ ಸೂಚಿಸಿದ್ದು, ಅದರಂತೆ "ಕರ್ನಾಟಕ ಕ್ರೀಡಾ ರತ್ನ" ಪ್ರಶಸ್ತಿಯ ಅನುಷ್ಠಾನಕ್ಕಾಗಿ ಮಾರ್ಗಸೂಚಿಗಳನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿರುವುದಲ್ಲದೇ ಈ ಪ್ರಶಸ್ತಿಯ ಆಯ್ಕೆಗಾಗಿ ಪರಿಶೀಲನಾ ಸಮಿತಿ ಮತ್ತು ಆಯ್ಕೆ ಸಮಿತಿ ರಚಿಸಿ ಅನುಮೋದನೆ ನೀಡುವಂತೆ ಉಲ್ಲೇಖ(2)ರ ಪತ್ರಗಳಲ್ಲಿ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಸರ್ಕಾರವನ್ನು ಕೋರಿರುತ್ತಾರೆ.

ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

### ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 270 ಯುಸೇಕ್ರೀ 2014,

### ಬೆಂಗಳೂರು, ದಿನಾಂಕ: 13-08-2014

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ 2014-15ನೇ ಸಾಲಿನ ನೂತನ ಯೋಜನೆಯಾದ "ಕರ್ನಾಟಕ ಕ್ರೀಡಾ ರತ್ನ" ಪ್ರಶಸ್ತಿಯನ್ನು ಅನುಷ್ಠಾನಗೊಳಿಸಲು ಈ ಆದೇಶದ ಜೊತೆಯಲ್ಲಿ ಲಗತ್ತಿಸಿರುವ ಮಾರ್ಗಸೂಚಿ, ಷರತ್ತು ಮತ್ತು ನಿಬಂಧನೆಗಳು, ಅನುಬಂಧ-1ರಲ್ಲಿ ನಮೂದಿಸಿರುವ ಅರ್ಜಿ ನಮೂನೆ ಮತ್ತು ಅನುಬಂಧ-2ರಲ್ಲಿ

ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಗಾಗಿ ಸ್ವೀಕರಿಸಲಾದ ಅರ್ಜಿಗಳನ್ನು ಪರಿಶೀಲಿಸಲು ಆಯುಕ್ತರು/ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಪರಿಶೀಲನಾ ಸಮಿತಿಯನ್ನು ಹಾಗೂ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ ಆಯ್ಕೆಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಲು ಪ್ರತ್ಯೇಕವಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

ಈ ನೂತನ ಯೋಜನೆಯಾದ "ಕರ್ನಾಟಕ ಕ್ರೀಡಾ ರತ್ನ" ಪ್ರಶಸ್ತಿಯ ಅನುಷ್ಠಾನಕ್ಕಾಗಿ ಹೆಚ್ಚುವರಿ ಅನುದಾನ ಒದಗಿಸಲಾಗದು. ಇದನ್ನು ಇಲಾಖೆಗೆ ಒದಗಿಸಿರುವ ಅನುದಾನದಿಂದಲೇ ಸರಿದೂಗಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

13/8/14
(ವಿ. ರಾಮಕೃಷ್ಣಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಗೆ,

1) ಮಹಾಲೇಖಪಾಲರು, (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು.
3) ಉಪ ನಿರ್ದೇಶಕರು, ಟಿಎನ್‌ಎಂಸಿ., ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
4) ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5) ಆಂತರಿಕ ಆರ್ಥಿಕ ಸಲಹೆಗಾರರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬ.ಮ.ಕಟ್ಟಡ, ಬೆಂಗಳೂರು.
6) ಸರ್ಕಾರದ ಅಧೀನ ಕಾರ್ಯದರ್ಶಿ,ಆರ್ಥಿಕ ಇಲಾಖೆ (ವೆಚ್ಚ-7),ವಿಧಾನಸೌಧ, ಬೆಂಗಳೂರು
7) ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
8) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
9) ಸರ್ಕಾರದ ಉಪ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಆಪ್ತ ಸಹಾಯಕಿ
10) ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು.

4

ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 270 ಯುಸೇಕ್ರೀ 2014, ಬೆಂಗಳೂರು,

ದಿನಾಂಕ: 13-08-2014ಕ್ಕೆ ಅನುಬಂಧ

<><><><>

## ಗ್ರಾಮೀಣ ಕ್ರೀಡಾ ಪ್ರತಿಭೆಗಳಿಗೆ ಉತ್ತೇಜನ ನೀಡುವ ಯೋಜನೆಯಾದ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ ಮಾರ್ಗಸೂಚಿಗಳು

1. ಪ್ರಸ್ತಾವನೆ:

ಕರ್ನಾಟಕ ರಾಜ್ಯದ ಗ್ರಾಮೀಣ ಕ್ರೀಡೆಗಳಿಗೆ ಮತ್ತು ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ 2014-15ನೇ ಸಾಲಿನಿಂದ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು.

2. ಉದ್ದೇಶ:

ರಾಜ್ಯದಲ್ಲಿ ಗ್ರಾಮೀಣ ಕ್ರೀಡೆಯ ಅಭಿವೃದ್ಧಿಗಾಗಿ ಸ್ಥಳೀಯ ಮತ್ತು ಪಾರಂಪರಿಕ ಕ್ರೀಡೆಗಳಲ್ಲಿ ಸಾಧಿಸಿದ ಅತ್ಯುತ್ತಮ ಸಾಧನೆಗಳನ್ನು ಗುರುತಿಸಿ ಪ್ರಶಸ್ತಿ ನೀಡಿ ಪ್ರೋತ್ಸಾಹಿಸಲಾಗುವುದು.

3. ಪರಿಭಾಷೆ:

ಈ ಮಾರ್ಗಸೂಚಿಗಳಲ್ಲಿ ಸಂದರ್ಭ ಅನ್ಯಥಾ ಅಗತ್ಯಪಡಿಸಿದ ಹೊರತು

ಅ) ಕ್ರೀಡೆ: ಅನುಬಂಧ-2ರಲ್ಲಿ ಕಾಣಿಸಿರುವ ಕ್ರೀಡೆಗಳು

ಆ) ಸರ್ಕಾರ: ಕರ್ನಾಟಕ ಸರ್ಕಾರ

ಇ) ಇಲಾಖೆ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಈ) ವರ್ಷ: ಕ್ಯಾಲೆಂಡರ್ ವರ್ಷ: ಜನವರಿ 1ರಿಂದ ಡಿಸೆಂಬರ್ 31ರ ವರೆಗೆ

ಉ) ಪ್ರಶಸ್ತಿ: ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ

ಊ) ಸಮಿತಿ: ಕರ್ನಾಟಕ ಕ್ರೀಡಾ ರತ್ನ ಆಯ್ಕೆ ಸಮಿತಿ/ಪರಿಶೀಲನಾ ಸಮಿತಿ

4. ಅರ್ಜಿ ಸಲ್ಲಿಸುವ ವಿಧಾನ:

ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಗೆ ಈ ಕೆಳಕಾಣಿಸಿದ ಇಲಾಖೆ, ಸಂಘ-ಸಂಸ್ಥೆಗಳ ಮೂಲಕ ಅರ್ಜಿ ಸ್ವೀಕರಿಸಲಾಗುವುದು

ಅ) ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಆ) ಕರ್ನಾಟಕ ಕ್ರೀಡಾ ಪ್ರಾಧಿಕಾರ

ಇ) ಕ್ರೀಡಾ ಸಂಘ/ಸಂಸ್ಥೆಗಳು

5. ಅರ್ಜಿ ಸಲ್ಲಿಸುವ ವಿಧಾನ:

5.1 ಅರ್ಜಿಗಳನ್ನು ನಿಗಧಿತ ನಮೂನೆಯಲ್ಲಿ ನಿರ್ದೇಶಕರು/ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ನಿಗಧಿತ ದಿನಾಂಕದೊಳಗೆ ಸಲ್ಲಿಸತಕ್ಕದ್ದು.

5.2 ಅನುಬಂಧ-1ರಲ್ಲಿ ಅರ್ಜಿ ನಮೂನೆಯ ಎಲ್ಲಾ ಕಾಲಂಗಳನ್ನು ಕಡ್ಡಾಯವಾಗಿ ತುಂಬತಕ್ಕದ್ದು.

5.3 ಖೋ-ಖೋ, ಥ್ರೋಬಾಲ್, ಆಟ್ಯಾಪಾಟ್ಯಾ, ಮಲ್ಲಕಂಬ ಕ್ರೀಡೆಗಳಿಗೆ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕ್ರೀಡೆಗಳಲ್ಲಿ ಪ್ರಶಸ್ತಿ ನೀಡುವ ವರ್ಷ ಸೇರಿದಂತೆ 5 ವರ್ಷಗಳ ಕ್ರೀಡಾ ಸಾಧನೆಯ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

5.4 ಯೋಗ, ಕುಸ್ತಿ ಮತ್ತು ಕಬ್ಬಡ್ಡಿ ಕ್ರೀಡೆಗಳಿಗೆ ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದ ಕ್ರೀಡೆಗಳಲ್ಲಿ ಪ್ರಶಸ್ತಿ ನೀಡುವ ವರ್ಷ ಸೇರಿದಂತೆ 5 ವರ್ಷಗಳ ಕ್ರೀಡಾ ಸಾಧನೆಯ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

5.5 ಮಲ್ಲಕಂಬ, ಗುಂಡು ಎತ್ತುವುದು ದೊಣ್ಣೆವರಸೆ ಮುಂತಾದ ಸ್ಥಳೀಯ ಗ್ರಾಮೀಣ ಕ್ರೀಡೆಗಳಲ್ಲಿ ಭಾಗವಹಿಸಿದ ಬಗ್ಗೆ ಪ್ರಮಾಣ ಪತ್ರ, ಪ್ರಶಸ್ತಿ ಪತ್ರ, ಛಾಯಾಚಿತ್ರ, ಪೇಪರ್ ಕಟಿಂಗ್, ಕ್ರೀಡೆ ನಡೆದ ದಿನಾಂಕ, ಸ್ಥಳ ಮತ್ತು ಸಾಧನೆಗಳನ್ನು ಸ್ಥಳೀಯ ಕ್ರೀಡಾಕೂಟ ಸಂಘಟಕರಿಂದ ದೃಢೀಕರಿಸಿ ಸಲ್ಲಿಸತಕ್ಕದ್ದು.

5.6. ಅರ್ಜಿ ನಮೂನೆಯೊಂದಿಗೆ ನೀಡಿರುವ ಸ್ವಯಂ ಮೌಲ್ಯಮಾಪನ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

5.7 ಈ ಸ್ವಯಂ ಮೌಲ್ಯಮಾಪನ ಪತ್ರದಲ್ಲಿ ಕ್ರೀಡಾಪಟು ಪ್ರಶಸ್ತಿಗಾಗಿ ದಾಖಲಿಸಿರುವ ಕಳೆದ 5 ವರ್ಷಗಳಲ್ಲಿ ಪ್ರಮುಖ 3 ಸಾಧನೆಗಳ ವಿವರಗಳನ್ನು ತುಂಬಿ ನಿಗಧಿತ ಅಂಕಗಳನ್ನು ಗುರುತಿಸುವುದು.

6. ಅರ್ಹತೆ:

6.1 ಖೋ-ಖೋ, ಥ್ರೋಬಾಲ್, ಆಟ್ಯಾಪಾಟ್ಯಾ, ಮಲ್ಲಕಂಬ ಕ್ರೀಡೆಗಳಿಗೆ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕ್ರೀಡೆಗಳಲ್ಲಿ ಪ್ರಶಸ್ತಿ ನೀಡುವ ವರ್ಷ ಸೇರಿದಂತೆ 5 ವರ್ಷಗಳ ಕ್ರೀಡಾ ಸಾಧನೆಯನ್ನು ಪರಿಗಣಿಸಲಾಗುವುದು

6.2 ಯೋಗ, ಕುಸ್ತಿ ಮತ್ತು ಕಬ್ಬಡ್ಡಿ ಕ್ರೀಡೆಗಳಿಗೆ ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದ ಕ್ರೀಡೆಗಳಲ್ಲಿ ಪ್ರಶಸ್ತಿ ನೀಡುವ ವರ್ಷ ಸೇರಿದಂತೆ 5 ವರ್ಷಗಳ ಕ್ರೀಡಾ ಸಾಧನೆಯನ್ನು ಪರಿಗಣಿಸಲಾಗುವುದು

6.3 ಅಂಗೀಕೃತ ಕ್ರೀಡಾ ಫೆಡರೇಷನ್‌ಗಳಿಲ್ಲದ ಗ್ರಾಮೀಣ ಕ್ರೀಡೆಗಳಲ್ಲಿ ಭಾಗವಹಿಸಿ ಸಾಧನೆ ಮಾಡಿದ ಕ್ರೀಡಾಪಟುಗಳ 5 ವರ್ಷದ ಸಾಧನೆಯನ್ನು ಪರಿಗಣಿಸಲಾಗುವುದು

6.4 ಭಿನ್ನಸಾಮರ್ಥ್ಯದ ಕ್ರೀಡಾಪಟುಗಳು ಕಳೆದ 5 ವರ್ಷಗಳಲ್ಲಿ ರಾಜ್ಯವನ್ನು ಪ್ರತಿನಿಧಿಸಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ [illegible]

3



6.5 ಈ ಹಿಂದೆ ಏಕಲವ್ಯ ಪ್ರಶಸ್ತಿಗಳನ್ನು ಪಡೆದವರು ಈ ಪ್ರಶಸ್ತಿಯನ್ನು ಪಡೆಯಲು ಅರ್ಹರಿರುವುದಿಲ್ಲ.

6.6 ಕರ್ನಾಟಕ ನಿವಾಸಿಗಳಲ್ಲದ ಹಾಗೂ ರಾಜ್ಯವನ್ನು ಪ್ರತಿನಿಧಿಸದೇ ಇರುವ ಕ್ರೀಡಾಪಟುಗಳು ಈ ಪ್ರಶಸ್ತಿಗೆ ಅರ್ಹರಾಗಿರುವುದಿಲ್ಲ.

6.7 ಕ್ರಿಮಿನಲ್ ಹಿನ್ನೆಲೆ ಇಲ್ಲ ಎಂಬ ಬಗ್ಗೆ ಪೋಲಿಸ್ ವೆರಿಫಿಕೇಷನ್ ಸರ್ಟಿಫಿಕೇಟ್ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

7. ಪ್ರಶಸ್ತಿ: ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಯು ಪ್ರಮಾಣ ಪತ್ರ, ಪ್ರಶಸ್ತಿ ಫಲಕ, ಸಮವಸ್ತ್ರ, ರೂ. 1.00 ಲಕ್ಷಗಳ ನಗದು ಬಹುಮಾನ ಒಳಗೊಂಡಿರುತ್ತದೆ.

8. ಅನರ್ಹತೆ: ನೀಡಲಾದ ದಾಖಲೆಗಳಲ್ಲಿ ತಪ್ಪು ಮಾಹಿತಿ ನೀಡಿರುವುದು ಗಮನಕ್ಕೆ ಬಂದಲ್ಲಿ ಅಂತಹ ಅರ್ಜಿಗಳನ್ನು ಅನರ್ಹಗೊಳಿಸಲಾಗುವುದು ಹಾಗೂ ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು.

9. ಕ್ರೀಡಾಪಟು ಅರ್ಜಿ ಸಲ್ಲಿಸಿದ ನಂತರ ಮರಣ ಹೊಂದಿದಲ್ಲಿ ಆ ಕ್ರೀಡಾಪಟು ಪ್ರಶಸ್ತಿಗೆ ಅರ್ಹರಾಗಿದ್ದಲ್ಲಿ ಮರಣೋತ್ತರ ಪ್ರಶಸ್ತಿಗೆ ಪರಿಗಣಿಸಲಾಗುವುದು

10. ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿಯನ್ನು ಈ ಕೆಳಕಂಡ ಕಾರಣಗಳಿಗಾಗಿ ರದ್ದುಗೊಳಿಸಬಹುದಾಗಿರುತ್ತದೆ.

- ಅ) ಸುಳ್ಳು (ನಕಲಿ) ಪ್ರಮಾಣ ಪತ್ರ ಅಥವಾ
- ಆ) ಯಾವುದೇ ಕಾರಣಕ್ಕೂ ಇವರು ಪ್ರಶಸ್ತಿಗೆ ಅರ್ಹರಾಗಿಲ್ಲದೇ ಇದ್ದಲ್ಲಿ
- ಇ) ಪ್ರಶಸ್ತಿಯ ಮಾರ್ಗಸೂಚಿಯನ್ನು ಅನುಸರಿಸದೇ ಇದ್ದ ಪಕ್ಷದಲ್ಲಿ
- ಈ) ನ್ಯಾಯಾಲಯದ ಆದೇಶ ಇದ್ದಲ್ಲಿ
- ಉ) ಪ್ರಶಸ್ತಿಯನ್ನು ನೀಡಬೇಕಾದ ಮಾಹಿತಿಯು ತಪ್ಪಾಗಿದ್ದು ಪ್ರಶಸ್ತಿಯನ್ನು ನೀಡಿದ್ದಲ್ಲಿ ಪ್ರಶಸ್ತಿ ನೀಡಿರುವುದು ತಪ್ಪೆಂದು ಕಂಡು ಬಂದಲ್ಲಿ ಪ್ರಶಸ್ತಿಯನ್ನು ಹಿಂದಕ್ಕೆ ಪಡೆಯಲಾಗುವುದು ಹಾಗೂ ಅಂತಹ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು.

11. ಪ್ರಶಸ್ತಿಗಾಗಿ ಶಿಫಾರಸ್ಸು ಮಾಡಿರುವ ಕ್ರೀಡಾಪಟುಗಳು ಈ ಪ್ರಶಸ್ತಿಯ ನೀತಿ ನಿಯಮಗಳನ್ನು ಒಪ್ಪಿಕೊಳ್ಳತಕ್ಕದ್ದು.

12. ಪ್ರಶಸ್ತಿಯ ಸಂಖ್ಯೆ: ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ ಪುರುಷ ಹಾಗೂ ಮಹಿಳೆಯರು ಮತ್ತು ಓರ್ವ ವಿಕಲಚೇತನ ಕ್ರೀಡಾಪಟು ಸೇರಿದಂತೆ ಪ್ರತಿ ಕ್ರೀಡೆಗೆ ಒಂದರಂತೆ (ವಿಶಿಷ್ಟ ಕ್ರೀಡೆಗಳಲ್ಲಿ ವರ್ಷಕ್ಕೆ 3 ಪ್ರಶಸ್ತಿ) 15 ಕ್ರೀಡಾಪಟುಗಳಿಗೆ ಮಾತ್ರ ಪ್ರಶಸ್ತಿಯನ್ನು ನೀಡತಕ್ಕದ್ದು.

ಕ್ರೀಡೆಯಲ್ಲಿ ಪ್ರತಿ ವರ್ಷ 3 ಪ್ರಶಸ್ತಿಯನ್ನು ನೀಡತಕ್ಕದ್ದು. ಆಯಾ ಕ್ರೀಡೆಯಲ್ಲಿ ಯಾವುದೇ ಅರ್ಹ ಕ್ರೀಡಾಪಟು ಇಲ್ಲದಿದ್ದಲ್ಲಿ ಆ ಕ್ರೀಡೆಗೆ ಬದಲಾಗಿ ಬೇರೆ ಕ್ರೀಡೆಯನ್ನು ಪರಿಗಣಿಸತಕ್ಕದ್ದಲ್ಲ.

ಖೋ-ಖೋ ಥ್ರೋಬಾಲ್, ಕಬ್ಬಡ್ಡಿ, ಕ್ರೀಡೆಗಳಿಗೆ ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದ ಸಾಧನೆಗಳನ್ನು ಪರಿಗಣಿಸಲಾಗುವುದು.

ಆಟ್ಯಾ-ಪಾಟ್ಯಾ ಮಲ್ಲಕಂಬ, ಮಟ್ಟಿ ಕುಸ್ತಿ/ಜಂಗಿ ಕುಸ್ತಿ ಕ್ರೀಡೆಗಳಲ್ಲಿ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಸಾಧನೆಗಳನ್ನು ಪರಿಗಣಿಸಲಾಗುವುದು.

ಮಲ್ಲಕಂಬ, ಗುಂಡು ಎತ್ತುವುದು, ದೊಣ್ಣೆ ವರಸೆ ಮುಂತಾದ ಸ್ಥಳೀಯ ಜನಪ್ರಿಯ ಗ್ರಾಮೀಣ ಕ್ರೀಡೆಗಳಿಗೆ ಐದು ವರ್ಷಗಳ ಸಾಧನೆಯನ್ನು ಪರಿಗಣಿಸಲಾಗುವುದು.

(ವಿ. ರಾಮಕೃಷ್ಣಯ್ಯ) 8/8/14
ಸರ್ಕಾರದ ಅಧೀನ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

## ಅನುಬಂಧ-2

ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಗೆ ಪರಿಗಣಿಸಲಾಗುವ ಕ್ರೀಡೆಗಳ ಪಟ್ಟಿ

1. ಖೋ-ಖೋ
2. ಕಬಡ್ಡಿ
3. ಥ್ರೋಬಾಲ್
4. ಅಟ್ಯಾ-ಪಾಟ್ಯಾ
5. ಮಲ್ಲಕಂಬ
6. ಬಾಲ್ ಬ್ಯಾಡ್ಮಿಂಟನ್
7. ಯೋಗ
8. ಗುಂಡು ಎತ್ತುವುದು
9. ದೊಣ್ಣೆ ವರಸೆ
10. ಮಟ್ಟಿ ಕುಸ್ತಿ / ಜಂಗಿ ಕುಸ್ತಿ
11. ಟೆನ್ನಿಕಾಯ್ಟ್
12. ಕೇರಂ
13. ವಿಶಿಷ್ಟ ಕ್ರೀಡೆಗಳಲ್ಲಿ ಸಾಧನೆ (ಸಾಂಸ್ಕೃತಿಕ ಮತ್ತು ಜಾನಪದ)

(ವಿ. ರಾಮಕೃಷ್ಣಯ್ಯ) 1/8/14
ಸರ್ಕಾರದ ಅಧೀನ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕ್ರೀಡಾಶಾಲೆ ಹಾಗೂ ಕ್ರೀಡಾ ನಿಲಯಗಳ ಕ್ರೀಡಾಪಟುಗಳು ರಾಷ್ಟ್ರ ಮಟ್ಟ ಹಾಗೂ ಅಂತರ್ ರಾಷ್ಟ್ರ ಮಟ್ಟದ ಪಂದ್ಯಾವಳಿಗಳಲ್ಲಿ ಪ್ರಥಮ/ದ್ವಿತೀಯ/ತೃತೀಯ ಸ್ಥಾನಗಳನ್ನು ಪಡೆಯುವವರಿಗೆ ಮತ್ತು ಅವರನ್ನು ತರಬೇತಿಗೊಳಿಸಿದ ತರಬೇತುದಾರರಿಗೆ ನೀಡುತ್ತಿರುವ ಕ್ರೀಡಾ ಉತ್ತೇಜನ ಬಹುಮಾನದ ಮೊತ್ತವನ್ನು ಹೆಚ್ಚಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 330 ಯುಸೇಕ್ರೀ 2009, ದಿನಾಂಕ: 18-01-2010.

2) ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಡಿವೈಇಎಸ್/ಎಸ್ಎಸ್ಹೆಚ್/139/2013-14, ದಿನಾಂಕ: 30-10-2013.

******

ಪ್ರಸ್ತಾವನೆ:

ಮೇಲೆ ಓದಲಾದ ಉಲ್ಲೇಖ (1)ರ ಆದೇಶದಲ್ಲಿ, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಕ್ರೀಡಾಶಾಲೆ ಹಾಗೂ ಕ್ರೀಡಾ ನಿಲಯಗಳ ಕ್ರೀಡಾಪಟುಗಳು ರಾಷ್ಟ್ರ ಮಟ್ಟ ಹಾಗೂ ಅಂತರರಾಷ್ಟ್ರ ಮಟ್ಟದ ಪಂದ್ಯಾವಳಿಗಳಲ್ಲಿ ಪ್ರಥಮ / ದ್ವಿತೀಯ / ತೃತೀಯ ಸ್ಥಾನಗಳನ್ನು ಪಡೆಯುವವರಿಗೆ ಮತ್ತು ಅವರನ್ನು ತರಬೇತಿಗೊಳಿಸಿದ ತರಬೇತುದಾರರಿಗೆ ಉತ್ತೇಜನ ನೀಡುವ ಸಲುವಾಗಿ ನಗದು ಬಹುಮಾನವನ್ನು ಈ ಕೆಳಗೆ ಸೂಚಿಸಿರುವಂತೆ ನೀಡಲು ಅನುಮೋದನೆ ನೀಡಿ ಆದೇಶಿಸಿದೆ.

| ಕ್ರ. ಸಂ. | ಸ್ಥಾನ | ರಾಷ್ಟ್ರ ಮಟ್ಟದ ಪಂದ್ಯಾವಳಿ | | ಅಂತರರಾಷ್ಟ್ರ ಮಟ್ಟದ ಪಂದ್ಯಾವಳಿ | |
|---|---|---|---|---|---|
| | | ವೈಯಕ್ತಿಕ | ಗುಂಪು (ಪ್ರತಿಯೊಬ್ಬರಿಗೆ) | ವೈಯಕ್ತಿಕ | ಗುಂಪು (ಪ್ರತಿಯೊಬ್ಬರಿಗೆ) |
| 1 | ಪ್ರಥಮ | 10,000/- | 5,000/- | 15,000/- | 10,000/- |
| 2 | ದ್ವಿತೀಯ | 5,000/- | 3,000/- | 10,000/- | 5,000/- |
| 3 | ತೃತೀಯ | 3,000/- | 2,000/- | 5,000/- | 3,000/- |
| 4 | ಅಂತರರಾಷ್ಟ್ರೀಯ ಮಟ್ಟದ ಪಂದ್ಯಾವಳಿಗಾಗಿ ಚಾಂಪಿಯನ್ ಕ್ಯಾಂಪ್‌ಗೆ ಆಯ್ಕೆಯಾಗಿ ಭಾಗವಹಿಸಿದ್ದರೆ | | | 10,000/- | 10,000/- |
| 5 | ಮೇಲಿನಂತೆ ನಗದು ಬಹುಮಾನ ಪಡೆಯುವ ವೈಯಕ್ತಿಕ / ಗುಂಪು ಕ್ರೀಡಾಪಟುಗಳಿಗೆ ತರಬೇತಿ ನೀಡುತ್ತಿರುವ ಕ್ರೀಡಾ ನಿಲಯ / ಕ್ರೀಡಾ ಶಾಲೆಯ ಕ್ರೀಡಾ ತರಬೇತುದಾರರಿಗೆ ಒಂದು ಆರ್ಥಿಕ ವರ್ಷದಲ್ಲಿ ಒಂದು ಬಾರಿ ಪ್ರೋತ್ಸಾಹಕ ನಗದು ಪುರಸ್ಕಾರ. (ರಾಷ್ಟ್ರ ಮಟ್ಟದ ಪಂದ್ಯಾವಳಿಗೆ ರೂ. 2,500/-ಗಳು ಹಾಗೂ ಅಂತರರಾಷ್ಟ್ರೀಯ ಮಟ್ಟದ ಪಂದ್ಯಾವಳಿಗೆ ರೂ. 2,500/-ಗಳು). | | | ಒಂದು ಆರ್ಥಿಕ ವರ್ಷದಲ್ಲಿ ತರಬೇತುದಾರರಿಗೆ ಪ್ರೋತ್ಸಾಹಕ ನಗದು ಪುರಸ್ಕಾರ ರೂ.5,000/-ಗಳ ಮೀರಬಾರದು | |

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕ್ರೀಡಾಶಾಲೆ ಹಾಗೂ ಕ್ರೀಡಾ ನಿಲಯಗಳ ಕ್ರೀಡಾಪಟುಗಳು ಹಾಗೂ ತರಬೇತುದಾರರಿಗೆ ಹಾಲಿ ನೀಡುತ್ತಿರುವ ಕ್ರೀಡಾ ಉತ್ತೇಜನ ನಗದು ಬಹುಮಾನದ ಮೊತ್ತವು ತುಂಬಾ ಕಡಿಮೆಯಾಗಿದ್ದು, ಕ್ರೀಡಾಪಟುಗಳಿಂದ ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದಲ್ಲಿ ಉತ್ತಮ ಗುಣಮಟ್ಟದ ಫಲಿತಾಂಶವನ್ನು ನಿರೀಕ್ಷೆ ಮಾಡಬೇಕಾಗಿದ್ದು, ಅವರಿಗೆ ಈಗ ನೀಡುತ್ತಿರುವ ನಗದು ಬಹುಮಾನದ ದರವನ್ನು ಹೆಚ್ಚಿಸುವುದು ಅವಶ್ಯಕವಾಗಿರುವುದಲ್ಲದೇ ಉಲ್ಲೇಖ(1)ರ ಆದೇಶದಲ್ಲಿ ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದಲ್ಲಿ ಪದಕ ಪಡೆದವರಿಗೆ ಮಾತ್ರ ಸೀಮಿತವಾಗಿದ್ದು, ಸ್ಕೂಲ್ ಗೇಮ್ಸ್,

ಫೆಡರೇಷನ್ ಆಫ್ ಇಂಡಿಯಾ, ಪ್ರೀ ಯೂನಿವರ್ಸಿಟಿ ಟೂರ್ನಮೆಂಟ್‌ನಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ನಗದು ಬಹುಮಾನ ಪಡೆಯಲು ಸ್ಪರ್ಧೆ ಮಾಡಿರುವುದಿಲ್ಲ. ಕ್ರೀಡಾಶಾಲೆ/ನಿಲಯದ ಕ್ರೀಡಾಪಟುಗಳ ಹಿತದೃಷ್ಟಿಯಿಂದ ಈ ಮೂರು ಕ್ರೀಡಾಕೂಟಗಳನ್ನು ನಗದು ಬಹುಮಾನ ಪಡೆಯಲು ಸ್ಪರ್ಧೆಗೊಳಿಸಿ ಈ ಕೆಳಕಂಡಂತೆ ಕ್ರೀಡಾಶಾಲೆ/ನಿಲಯದ ಕ್ರೀಡಾಪಟುಗಳಿಗೆ ಹಾಗೂ ತರಬೇತುದಾರರಿಗೆ ನೀಡುವ ನಗದು ಬಹುಮಾನದ ಮೊತ್ತವನ್ನು ಪರಿಷ್ಕರಿಸಲು ಹಾಗೂ ಸದರಿ ವೆಚ್ಚವನ್ನು ಲೆಕ್ಕಶೀರ್ಷಿಕೆ 2204-00-104-00-25-051 (ಯೋಜನೆ) ಅಡಿಯಲ್ಲಿ ಒದಗಿಸಿರುವ ಆಯವ್ಯಯದ ಮೊತ್ತದಿಂದ ಭರಿಸಲಾಗುವುದೆಂದು ತಿಳಿಸಿ, ಈ ಬಗ್ಗೆ ಪರಿಷ್ಕರಿಸಿದ ಸರ್ಕಾರದ ಆದೇಶ ಹೊರಡಿಸುವಂತೆ ಮೇಲೆ ಓದಲಾದ ಉಲ್ಲೇಖ(2)ರ ಪತ್ರದಲ್ಲಿ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಸರ್ಕಾರವನ್ನು ಕೋರಿರುತ್ತಾರೆ.

ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 284 ಯುಸೇಕ್ರೀ 2013,**
**ಬೆಂಗಳೂರು, ದಿನಾಂಕ: 21-12-2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕ್ರೀಡಾಶಾಲೆ ಹಾಗೂ ಕ್ರೀಡಾ ನಿಲಯಗಳ ಕ್ರೀಡಾಪಟುಗಳು ಹಾಗೂ ತರಬೇತುದಾರರಿಗೆ ನಗದು ಬಹುಮಾನವನ್ನು ಉಲ್ಲೇಖ(1)ರ ಆದೇಶದಲ್ಲಿ ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದಲ್ಲಿ ಪದಕ ಪಡೆದವರಿಗೆ ಮಾತ್ರ ಸೀಮಿತವಾಗಿದ್ದು, ಸ್ಕೂಲ್ ಗೇಮ್ಸ್ ಫೆಡರೇಷನ್ ಆಫ್ ಇಂಡಿಯಾ, ಪ್ರೀ ಯೂನಿವರ್ಸಿಟಿ ಟೂರ್ನಮೆಂಟ್‌ನಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ನಗದು ಬಹುಮಾನ ಪಡೆಯಲು ಸ್ಪರ್ಧೆಯಾಗದೇ ಇರುವುದನ್ನು ಮನಗಂಡು, ಕ್ರೀಡಾಶಾಲೆ/ನಿಲಯದ ಕ್ರೀಡಾಪಟುಗಳ ಹಿತದೃಷ್ಟಿಯಿಂದ ಈ ಕೆಳಕಂಡಂತೆ ಮೂರು ಕ್ರೀಡಾಕೂಟಗಳನ್ನು ನಗದು ಬಹುಮಾನ ಪಡೆಯಲು ಸ್ಪರ್ಧೆಗೊಳಿಸಿ ಮಂಜೂರಾತಿ ನೀಡಿ ಆದೇಶಿಸಿದೆ.

| ಕ್ರ. ಸಂ | ಸ್ಥಾನ | ನ್ಯಾಷನಲ್ ಸ್ಕೂಲ್ ಗೇಮ್ಸ್/ ಪ್ರೀ ಯೂನಿವರ್ಸಿಟಿ ಗೇಮ್ಸ್ | | ಆಲ್ ಇಂಡಿಯಾ ಇಂಟರ್ ಯೂನಿವರ್ಸಿಟಿ | | ನ್ಯಾಷನಲ್ಸ್ | | ಇಂಟರ್ ನ್ಯಾಷನಲ್ಸ್ | | ಅಂತರರಾಷ್ಟ್ರೀಯ ಮಟ್ಟದ ಪಂದ್ಯಾವಳಿಗಾಗಿ ಇಂಡಿಯನ್ ಕ್ಯಾಂಪ್‌ಗೆ ಆಯ್ಕೆಯಾಗಿ ಭಾಗವಹಿಸುವಿಕೆ |
|---|---|---|---|---|---|---|---|---|---|---|
| | | ವ್ಯಕ್ತಿಕ | ಗುಂಪು | ವ್ಯಕ್ತಿಕ | ಗುಂಪು | ವ್ಯಕ್ತಿಕ | ಗುಂಪು | ವ್ಯಕ್ತಿಕ | ಗುಂಪು | |
| 1 | ಪ್ರಥಮ | 10,000/- | 10,000/- | 15,000/- | 15,000/- | 20,000/- | 20,000/- | 50,000/- | 50,000/- | 25,000/- |
| 2 | ದ್ವಿತೀಯ | 8,000/- | 8,000/- | 10,000/- | 10,000/- | 15,000/- | 15,000/- | 30,000/- | 30,000/- | |
| 3 | ತೃತೀಯ | 5,000/- | 5,000/- | 5,000/- | 5,000/- | 10,000/- | 10,000/- | 20,000/- | 20,000/- | |
| 4 | ಮೇಲಿನಂತೆ ನಗದು ಬಹುಮಾನ ಪಡೆಯುವ ವ್ಯಕ್ತಿಕ / ಗುಂಪು ಕ್ರೀಡಾಪಟುಗಳಿಗೆ ತರಬೇತಿ ನೀಡುತ್ತಿರುವ ಕ್ರೀಡಾ ನಿಲಯ / ಕ್ರೀಡಾಶಾಲೆಯ ತರಬೇತುದಾರರಿಗೆ ಈ ಕೆಳಕಂಡಂತೆ ಒಂದು ಆರ್ಥಿಕ ವರ್ಷದಲ್ಲಿ ಒಂದು ಬಾರಿ ಮಾತ್ರ ಪ್ರೋತ್ಸಾಹ ನಗದು ಪುರಸ್ಕಾರ ನೀಡಬಹುದಾಗಿದೆ. | | | | | | | | | |

| | ನಗದು ಪುರಸ್ಕಾರದ ವಿವರ |
|---|---|
| ನ್ಯಾಷನಲ್ ಸ್ಕೂಲ್ ಗೇಮ್ಸ್ / ಪ್ರೀ ಯೂನಿವರ್ಸಿಟಿ ಗೇಮ್ಸ್ | ಪ್ರತಿ ಕ್ರೀಡಾಪಟುವಿನ ಸಾಧನೆಗೆ ರೂ. 5,000/-ಗಳು, ಗರಿಷ್ಠ ರೂ. 25,000/-ಗಳು |
| ಆಲ್ ಇಂಡಿಯಾ ಇಂಟರ್ ಯೂನಿವರ್ಸಿಟಿ | ಪ್ರತಿ ಕ್ರೀಡಾಪಟುವಿನ ಸಾಧನೆಗೆ ರೂ. 10,000/-ಗಳು, ಗರಿಷ್ಠ ರೂ. 50,000/-ಗಳು |
| ನ್ಯಾಷನಲ್ಸ್ | ಪ್ರತಿ ಕ್ರೀಡಾಪಟುವಿನ ಸಾಧನೆಗೆ ರೂ. 10,000/-ಗಳು, ಗರಿಷ್ಠ ರೂ. 50,000/-ಗಳು |
| ಇಂಟರ್ ನ್ಯಾಷನಲ್ಸ್ | ಪ್ರತಿ ಕ್ರೀಡಾಪಟುವಿನ ಸಾಧನೆಗೆ ರೂ. 20,000/-ಗಳು, ಗರಿಷ್ಠ ರೂ. 80,000/-ಗಳು |
| ಅಂತರರಾಷ್ಟ್ರೀಯ ಮಟ್ಟದ ಪಂದ್ಯಾವಳಿಗಾಗಿ ಇಂಡಿಯನ್ [illegible] ಆಯ್ಕೆಯಾಗಿ ಭಾಗವಹಿಸುವಿಕೆ | ಪ್ರತಿ ಕ್ರೀಡಾಪಟುವಿನ ಸಾಧನೆಗೆ ರೂ. 10,000/-ಗಳು, ಗರಿಷ್ಠ ರೂ. 40,000/-ಗಳು |

.. 3

Scanned by CamScanner

ಸದರಿ ವೆಚ್ಚವನ್ನು ಲೆಕ್ಕಶೀರ್ಷಿಕೆ 2204-00-104-00-25-051 (ಯೋಜನೆ) ಅಡಿಯಲ್ಲಿ 2013-14ನೇ ಸಾಲಿನಲ್ಲಿ ಒದಗಿಸಿರುವ ಆಯವ್ಯಯದ ಮೊತ್ತದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಯುಸೇಇ 3025 ಐಎಫ್ಎ 2013, ದಿನಾಂಕ: 05-12-2013ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ. ರಾಮಕೃಷ್ಣಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಗೆ,

1) ಮಹಾಲೇಖಪಾಲರು, (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು.
3) ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಸಂಬಂಧಿಸಿದ ಎಲ್ಲಾ ಕ್ರೀಡಾಶಾಲೆ/ ಕ್ರೀಡಾ ನಿಲಯಗಳ ಕ್ರೀಡಾಪಟುಗಳು ಹಾಗೂ ತರಬೇತುದಾರರಿಗೆ (ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ಇವರ ಮೂಲಕ).
4) ಉಪ ನಿರ್ದೇಶಕರು, ಟಿಎನ್‌ಎಂಸಿ., ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
5) ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6) ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
7) ಸರ್ಕಾರದ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
8) ಸರ್ಕಾರದ ಉಪ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಆಪ್ತ ಸಹಾಯಕರು.
9) ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿದ ಕ್ರೀಡಾಪಟುಗಳಿಗೆ ಶೈಕ್ಷಣಿಕ ಶುಲ್ಕ ಮರುಪಾವತಿ ಯೋಜನೆಗೆ ಸಂಬಂಧಿಸಿದಂತೆ ಮಾರ್ಗಸೂಚಿ ಪರಿಷ್ಕರಣೆ ಮಾಡುವ ಬಗ್ಗೆ- ಆದೇಶ.

**ಓದಲಾಗಿದೆ:** ಸರ್ಕಾರದ ಆದೇಶ ಸಂಖ್ಯೆ:ಯುಸೇಇ 121 ಯುಸೇಕ್ರೀ 2015; ದಿನಾಂಕ:27.03.2015.

ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪತ್ರ ಸಂಖ್ಯೆ:ಡಿವೈಇಎಸ್/ಕ್ರೀಚಪ್ರೋ/131/2020-21; ದಿನಾಂಕ:25.03.2021.

*****

**ಪ್ರಸ್ತಾವನೆ :**

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡಾ ಕೂಟದಲ್ಲಿ ಪದಕ ಪಡೆದ ಕ್ರೀಡಾಕೂಟದಲ್ಲಿ ಶೈಕ್ಷಣಿಕ ಶುಲ್ಕ ಮರು ಪಾವತಿ ಮಾಡುವ ಯೋಜನೆಯು ಜಾರಿಯಲ್ಲಿರುತ್ತದೆ. ಈ ಬಗ್ಗೆ ಮೇಲೆ ಓದಲಾದ ಕ್ರಮಾಂಕ (1)ರಲ್ಲಿನ ಸರ್ಕಾರದ ಆದೇಶದಲ್ಲಿ ಮಾರ್ಗ ಸೂಚಿಯನ್ನು ನಿಗಧಿಪಡಿಸಲಾಗಿರುತ್ತದೆ. ಪ್ರಸ್ತುತ ಮೇಲೆ ಓದಲಾದ ಕ್ರಮಾಂಕ (2)ರಲ್ಲಿನ ಪತ್ರದಲ್ಲಿ ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು, ಹಾಲಿ ಚಾಲ್ತಿಯಲ್ಲಿರುವ ಮಾರ್ಗಸೂಚಿಯನ್ನು ಮಾರ್ಪಡಿಸಲು ದಿನಾಂಕ:23.02.2021ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದಿದ್ದ ಸಭೆಯಲ್ಲಿ ಸೂಚಿಸಿರುವ ಹಿನ್ನಲೆಯಲ್ಲಿ ಪರಿಷ್ಕೃತ ಮಾನದಂಡವನ್ನು ಲಗತ್ತಿಸಿ ಸರ್ಕಾರದ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ಈ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ವೈಎಸ್‌ಡಿ/ಇವೈಡಬ್ಲ್ಯೂ/80/2021,**
**ಬೆಂಗಳೂರು, ದಿನಾಂಕ:09.06.2021.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿದ ಕ್ರೀಡಾಪಟುಗಳಿಗೆ ಶೈಕ್ಷಣಿಕ ಶುಲ್ಕ ಮರುಪಾವತಿ ಯೋಜನೆಗೆ ಸಂಬಂಧಿಸಿದಂತೆ ಮೇಲೆ ಕ್ರಮಾಂಕ (1)ರಲ್ಲಿನ ಆದೇಶದ ಅನುಬಂಧದಲ್ಲಿ ನಿರ್ದಿಷ್ಟಪಡಿಸಲಾಗಿದ್ದ ಮಾರ್ಗಸೂಚಿಗಳನ್ನು ಪರಿಷ್ಕರಿಸಿ ಪರಿಷ್ಕೃತ ನೂತನ ಮಾರ್ಗಸೂಚಿಗಳನ್ನು ಈ ಆದೇಶದ ಅನುಬಂಧದಲ್ಲಿರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

M. Umesh Shastry 09/6/2021
(ಎಂ.ಉಮೇಶ್ ಶಾಸ್ತ್ರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಬೆಂಗಳೂರು — ಜಾವಕ ದಿನಾಂಕ 9.6.21

**ಇವರಿಗೆ :**

1. ಪ್ರಧಾನ ಮಹಾಲೇಖಪಾಲರು (ಎ ಮತ್ತು ಇ)/ (ಜಿ&ಎಸ್.ಎಸ್.ಎ)/ (ಇ&ಆರ್.ಎಸ್.ಎ), ಕರ್ನಾಟಕ, ಪಿ.ಬಿ.ನಂ.5329, ಬೆಂಗಳೂರು.

..2)

2. ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಆ.ಆ.ಕೋಶ), ಬಹುಮಹಡಿ ಕಟ್ಟಡ, ಬೆಂಗಳೂರು.
4. ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಯುಸಕ್ರೀ ಇಲಾಖೆ.
6. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
7. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

15

ಸರ್ಕಾರದ ಆದೇಶ ಸಂಖ್ಯೆ: ವೈಎಸ್‌ಡಿ/ಇವೈಡಬ್ಲ್ಯೂ/80/2021; ದಿನಾಂಕ: 09.06.2021ಕ್ಕೆ ಅನುಬಂಧ.

(ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿದ ಕ್ರೀಡಾಪಟುಗಳಿಗೆ ಶೈಕ್ಷಣಿಕ ಶುಲ್ಕ ಮರುಪಾವತಿ ಮಾಡುವ ಯೋಜನೆಯ ಪರಿಷ್ಕೃತ ಮಾರ್ಗಸೂಚಿಗಳು)

*****

1. ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಕ್ರೀಡೆಗಳಲ್ಲಿ ಭಾಗವಹಿಸಿ ವಿಜೇತರಾದ ಕ್ರೀಡಾಪಟುಗಳಿಗೆ ಶೈಕ್ಷಣಿಕ ಶುಲ್ಕವನ್ನು ಇಲಾಖೆಯಿಂದ ಮರುಪಾವತಿ ಮಾಡುವ ಮೂಲಕ ಪ್ರತಿಭಾವಂತ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡುವುದು ಸರ್ಕಾರದ ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.
2. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕ್ರೀಡೆಗಳಲ್ಲಿ ವಿಜೇತರಾದ ಕ್ರೀಡಾಪಟುಗಳ ಅಧಿಕೃತ ಬೋಧನಾ ಶುಲ್ಕಗಳನ್ನು ವಾರ್ಷಿಕ ರೂ.50,000/-ಗಳ ಗರಿಷ್ಠ ಮೊತ್ತಕ್ಕೆ ಮರುಪಾವತಿ ಮಾಡತಕ್ಕದ್ದು. ಇದರಲ್ಲಿ ಕಟ್ಟಡ ಶುಲ್ಕ, ಡೋನೇಷನ್, ನಿರ್ವಹಣಾ ಶುಲ್ಕ, ಸಾಂಸ್ಕೃತಿಕ ಕಾರ್ಯಕ್ರಮ ಶುಲ್ಕ ಇನ್ನಿತರೆ ಶುಲ್ಕಗಳನ್ನು ಪಾವತಿಸಲು ಅವಕಾಶವಿರುವುದಿಲ್ಲ.
3. ಆಯಾ ವರ್ಷದ ಶೈಕ್ಷಣಿಕ ಶುಲ್ಕವನ್ನು ಹಿಂದಿನ 05 ವರ್ಷಗಳ ಕ್ರೀಡಾ ಸಾಧನೆಯನ್ನು ಪರಿಗಣಿಸಿ ನೀಡುವುದು.
4. ಈ ಯೋಜನೆಯ ಪ್ರಯೋಜನವನ್ನು ಪಡೆಯಲು ಕರ್ನಾಟಕವನ್ನು ರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಪ್ರತಿನಿಧಿಸಿ, ಪ್ರಥಮ ಪಿಯುಸಿಯಿಂದ ಸ್ನಾತಕೋತ್ತರ ಪದವಿ (ವೃತ್ತಿಪರ ಕೋರ್ಸ್ ಒಳಗೊಂಡಂತೆ) ವ್ಯಾಸಂಗ ಮಾಡುತ್ತಿರುವ ಕೇಂದ್ರ, ರಾಜ್ಯ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಶಾಲಾ –ಕಾಲೇಜುಗಳ ಕ್ರೀಡಾ ವಿದ್ಯಾರ್ಥಿಗಳು ಅರ್ಹರಿರುತ್ತಾರೆ.
5. ರಾಷ್ಟ್ರೀ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಕ್ರೀಡಾಪಟುವಿನ ಕುಟುಂಬದ ಒಟ್ಟು ವಾರ್ಷಿಕ ಆದಾಯ ರೂ.2.50ಲಕ್ಷಗಳು ಇರುವಂತಹ ಕ್ರೀಡಾಪಟುಗಳು ಮಾತ್ರ ಈ ಪ್ರಯೋಜನವನ್ನು ಪಡೆಯಲು ಅವಕಾಶವಿರುತ್ತದೆ.
6. ಶೈಕ್ಷಣಿಕ ವರ್ಷದ ಶುಲ್ಕ ಪಾವತಿಸಿದ ರಸೀದಿಗಳೊಂದಿಗೆ ಶಾಲಾ ಮುಖ್ಯೋಪಾಧ್ಯಾಯರು / ಕಾಲೇಜು ಪ್ರಾಂಶುಪಾಲರ ಮೂಲಕ ದೃಢೀಕರಿಸಿ ಸಂಬಂಧಪಟ್ಟ ಜಿಲ್ಲೆಯ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಶಿಫಾರಸ್ಸಿನೊಂದಿಗೆ ಸಲ್ಲಿಸತಕ್ಕದ್ದು.
7. ರಾಷ್ಟ್ರೀಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿ ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕ ವಿಜೇತರಾದ ಕರ್ನಾಟಕದ ಕ್ರೀಡಾಪಟುಗಳು ಮಾತ್ರ ಈ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ. ಅಂತಾರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸುವಿಕೆ, ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕ ವಿಜೇತರ ಸಾಧನೆಯನ್ನು ಪರಿಗಣಿಸಲಾಗುವುದು.
8. ವಿಕಲಚೇತನ ಕ್ರೀಡಾಪಟುಗಳಿಗೂ ಇದೇ ಮಾನದಂಡ ಅನ್ವಯಿಕವಾಗುತ್ತದೆ. ಜೊತೆಗೆ ವಿಕಲಚೇತನ ಕ್ರೀಡಾಪಟುಗಳು ಕಡ್ಡಾಯವಾಗಿ ಸರ್ಕಾರಿ ವೈದ್ಯರಿಂದ ನಿಗಧಿತ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು.
9. ಕರ್ನಾಟಕ ನಿವಾಸಿಗಳಲ್ಲದ ಹಾಗೂ ರಾಜ್ಯವನ್ನು ಪ್ರತಿನಿಧಿಸದೇ ಇರುವ ಕ್ರೀಡಾಪಟುಗಳು, ರಾಜ್ಯದಲ್ಲಿ ವ್ಯಾಸಂಗ ಮಾಡುತ್ತಿಲ್ಲದ ಕ್ರೀಡಾಪಟುಗಳು ಈ ಯೋಜನೆಗೆ ಅರ್ಹರಿರುವುದಿಲ್ಲ.
10. ಕ್ರೀಡಾ ಸಾಧನೆಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಪಡೆದ ಕ್ರೀಡಾ ಸಂಸ್ಥೆಗಳು/ಫೆಡರೇಷನ್ ಆಯೋಜಿಸಿರುವ ಕ್ರೀಡಾಕೂಟಗಳಲ್ಲಿ ಭಾಗವಹಿಸಿರುವ ಬಗ್ಗೆ ದಾಖಲಾಗಿರಬೇಕು.

11. ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಆಯೋಜಿಸುವ ಆಹ್ವಾನ ಕ್ರೀಡಾಕೂಟಗಳಲ್ಲಿ ಭಾಗವಹಿಸಿರುವ ಕ್ರೀಡಾಪಟುಗಳು ಈ ಯೋಜನೆಯ ಪ್ರಯೋಜನಾ ಪಡೆಯಲು ಅರ್ಹರಾಗಿರುವುದಿಲ್ಲ.
12. ಅಂತಾರಾಷ್ಟ್ರೀಯ ಕ್ರೀಡಾಕೂಟಕ್ಕೆ ಯಾವ ಕ್ರೀಡಾ ಸಂಸ್ಥೆಯ ಮೂಲಕ ರಾಜ್ಯವನ್ನು ಪ್ರತಿನಿಧಿಸಿರುತ್ತಾರೆ ಎಂಬುದರ ಬಗ್ಗೆ ಭಾರತ ಸರ್ಕಾರದ ಮಾನ್ಯತೆ ಪಡೆದ ಸಂಬಂಧ ಪಟ್ಟ ಕ್ರೀಡೆಯ ರಾಷ್ಟ್ರೀಯ ಫೆಡರೇಷನ್/ಭಾರತೀಯ ಕ್ರೀಡಾ ಪ್ರಾಧಿಕಾರ ಇವರಿಂದ ಪ್ರಮಾಣೀಕರಿಸಿದ ಮೂಲ ಪತ್ರಗಳನ್ನು ಪರಿಗಣಿಸಿ ಶೈಕ್ಷಣಿಕ ಶುಲ್ಕ ಮರುಪಾವತಿ ಪಡೆಯಲು ದೃಢೀಕರಣ ಪತ್ರವನ್ನು ಅರ್ಜಿಯ ಜೊತೆಗೆ ಒದಗಿಸಬೇಕು.
13. ಯಾವುದೇ ಅಂತರಾಷ್ಟ್ರೀಯ ಮಟ್ಟದಲ್ಲಿ ಆಯೋಜಿಸುವ ಕ್ರೀಡಾ ಸ್ಪರ್ಧೆಯಲ್ಲಿ ನೇರ ಪ್ರವೇಶ ಪಡೆದಂತಹ ಕ್ರೀಡಾಪಟುಗಳಿಗೆ ಶೈಕ್ಷಣಿಕ ಶುಲ್ಕ ಮರುಪಾವತಿ ಶುಲ್ಕ ಪಡೆಯಲು ಅವಕಾಶವಿರುವುದಿಲ್ಲ.
14. ಭಾರತ ಸರ್ಕಾರದ ಯುವ ವ್ಯವಹಾರಗಳು ಮತ್ತು ಕ್ರೀಡಾ ಮಂತ್ರಾಲಯದಿಂದ ಅಧಿಕೃತ ಕ್ರೀಡಾ ಸಂಸ್ಥೆಗಳಿಗೆ ಸಂಘಟಿಸಲಾದ ಕ್ರೀಡೆಗಳಲ್ಲಿ ಭಾಗವಹಿಸಿ ಪದಕ ವಿಜೇತರಾದ ರಾಜ್ಯದ ಕ್ರೀಡಾಪಟುಗಳು ಈ ಯೋಜನೆಗೆ ಅರ್ಹರಿರುತ್ತಾರೆ.
15. ಈ ಕೆಳಕಂಡ ಕ್ರೀಡೆಗಳಲ್ಲಿ ಭಾಗವಹಿಸಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಈ ಯೋಜನೆ ಜಾರಿಗೊಳಿಸಿ ಅನುಷ್ಠಾನಗೊಳಿಸಬಹುದು:-

- ಒಲಂಪಿಕ್ ಗೇಮ್ಸ್ /ಪ್ಯಾರಾ ಒಲಂಪಿಕ್ ಗೇಮ್ಸ್
- ವರ್ಲ್ಡ್ ಗೇಮ್ಸ್/ಚಾಂಪಿಯನ್ ಷಿಪ್
- ಏಷಿಯನ್ ಗೇಮ್ಸ್/ಪ್ಯಾರಾ ಏಷಿಯನ್ ಗೇಮ್ಸ್
- ಕಾಮನ್‌ವೇಲ್ತ್ ಗೇಮ್ಸ್
- ಏಷಿಯನ್ ಚಾಂಪಿಯನ್ ಷಿಪ್
- ಕಾಮನ್‌ವೆಲ್ತ್ ಚಾಂಪಿಯನ್ ಷಿಪ್
- ಎಸ್ಎಎಫ್ ಗೇಮ್ಸ್
- ಮಾನ್ಯತೆ ಹೊಂದಿದ ಅಂತಾರಾಷ್ಟ್ರೀಯ ಕ್ರೀಡಾಕೂಟಗಳು (Non Ranking Competitions)
- ರಾಷ್ಟ್ರೀಯ ಕ್ರೀಡಾಕೂಟ
- ರಾಷ್ಟ್ರೀಯ ಚಾಂಪಿಯನ್ ಷಿಪ್
- ಸ್ಕೂಲ್ ಗೇಮ್ಸ್ ಫೆಡರೇಷನ್ ಆಫ್ ಇಂಡಿಯಾ, ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಕ್ರೀಡಾಕೂಟ
- ಅಖಿಲ ಭಾರತ ಅಂತರ ವಲಯ ಕೀಡಾಕೂಟ
- ಭಾರತ ಸರ್ಕಾರದ ಅಂಗೀಕೃತ ಕ್ರೀಡಾ ಫೆಡರೇಷನ್‌ನಿಂದ ಸಂಘಟಿಸಲಾದ ರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳು /ಶಾಲಾ ಮಟ್ಟದ ಚಾಂಪಿಯನ್ ಷಿಪ್ /ಖೇಲೋ ಇಂಡಿಯಾ ಕ್ರೀಡಾಕೂಟಗಳು.

M. Umesh Shastry 09/6/2021

(ಎಂ.ಉಮೇಶ್ ಶಾಸ್ತ್ರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

**2021-22ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಪರಿಶಿಷ್ಟ ಪಂಗಡ ಉಪಯೋಜನೆ ಅಡಿಯಲ್ಲಿ ಅಂತರರಾಷ್ಟ್ರೀಯ / ರಾಷ್ಟ್ರೀಯ/ ರಾಜ್ಯ ಮಟ್ಟದ ಅಧಿಕೃತ ಕ್ರೀಡೆಗಳಲ್ಲಿ ಪದಕ ವಿಜೇತರಾದ ಕ್ರೀಡಾಪಟುಗಳಿಗೆ ಪ್ರೋತ್ಸಾಹಧನ ನೀಡುವ ಕಾರ್ಯಕ್ರಮದ ಮಾರ್ಗಸೂಚಿಗಳು**

1. ಕ್ರೀಡಾಪಟುಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು. ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸಿರಬೇಕು.
2. ಪ್ರೋತ್ಸಾಹಧನವನ್ನು ಕರ್ನಾಟಕದ ಕ್ರೀಡಾಪಟುಗಳಿಗೆ ಮಾತ್ರ ನೀಡುವುದು.
3. ಅಂತರಾಷ್ಟ್ರೀಯ/ರಾಷ್ಟ್ರೀಯ/ರಾಜ್ಯ ಮಟ್ಟದ ತಂಡಗಳನ್ನು ಪ್ರತನಿಧಿಸಿ ಸರ್ಕಾರದಿಂದ ಅಂಗೀಕೃತವಾದಂತಹ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಪದಕ ವಿಜೇತರಾಗಿರಬೇಕು.
4. ಕ್ರೀಡಾಪಟುಗಳು ಕರ್ನಾಟಕ ಮೂಲದವರಾಗಿದ್ದು, ಬೇರೆ ರಾಜ್ಯ ಅಥವಾ ಕ್ರೀಡಾತಂಡವನ್ನು (Services, Airlines, Railways) ಪ್ರತಿನಿಧಿಸುವ ಕ್ರೀಡಾಪಟುಗಳು ಈ ಪುರಸ್ಕಾರಕ್ಕೆ ಅರ್ಹರಾಗಿರುವುದಿಲ್ಲ.
5. ಕ್ರೀಡಾಪಟುಗಳು ಆಧಾರ್ ಕಾರ್ಡ್, ಪಡಿತರ ಚೀಟಿ (Ration Card), ಆರ್.ಡಿ. ಸಂಖ್ಯೆಯನ್ನು ಒಳಗೊಂಡ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು.
6. ಒಲಂಪಿಕ್/ಏಷ್ಯನ್/ಕಾಮನ್ ವೆಲ್ತ್ ಕ್ರೀಡೆಗಳಲ್ಲಿ ಅಂತರಾಷ್ಟ್ರೀಯ ಸಂಸ್ಥೆ ಮತ್ತು ಇತರ ಮಾನ್ಯತೆ ಪಡೆದ ಕ್ರೀಡಾ ಸಂಸ್ಥೆಗಳು ನಡೆಸುವ ಅಧಿಕೃತ ಚಾಂಪಿಯನ್ ಶಿಪ್ ಗಳಿಗೆ ಮಾತ್ರ ಪ್ರೋತ್ಸಾಹಧನ ನೀಡಲಾಗುವುದು (ಮಾನ್ಯತೆ ಪಡೆಯದೇ ಇರುವ ಯಾವುದೇ ಫೆಡರೇಷನ್ ನಡೆಸುವ ಕ್ರೀಡೆಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳು ಪ್ರೋತ್ಸಾಹಧನಕ್ಕೆ ಅರ್ಹರಾಗಿರುವುದಿಲ್ಲ).
7. ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಹಿರಿಯರ ಕ್ರೀಡಾಕೂಟದಲ್ಲಿ ಭಾಗವಹಿಸಿದ ಕ್ರೀಡಾಪಟುಗಳು ಪ್ರೋತ್ಸಾಹಧನಕ್ಕೆ ಅರ್ಹರಾಗಿರುವುದಿಲ್ಲ.
8. ಬ್ಯಾಂಕ್ ಖಾತೆ ಕಡ್ಡಾಯವಾಗಿ ಕ್ರೀಡಾಪಟುವಿನ ಹೆಸರಿನಲ್ಲಿರಬೇಕು. ಬ್ಯಾಂಕ್ ಪಾಸ್ ಪುಸ್ತಕದ ಮುಖಪುಟವನ್ನು ಲಗತ್ತಿಸಬೇಕು (ಹೆಸರು, ಖಾತೆ ಸಂಖ್ಯೆ, IFSC ಸಂಖ್ಯೆ ಇರುವ ಸಂಪೂರ್ಣ ವಿವರಗಳನ್ನೊಳಗೊಂಡ ಪ್ರತಿ).
9. 2020-21ನೇ ಕ್ಯಾಲೆಂಡರ್ ವರ್ಷದ (ದಿನಾಂಕ: 01-01-2020 ರಿಂದ 31-12-2020 ರವರೆಗೆ) ಕ್ರೀಡಾ ಸಾಧನೆಯನ್ನು ಮಾತ್ರ ಪ್ರಸಕ್ತ ಸಾಲಿನ ಪ್ರೋತ್ಸಾಹಧನಕ್ಕೆ ಪರಿಗಣಿಸಲಾಗುವುದು.
10. ಒಂದಕ್ಕಿಂತ ಹೆಚ್ಚು ಪದಕಗಳನ್ನು ಪಡೆದಿದ್ದರೂ ಸಹ ಕ್ರೀಡಾಪಟುವಿನ ಒಂದು ಗರಿಷ್ಟ ಮಟ್ಟದ ಸಾಧನೆಯನ್ನು ಮಾತ್ರ ಪರಿಗಣಿಸಲಾಗುವುದು.
11. ಅರ್ಜಿ ಸಲ್ಲಿಸಲು ದಿನಾಂಕ:20-09-2021 ರಂದು ಅಂತಿಮಗೊಳ್ಳಲಿದ್ದು, ಆ ದಿನಾಂಕದೊಳಗೆ ಆಯಾ ಜಿಲ್ಲೆಯ ಉಪ/ಸಹಾಯಕ ನಿರ್ದೇಶಕರ ಮುಖಾಂತರ ಸಲ್ಲಿಸಿದ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು. ನಂತರ ಹಾಗೂ ಮೊದಲು ಬಂದಿರುವ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

ಆಯುಕ್ತರ ಪರವಾಗಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

## 2021-22 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಉಪಯೋಜನೆ ಅಡಿಯಲ್ಲಿ ಅಂತರರಾಷ್ಟ್ರೀಯ/ ರಾಷ್ಟ್ರೀಯ ಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕ್ರೀಡಾಪಟುಗಳಿಗೆ ಸ್ವಯಂ ಉದ್ಯೋಗ ಹೊಂದಲು ಜಿಮ್ ಸ್ಥಾಪನೆಗಾಗಿ ಮಾರ್ಗಸೂಚಿಗಳು

1. ಕ್ರೀಡಾಪಟುಗಳು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದ ಜಾತಿಗೆ ಸೇರಿದವರಾಗಿರಬೇಕು. ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸಿರಬೇಕು (ಆರ್.ಡಿ. ನಂಬರ್ ಇರುವ ಜಾತಿ ಪ್ರಮಾಣ ಪತ್ರ).
2. ಅರ್ಜಿದಾರರು ನಿರುದ್ಯೋಗಿಗಳಾಗಿದ್ದು, ಸ್ವಯಂ ಉದ್ಯೋಗ ಹೊಂದಲು ರೂ. 15.00 ಲಕ್ಷಗಳ ಘಟಕ ವೆಚ್ಚದಲ್ಲಿ ಶೇಕಡಾ 75 ರಷ್ಟು ಇಲಾಖೆ ವತಿಯಿಂದ ಹಾಗೂ ಶೇಕಡಾ 25 ರಷ್ಟು ವೆಚ್ಚವನ್ನು ಸ್ವಯಂ ಭರಿಸುವ ಷರತ್ತಿಗೆ ಬದ್ಧರಾಗಿರಬೇಕು.
3. ಕ್ರೀಡಾಪಟುಗಳು ಅಂತರರಾಷ್ಟ್ರೀಯ/ರಾಷ್ಟ್ರೀಯ ಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಪದಕ ವಿಜೇತರಾಗಿರಬೇಕು.
4. ಜಿಮ್ ಸಲಕರಣೆಗಳನ್ನು ಕರ್ನಾಟಕದ ಕ್ರೀಡಾಪಟುಗಳಿಗೆ ಮಾತ್ರ ನೀಡಲಾಗುವುದು.
5. ಕ್ರೀಡಾಪಟುಗಳು ಕರ್ನಾಟಕದ ಮೂಲದವರಾಗಿದ್ದು, ಬೇರೆ ರಾಜ್ಯ ಅಥವಾ ಕ್ರೀಡಾ ತಂಡವನ್ನು ಪ್ರತಿನಿಧಿಸುವ ಕ್ರೀಡಾಪಟುಗಳು ಈ ಪುರಸ್ಕಾರಕ್ಕೆ ಅರ್ಹರಾಗಿರುವುದಿಲ್ಲ.
6. ಕ್ರೀಡಾಪಟುಗಳು ಸ್ವಯಂ ದೃಢೀಕೃತ ಪ್ರಮಾಣಪತ್ರಗಳನ್ನು ಅರ್ಜಿಯೊಂದಿಗೆ ಲಗತ್ತಿಸಿ ಸಂಬಂಧಪಟ್ಟ ಜಿಲ್ಲೆಯ ಉಪ/ಸಹಾಯಕ ನಿರ್ದೇಶಕರ ಮೂಲಕ ಸಲ್ಲಿಸತಕ್ಕದ್ದು.
7. ಕ್ರೀಡಾಪಟುವಿನ ಹೆಸರು ಹಾಗೂ ಭಾವಚಿತ್ರವುಳ್ಳ ಪಡಿತರ ಚೀಟಿ, ಮತದಾರರ ಚೀಟಿ ಅಥವಾ ಸರ್ಕಾರದಿಂದ ವಿತರಿಸಿರುವ ಗುರುತಿನ ಚೀಟಿಯ ನಕಲನ್ನು ಲಗತ್ತಿಸುವುದು.
8. ಅಂತರರಾಷ್ಟ್ರೀಯ ಸಂಸ್ಥೆ ಮತ್ತು ಇತರೆ ಮಾನ್ಯತೆ ಪಡೆದ ಕ್ರೀಡಾ ಸಂಸ್ಥೆಗಳು ನಡೆಸುವ ಅಧಿಕೃತ ಚಾಂಪಿಯನ್ ಶಿಪ್ ಗಳಲ್ಲಿ ಪದಕ ವಿಜೇತರಾದವರನ್ನು ಪರಿಗಣಿಸಲಾಗುವುದು (ಮಾನ್ಯತೆ ಪಡೆಯದೇ ಇರುವ ಫೆಡರೇಷನ್ ನಡೆಸುವ ಕ್ರೀಡೆಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳು ಅರ್ಹರಿರುವುದಿಲ್ಲ)
9. ಹಿರಿಯರ ಕ್ರೀಡಾಕೂಟದಲ್ಲಿ ಭಾಗವಹಿಸಿದ ಕ್ರೀಡಾಪಟುಗಳು ಜಿಮ್ ಸ್ಥಾಪನೆಗೆ ಅರ್ಹರಿರುವುದಿಲ್ಲ.
10. ಬ್ಯಾಂಕ್ ಖಾತೆ ಕಡ್ಡಾಯವಾಗಿ ಕ್ರೀಡಾಪಟುವಿನ ಹೆಸರಿನಲ್ಲಿರಬೇಕು. ಬ್ಯಾಂಕ್ ಪಾಸ್ ಪುಸ್ತಕದ ಮುಖಪುಟದ ಜೆರಾಕ್ಸ್ ಪ್ರತಿ ಲಗತ್ತಿಸಬೇಕು. (ಹೆಸರು, ಖಾತೆ ಸಂಖ್ಯೆ, ಐ.ಎಫ್.ಎಸ್.ಸಿ. ಕೋಡ್ ಇರುವ ಪುಟ).
11. ಜಿಮ್ ಸ್ಥಾಪಿಸಲು ಅರ್ಜಿಯನ್ನು ಸಲ್ಲಿಸಲು ಕ್ರೀಡಾಪಟುಗಳು ಜಿಮ್ ಸ್ಥಾಪಿಸಲು ಸೂಕ್ತವಾದ ಸ್ಥಳಾವಕಾಶ ಹಾಗೂ ಕಟ್ಟಡದ ಸಂಪೂರ್ಣ ದಾಖಲೆಗಳನ್ನು ಸಲ್ಲಿಸುವುದು.
12. ಜಿಮ್ ಸಲಕರಣೆಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಲು ಅಗತ್ಯ ಮಾನವ ಸಂಪನ್ಮೂಲ ಹೊಂದಿರತಕ್ಕದ್ದು.
13. ಜಿಮ್ ಶಾಲೆ ಸಲಕರಣೆಗಳನ್ನು ಬೇರೆ ಯಾರಿಗೂ ಮಾರುವುದಾಗಲೀ, ಪರಭಾರೆ ಮಾಡುವುದಾಗಲೀ ಮಾಡತಕ್ಕದ್ದಲ್ಲ.
14. ಕ್ರೀಡಾ ಪಟುಗಳ ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕಕ್ಕೆ 40 ವರ್ಷ ವಯಸ್ಸನ್ನು ಮೀರಿರಬಾರದು.
15. ಇಲಾಖೆಯ ಅಧಿಕಾರಿಗಳು ಪರಿಶೀಲನೆಗೆ ಬಂದ ಸಂದರ್ಭದಲ್ಲಿ ಸಹಕರಿಸತಕ್ಕದ್ದು.

ಆಯುಕ್ತರ ಪರವಾಗಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಕರ್ನಾಟಕ ಸರ್ಕಾರ

ನಂ:ಡಿವೈಎಸ್ಎಸ್:ಎಸ್ಎಸ್ಹೆಚ್/189/2020-21

ಆಯುಕ್ತರ ಕಚೇರಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ,
ಬೆಂಗಳೂರು-01. ದಿನಾಂಕ:04-12-2020.

**: ಸುತ್ತೋಲೆ :**

**ವಿಷಯ:- ಜಿಲ್ಲಾ/ರಾಜ್ಯ ಕ್ರೀಡಾಶಾಲೆ ಮತ್ತು ಕ್ರೀಡಾ ನಿಲಯಗಳಿಗೆ 2021-22 ನೇ ಸಾಲಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಕುರಿತು.**

*****

2021-22ನೇ ಸಾಲಿನಲ್ಲಿ ಜಿಲ್ಲೆಗಳಲ್ಲಿರುವ ಜಿಲ್ಲಾ ಕ್ರೀಡಾ ಶಾಲೆಗಳ 5ನೇ ತರಗತಿಗೆ ಪ್ರವೇಶ ಹಾಗೂ ರಾಜ್ಯದ ಎಲ್ಲಾ ಕ್ರೀಡಾ ಶಾಲೆ/ವಸತಿ ನಿಲಯಗಳ 8ನೇ ತರಗತಿ ಮತ್ತು ಪ್ರಥಮ ಪಿ.ಯು.ಸಿ.ಗೆ ಪ್ರವೇಶ ನೀಡಲು ಪ್ರತಿಭಾವಂತ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ವಿವರವಾದ ಆಯ್ಕೆ ಪ್ರಕ್ರಿಯೆ ರೂಪಿಸಲಾಗಿದೆ.

ಈ ದಿಶೆಯಲ್ಲಿ ಜಿಲ್ಲಾ ಕ್ರೀಡಾ ಶಾಲೆಗಳು ಸೇರಿದಂತೆ ಎಲ್ಲಾ ಕ್ರೀಡಾ ಶಾಲೆ/ವಸತಿ ನಿಲಯಗಳ 8ನೇ ತರಗತಿ ಹಾಗೂ ಪ್ರಥಮ ಪಿ.ಯು.ಸಿ ಪ್ರವೇಶಕ್ಕೆ ಮಾರ್ಗಸೂಚಿಗಳಲ್ಲಿ ಮಾರ್ಪಾಡು ಮಾಡಲಾಗಿದೆ. ಕ್ರೀಡಾ ಶಾಲೆ/ವಸತಿ ನಿಲಯಗಳಲ್ಲಿ ಪ್ರಸ್ತುತ 7ನೇ ತರಗತಿ ಹಾಗೂ 10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕ್ರೀಡಾ ಪಟುಗಳು ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದು ಕಡ್ಡಾಯ.

ಎಲ್ಲಾ ಹಂತಗಳ ಆಯ್ಕೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕೆಳಕಾಣಿಸಿದ ಮಾರ್ಗಸೂಚಿಗಳನ್ನು ಪಾಲಿಸಲು ಸೂಚಿಸಿದೆ.

ಪ್ರಚಾರ:

ಅ) ಪ್ರಥಮ ಹಂತದ ಆಯ್ಕೆ ಪ್ರಕ್ರಿಯೆ ನಡೆಯುವ ಊರು, ಸ್ಥಳ, ದಿನಾಂಕ, ಸಮಯಗಳನ್ನು ಕೂಡಲೇ ನಿಗಧಿಪಡಿಸಿ ಪ್ರಕಟಪಡಿಸುವುದು ಮತ್ತು ಹೆಚ್ಚಿನ ಪ್ರಚಾರಕ್ಕೆ ಕ್ರಮಗಳನ್ನು ಕೈಗೊಳ್ಳುವುದು.

ಆ) ಆಯ್ಕೆ ಪ್ರಕ್ರಿಯೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕ್ರೀಡಾಪಟುಗಳು ಭಾಗವಹಿಸುವ ದಿಸೆಯಲ್ಲಿ ಪ್ರತಿಯೊಂದು ಜಿಲ್ಲೆಯ ಉಪ/ಸಹಾಯಕ ನಿರ್ದೇಶಕರುಗಳು, ತಮ್ಮ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷಕರನ್ನು ಸಂಪರ್ಕಿಸಿ ತಾಲ್ಲೂಕು ಶಿಕ್ಷಣ ಸಂಯೋಜಕರ ಸಭೆ ನಡೆಸಿ ಎಲ್ಲಾ ಪ್ರಾಥಮಿಕ/ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಿಗೆ ಪ್ರಥಮ ಹಂತದ ಆಯ್ಕೆಗೆ ಮಾಹಿತಿ ಒದಗಿಸುವಂತೆ ಹಾಗೂ ಆಯಾ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕರುಗಳು ಈ ಬಗ್ಗೆ ಹೆಚ್ಚಿನ ಗಮನ ಹರಿಸಿ ಆಯ್ಕೆ ಪ್ರಕ್ರಿಯೆಯಲ್ಲಿ ಪ್ರತಿ ಶಾಲೆಯಿಂದ ಪ್ರತಿಭಾವಂತ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ನೋಡಿಕೊಳ್ಳುವ ಬಗ್ಗೆ ಶಿಕ್ಷಣ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಸೂಕ್ತ ನಿರ್ದೇಶನ ನೀಡುವಂತೆ ವ್ಯವಸ್ಥೆ ಮಾಡತಕ್ಕದ್ದು.

ಇ) ಈ ದಿಸೆಯಲ್ಲಿ ತಾಲ್ಲೂಕು ಕೇಂದ್ರಗಳಲ್ಲಿ ತಾಲ್ಲೂಕು ದೈಹಿಕ ಶಿಕ್ಷಣ ಸಂಯೋಜಕರ ನೇತ್ರತ್ವದಲ್ಲಿ ದೈಹಿಕ ಶಿಕ್ಷಕರ ಸಭೆ ನಡೆಸಿ ಅಯ್ಕೆ ಪರೀಕ್ಷೆಯ ವಿವರಗಳು, ಪರೀಕ್ಷಿಸಲಾಗುವ ದೈಹಿಕ ಸಾಮರ್ಥ್ಯಗಳ, ದೈಹಿಕ ಗುಣಾಂಶಗಳ ವಿವರಗಳನ್ನು ನೀಡಿ ಸೂಕ್ತ ಅಭ್ಯರ್ಥಿಗಳನ್ನು ಗುರುತಿಸಿ ಪ್ರಥಮ ಹಂತದ ಆಯ್ಕೆ ಪರೀಕ್ಷೆಗೆ ಕರೆದು ತರಲು ಸೌಜನ್ಯಪೂರ್ವಕ ಒತ್ತಾಯ ತರುವುದು.

ಈ) ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಹಣಾ ಅಧಿಕಾರಿಗಳ ಸಹಕಾರ ಪಡೆದು ಎಲ್ಲಾ ಗ್ರಾಮ ಪಂಚಾಯತಿಗಳಿಗೂ ಸಂಪೂರ್ಣ ಮಾಹಿತಿ ನೀಡುವುದು. ಆಯಾ ತಾಲ್ಲೂಕಿನ ಗ್ರಾಮ ಪಂಚಾಯತಿ ಕಛೇರಿಯ ಅಧಿಕಾರಿಗಳನ್ನು ಸಂಪರ್ಕಿಸಿ ಗ್ರಾಮ ಪಂಚಾಯ್ತಿವತಿಯಿಂದಲೂ ಈ ವಿಷಯದ ಬಗ್ಗೆ ಹೆಚ್ಚಿನ ಪ್ರಚಾರ ಒದಗಿಸುವಂತೆ ನೋಡಿಕೊಳ್ಳತಕ್ಕದ್ದು.

ಉ) ಜಿಲ್ಲಾ ಮತ್ತು ತಾಲ್ಲೂಕು ಯುವ ಒಕ್ಕೂಟಗಳು, ಕ್ರೀಯಾಶೀಲ ಯುವಕರು, ಜಿಲ್ಲೆಯ ಹಿರಿಯ ಕ್ರೀಡಾಪಟುಗಳು ಮತ್ತು ಯುವಜನ ಸಂಘಗಳು, ಜಿಲ್ಲಾ ಕ್ರೀಡಾ ಸಂಸ್ಥೆಗಳು, ಕ್ರೀಡಾ ಸಂಘಗಳು ಹಾಗೂ ನೆಹರು ಯುವಕ ಕೇಂದ್ರದ ಸ್ವಯಂ ಸೇವಕರ ಸಹಕಾರ ಪಡೆಯುವುದು.

ಊ) ಈ ಆಯ್ಕೆಯ ಬಗ್ಗೆ ಜಿಲ್ಲಾ ವಾರ್ತಾಧಿಕಾರಿಗಳ ಸಹಕಾರ ಪಡೆದು ಜಿಲ್ಲಾ ಕೇಂದ್ರ ಮತ್ತು ತಾಲ್ಲೂಕು ಕೇಂದ್ರದ ಮಾಧ್ಯಮಗಳ ಮೂಲಕ ಅಂದರೆ ಆಯಾ ಜಿಲ್ಲೆ/ತಾಲ್ಲೂಕುಗಳಲ್ಲಿನ ಪ್ರಮುಖ ದಿನಪತ್ರಿಕೆಗಳಲ್ಲಿ, ದೂರದರ್ಶನ, ಆಕಾಶವಾಣಿ; ಭಿತ್ತಿ ಪತ್ರಗಳ ಮೂಲಕ ಪ್ರತಿ ಹಳ್ಳಿ ಹಾಗೂ ಪಟ್ಟಣ ಪ್ರದೇಶಗಳ ಶಾಲಾ ಕಾಲೇಜುಗಳಲ್ಲಿ ಸಾಕಷ್ಟು ಪ್ರಚಾರವನ್ನು ನೀಡಿ ಪ್ರತಿಭಾವಂತ ಕ್ರೀಡಾಪಟುಗಳನ್ನು ಗುರುತಿಸಲು ಕ್ರಮ ಕೈಗೊಳ್ಳತಕ್ಕದ್ದು. ತೆಗೆದುಕೊಂಡ ಕ್ರಮಗಳ ಬಗ್ಗೆ ಕೇಂದ್ರ ಕಛೇರಿಗೆ ವಿವರವಾದ ವರದಿಯನ್ನು ಸಲ್ಲಿಸುವುದು.

ಋ) ಪ್ರತಿ ತರಬೇತುದಾರರು ಅವರ ತರಬೇತಿ ಕೇಂದ್ರದ ಸುತ್ತಮುತ್ತ ಇರುವ ಎಲ್ಲಾ ಶಾಲೆಗಳನ್ನು ಸಂಪರ್ಕಿಸಿ ಕ್ರೀಡಾಶಾಲೆ/ ನಿಲಯದ ಪ್ರಥಮ ಹಂತದ ಆಯ್ಕೆಗೆ ಪ್ರತಿ ಶಾಲೆಯಿಂದ ಕನಿಷ್ಠ 10 ಜನ ಪ್ರತಿಭಾವಂತ ಕ್ರೀಡಾಪಟುಗಳನ್ನು ಕರೆತರತಕ್ಕದ್ದು. ಉಪ/ಸಹಾಯಕ ನಿರ್ದೇಶಕರುಗಳು ತಮ್ಮ ಅಧೀನದಲ್ಲಿ ಬರುವ ತರಬೇತುದಾರರಿಗೆ ಈ ಬಗ್ಗೆ ಸೂಕ್ತ ಸೂಚನೆ ನೀಡತಕ್ಕದ್ದು.

1) ಪ್ರತಿಯೊಬ್ಬ ತರಬೇತುದಾರರಿಂದ ಗುರುತಿಸಲ್ಪಟ್ಟ ಕನಿಷ್ಠ 10 ಅಭ್ಯರ್ಥಿಗಳ ಪಟ್ಟಿಯನ್ನು ದೃಢೀಕರಿಸಿ ಸಲ್ಲಿಸತಕ್ಕದ್ದು ಮತ್ತು ಅಭ್ಯರ್ಥಿಗಳ ಅರ್ಜಿಯಲ್ಲಿ ನಿಗಧಿತ ಸ್ಥಳದಲ್ಲಿ ತರಬೇತುದಾರರ/ಆಯ್ಕೆ ಸಮಿತಿ ಸದಸ್ಯರುಗಳ ಹೆಸರನ್ನು ದಾಖಲಿಸಿ ದೃಢೀಕರಿಸುವುದು.

2) ಈ ಆಯ್ಕೆ ಪ್ರಕ್ರಿಯೆ ಕಾರ್ಯದಲ್ಲಿ ಇಲಾಖೆ ನಿಗಧಿಪಡಿಸಿದ ಗುರಿಯನ್ನು ಸಾಧಿಸದ ಉಪ/ಸಹಾಯಕ ನಿರ್ದೇಶಕರು ಹಾಗೂ ತರಬೇತುದಾರರ ಮೇಲೆ ಶಿಸ್ತುಕ್ರಮ ಕೈಗೊಳ್ಳಲಾಗುವುದು.

**<u>ದೈಹಿಕ ಸಾಮರ್ಥ್ಯ ಆಯ್ಕೆ ಪರೀಕ್ಷೆ :</u>**

ಜಿಲ್ಲಾ/ರಾಜ್ಯ ಕ್ರೀಡಾ ಶಾಲೆ/ವಸತಿ ನಿಲಯಗಳಿಗೆ (ಕಿರಿಯರ ವಿಭಾಗ) ಪ್ರವೇಶ ಕೋರುವ ಅಭ್ಯರ್ಥಿಗಳ ದೈಹಿಕ ಸಾಮರ್ಥ್ಯ /ಶಕ್ತಿ, ಚಾಕಚಕ್ಯತೆ, ಸಹಿಷ್ಣುತೆ, ಕುಶಲತೆ, ವೇಗ ಹಾಗೂ ಆಯಾ ಕ್ರೀಡೆಗೆ ಅಗ್ಯವಿರುವ ಕನಿಷ್ಠ ಎತ್ತರ ಇವುಗಳನ್ನು ಪ್ರಥಮ ಹಂತದ ಆಯ್ಕೆಯಲ್ಲಿ (ಭಾಗ–1) ಪರೀಕ್ಷಿಸುವುದು ಹಾಗೂ ಈ ಪರೀಕ್ಷೆಗಳಲ್ಲಿ ಒಟ್ಟಾರೆ ಶೇ.50ಕ್ಕೂ ಹೆಚ್ಚು ಅಂಕಗಳನ್ನು ಪಡೆದವರಿಗೆ ಎರಡನೇ ಹಂತದ ಆಯ್ಕೆ ಪರೀಕ್ಷೆಗೆ ಅವಕಾಶ ಮಾಡಿಕೊಡುವುದು.

ಅಭ್ಯರ್ಥಿಗಳಿಂದ ಪಡೆಯಬೇಕಾದ ಅರ್ಜಿ ನಮೂನೆಯನ್ನು ಅನುಬಂಧ "ಅ"ನಲ್ಲಿ ಒದಗಿಸಲಾಗಿದೆ. ಜಿಲ್ಲಾ/ರಾಜ್ಯ ಕ್ರೀಡಾ ವಸತಿ ಶಾಲೆಗಳಿಗೆ ಪ್ರಥಮ ಸುತ್ತಿನ ಆಯ್ಕೆಯ ಪರೀಕ್ಷೆಯ ಫಲಿತಾಂಶ ಮತ್ತು ಗಳಿಸಿದ ಅಂಕಗಳನ್ನು ನಿಗದಿಪಡಿಸಿದ ಅರ್ಜಿ ನಮೂನೆಯ ಹಿಂಭಾಗದಲ್ಲಿ ದಾಖಲಿಸಿ ಸಹಿ ಮಾಡಿ ದೃಢೀಕರಿಸತಕ್ಕದ್ದು.

**<u>ಆಯ್ಕೆ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕ್ರಮಗಳು:</u>**

ಆಯ್ಕೆ ಪ್ರಕ್ರಿಯೆಯಲ್ಲಿ ಮುಕ್ತತೆ ಹಾಗೂ ಪಾರದರ್ಶಕತೆ ಆದ್ಯ ಗಮನ ನೀಡುವಲ್ಲಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳುವುದು.

- ಆಯ್ಕೆ ಪ್ರಕ್ರಿಯೆ/ಪರೀಕ್ಷೆ ನಡೆಯುವ ಸ್ಥಳಗಳಲ್ಲಿ ಅಗತ್ಯ ಸಿಬ್ಬಂದಿಯನ್ನು ನಿಯೋಜಿಸಿ ನಿಯಮಾನುಸಾರ ಆಯ್ಕೆ ಪರೀಕ್ಷೆ ನಡೆಸುವುದು ಮತ್ತು ಇದಕ್ಕಾಗಿ ಸೂಕ್ತ ವ್ಯವಸ್ಥೆ ಮಾಡುವುದು.
- ಆಯ್ಕೆ ಪರೀಕ್ಷೆಯಲ್ಲಿ ಪಾರದರ್ಶಕತೆ ಅಗತ್ಯವಾಗಿದ್ದು ಇದಕ್ಕೆ ಹೆಚ್ಚಿನ ಒತ್ತು ನೀಡುವುದು.
- ಆಯ್ಕೆ ಪರೀಕ್ಷೆಯ ಪ್ರತಿಯೊಂದು ಪರೀಕ್ಷೆಯಲ್ಲಿ ಅಭ್ಯರ್ಥಿಯ ಸಾಧನೆ ಮತ್ತು ಪಡೆದ ಅಂಕಗಳನ್ನು ಆ ಕೂಡಲೇ ಧ್ವನಿವರ್ಧಕದ ಮೂಲಕ ಪ್ರಕಟಿಸುವುದು.
- ಆಯ್ಕೆ ಸ್ಥಳಗಳಲ್ಲಿ ದೈಹಿಕ ಪರೀಕ್ಷೆಯ ನಾರ್ಮ್ಸ್ (ಆಯ್ಕೆ ಪರೀಕ್ಷೆ ಸೂತ್ರಗಳು) ಗಳನ್ನು ಸೂಚನಾ ಫಲಕದಲ್ಲಿ ಮುಂಚಿತವಾಗಿ ಪ್ರಕಟಿಸಲು ಮುಂಚಿತವಾಗಿ ವ್ಯವಸ್ಥೆ ಮಾಡುವುದು.
- ಆಯ್ಕೆ ಪರೀಕ್ಷೆಯ ಎಲ್ಲಾ ಪರೀಕ್ಷೆಗಳು ಮುಕ್ತಾಯವಾದ ನಂತರ ಎರಡನೇ ಹಂತದ ಆಯ್ಕೆಗೆ ಆಯ್ಕೆಯಾದವರ ಅಂತಿಮ ಪಟ್ಟಿಯನ್ನು ಅಭ್ಯರ್ಥಿ ಪಡೆದ ಅಂಕದ ವಿವರದೊಂದಿಗೆ ಸೂಚನಾ ಫಲಕದಲ್ಲಿ ಪ್ರಕಟಿಸುವುದು.
- ವಿಭಾಗ ಮಟ್ಟದ ಆಯ್ಕೆ ಪ್ರಕ್ರಿಯೆ ಸಮಯದಲ್ಲಿ ಕಡ್ಡಾಯವಾಗಿ ವಿಡಿಯೋ ಚಿತ್ರಣದ ವ್ಯವಸ್ಥೆ ಮಾಡುವುದು.

- ವಿಭಾಗ ಮಟ್ಟದ ಆಯ್ಕೆ ಪ್ರಕ್ರಿಯೆ ನಡೆಯುವ ಜಾಗದಲ್ಲಿ ಶಾಮಿಯಾನ, ಕುರ್ಚಿ, ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಆಯ್ಕೆಗೆ ಬಂದಿರುವ ಅಭ್ಯರ್ಥಿಗಳಿಗೆ ಮಧ್ಯಾಹ್ನ ಲಘು ಉಪಹಾರ ವ್ಯವಸ್ಥೆ ಮಾಡತಕ್ಕದ್ದು.
- ಆಯ್ಕೆ ಪ್ರಕ್ರಿಯೆಗೆ ಸಂಬಂಧಪಟ್ಟ ಕ್ರೀಡಾ ಉಪಕರಣಗಳನ್ನು ಮುಂಚಿತವಾಗಿ ವ್ಯವಸ್ಥೆ ಮಾಡಿಕೊಳ್ಳುವುದು ಹಾಗೂ ಕ್ರೀಡಾ ಅಂಕಣಗಳನ್ನು ಸಿದ್ಧಪಡಿಸಿ ಸ್ಥಳೀಯವಾಗಿ ಗುರುತುಗಾರರನ್ನು ನೇಮಿಸಿ ಮುಂಚಿತವಾಗಿ ವ್ಯವಸ್ಥೆ ಮಾಡಿಕೊಳ್ಳುವುದು.
- ವಿಭಾಗ ಮಟ್ಟದ ಆಯ್ಕೆ ಪ್ರಕ್ರಿಯೆಗೆ ನಿಯೋಜನೆಗೊಂಡ ಅಧಿಕಾರಿಗಳು ಹಾಗೂ ತರಬೇತುದಾರರಿಗೆ ಮುಂಚಿತವಾಗಿ ವಸತಿ ವ್ಯವಸ್ಥೆಯನ್ನು ಕಲ್ಪಿಸುವುದು.
- ಜಿಲ್ಲಾ ಕ್ರೀಡಾ ವಸತಿ ಶಾಲೆಗಳಿಗೆ ಆಯ್ಕೆ ಪ್ರಕ್ರಿಯೆ ಸಂದರ್ಭದಲ್ಲಿ ಸದರಿ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ತರಬೇತುದಾರರನ್ನು ಕಡ್ಡಾಯವಾಗಿ ಕರ್ತವ್ಯಕ್ಕೆ ನಿಯೋಜಿಸಿ ಕೇಂದ್ರ ಕಚೇರಿಯಿಂದ ನಿಯೋಜಿಸಿ ಆದೇಶಿಸಲ್ಪಟ್ಟಿರುವ ಆಯ್ಕೆ ಸಮಿತಿ ಸದಸ್ಯರ ತರಬೇತುದಾರರೊಂದಿಗೆ ಸಹಕರಿಸಲು ಸೂಚಿಸುವುದು.
- ಜಿಲ್ಲಾ/ರಾಜ್ಯ ಕ್ರೀಡಾ ಶಾಲೆಯ ಆಯ್ಕೆ ಪ್ರಕ್ರಿಯೆಯಲ್ಲಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ತರಬೇತುದಾರರು ಎಲ್ಲಾ ಆಯ್ಕೆ ಕೇಂದ್ರಗಳಲ್ಲೂ ಆಯ್ಕೆ ಪ್ರಕ್ರಿಯೆಯಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳುವಂತೆ ಸೂಚಿಸುವುದು.
- **2021-22ನೇ ಸಾಲಿನಲ್ಲಿ ಜಿಲ್ಲಾ ಕ್ರೀಡಾ ಶಾಲೆಗಾಗಿ ಆಯ್ಕೆ ಪ್ರಕ್ರಿಯೆಯನ್ನು ಸಂಬಂಧಪಟ್ಟ ಆಯಾ ಜಿಲ್ಲೆಯ ಸಹಾಯಕ ನಿರ್ದೇಶಕರು ಕೇಂದ್ರ ಕಚೇರಿಯಿಂದ ರಚಿಸಲಾದ ಆಯ್ಕೆ ಸಮಿತಿಯ ಸದಸ್ಯರ ಹೆಸರುಗಳನ್ನೊಳಗೊಂಡ ತರಬೇತುದಾರರ ಮುಖೇನ ಒಂದೇ ಹಂತದಲ್ಲಿ ದಿನಾಂಕ: 07.12.2020 ರಿಂದ 31-12-2020 ರ ಒಳಗಾಗಿ ಆಯ್ಕೆ ಪ್ರಕ್ರಿಯೆಯನ್ನು ಜಿಲ್ಲಾ ಕೇಂದ್ರ ಸ್ಥಳದಲ್ಲಿ ನಡೆಸಿ ಕೇಂದ್ರ ಕಚೇರಿಯ ಕ್ರೀಡಾ ಶಾಲೆ/ ಕ್ರೀಡಾ ನಿಲಯ ಶಾಖೆಗೆ ಅಧಿಕೃತವಾಗಿ ತಿಳಿಸುವಂತೆ ಸೂಚಿಸಲಾಗಿದೆ.**
- ಸಂಬಂಧಿಸಿದ ಉಪ/ ಸಹಾಯಕ ನಿರ್ದೇಶಕರುಗಳು ತಮ್ಮ ಅಧೀನದಲ್ಲಿ ಬರುವ ತರಬೇತುದಾರರನ್ನು ಮುಂಚಿತವಾಗಿ ಬಿಡುಗಡೆಗೊಳಿಸಿ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲ ತರಬೇತುದಾರರನ್ನು ಪ್ರತಿ ತಾಲ್ಲೂಕಿನಲ್ಲಿಯೂ ಆಯ್ಕೆ ಪ್ರಕ್ರಿಯೆಯಲ್ಲಿ ಆಯಾ ಕ್ರೀಡೆಗೆ ನೇಮಿಸಲಾದ ಸಂಚಾಲಕರುಗಳಿಗೆ ಆಯ್ಕೆ ನಡೆಯುವ ಸ್ಥಳದಲ್ಲಿ ವರದಿ ಮಾಡಿಕೊಳ್ಳಲು ಸೂಕ್ತ ಸೂಚನೆ ನೀಡುವುದು.
- **ಆಯ್ಕೆ ಸಮಿತಿಯು ಆಯಾ ಜಿಲ್ಲೆಗಳಲ್ಲಿರುವ ಕ್ರೀಡಾ ಶಾಲೆಗಳ 5ನೇ ತರಗತಿಯ ಪ್ರವೇಶಕ್ಕೆ ದಿನಾಂಕ: 01-01-2021 ರಿಂದ 15-03-2021 ಅವಧಿಯೊಳಗೆ ಪೂರ್ಣಗೊಳಿಸಿ ಮೆರಿಟ್ ಆಯ್ಕೆ ಪಟ್ಟಿಯನ್ನು ಕಡ್ಡಾಯವಾಗಿ ಕೇಂದ್ರ ಕಛೇರಿಗೆ ದಿನಾಂಕ: 31-03-2021 ರೊಳಗಾಗಿ ಸಲ್ಲಿಸುವುದು. ಮೆರಿಟ್ ಪಟ್ಟಿಯಲ್ಲಿ ಉನ್ನತ ಸ್ಥಾನಹೊಂದಿರುವವರು ಪ್ರವೇಶಕ್ಕೆ ಹಾಜರಾಗದಿದ್ದಲ್ಲಿ ಮೆರಿಟ್ ಪಟ್ಟಿಯಾನುಸಾರ ನಂತರದ ಅಭ್ಯರ್ಥಿಗಳಿಗೆ ಪ್ರವೇಶಾವಕಾಶ ನೀಡತಕ್ಕದ್ದು.**
- **ಜಿಲ್ಲಾ ಕ್ರೀಡಾ ಶಾಲೆಗೆ 5ನೇ ತರಗತಿಗೆ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲ್ಪಟ್ಟ ಪ್ರವೇಶಾರ್ಥಿಗಳ ಹೆಸರು ಹಾಗೂ ಕ್ರೀಡಾ ಪರೀಕ್ಷೆಗಳಲ್ಲಿ ಪಡೆದ ಅಂಕಗಳನ್ನು ನಮೂದಿಸಿ ಜೇಷ್ಠತಾ ಪಟ್ಟಿ ತಯಾರಿಸಿ ಕೇಂದ್ರ ಕಚೇರಿಗೆ ಆಯಾಯಾ ಜಿಲ್ಲೆಯ ಉಪ/ಸಹಾಯಕ ನಿರ್ದೇಶಕರುಗಳು ದೃಡೀಕರಿಸಿ ಅನುಮೋದನೆಗಾಗಿ ದಿನಾಂಕ: 31-03-2021 ರೊಳಗಾಗಿ ಕೇಂದ್ರ ಕಚೇರಿಗೆ ಸಲ್ಲಿಸಿ, ಮಾನ್ಯ ಆಯುಕ್ತರಿಂದ ಅನುಮೋದನೆ ಪಡೆದುಕೊಂಡ ನಂತರ ನಿಯಮಾನುಸಾರ ಪ್ರವೇಶ ನೀಡಲು ಕ್ರಮವಹಿಸುವುದು. ಇಲ್ಲದಿದ್ದ ಪಕ್ಷದಲ್ಲಿ ನಿಮ್ಮನ್ನೇ ನೇರವಾಗಿ ಹೊಣೆಗಾರರನ್ನಾಗಿ ಮಾಡಲಾಗುವುದು.**
- ಜಿಲ್ಲಾ ಕ್ರೀಡಾ ಶಾಲೆ/ರಾಜ್ಯ ಕ್ರೀಡಾ ಶಾಲೆಗಳಲ್ಲಿ ತರಬೇತಿ ಪಡೆದು 7ನೇ ತರಗತಿ ಹಾಗೂ 10ನೇ ತರಗತಿ ಅಭ್ಯಸಿಸುತ್ತಿರುವ ಕ್ರೀಡಾಪಟುಗಳು ಮುಂದಿನ ಸಾಲಿಗಾಗಿ ಆಯ್ಕೆ ಪ್ರಕ್ರಿಯೆಯಲ್ಲಿ ಕಡ್ಡಾಯವಾಗಿ ಭಾಗವಹಿಸಿ ಅರ್ಹತೆಯನ್ನು ಪಡೆಯಬೇಕು. 7ನೇ ತರಗತಿ ಮತ್ತು 10ನೇ ತರಗತಿಗಳಲ್ಲಿ ಇಲಾಖಾ ಕ್ರೀಡಾ ಶಾಲೆ/ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಾಗೂ ಜಿಲ್ಲಾ ಮಟ್ಟದ ಆಯ್ಕೆ ಪ್ರಕ್ರಿಯೆಯಲ್ಲಿ ಅರ್ಹರೆಂದು ಕಂಡುಬಂದ ಕ್ರೀಡಾಪಟುಗಳ ಪಟ್ಟಿಯನ್ನು ಆಯಾಯ ಜಿಲ್ಲಾ ಮಟ್ಟದ ಸಮಿತಿ ಸಹಿ ಮಾಡಿದ ಪಟ್ಟಿಯನ್ನು ಸಂಬಂಧಿತ ವಿಭಾಗ ಕೇಂದ್ರದ ಉಪ/ಸಹಾಯಕ ನಿರ್ದೇಶಕರಿಗೆ ಸಕಾಲದಲ್ಲಿ ಸಲ್ಲಿಸಿ ಪ್ರತಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು.
- ಪ್ರಸ್ತುತ 7ನೇ ತರಗತಿ ಹಾಗೂ 10ನೇ ತರಗತಿಗಳಲ್ಲಿ ಕ್ರೀಡಾ ಶಾಲೆ/ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿದ್ದು, ಪ್ರಥಮ ಹಂತದ ಆಯ್ಕೆಯಲ್ಲಿ ಭಾಗವಹಿಸಲು ಅನರ್ಹರೆಂದು ಕಂಡುಬರುವ ಕ್ರೀಡಾಪಟುಗಳನ್ನು ಆಯಾ

ಜಿಲ್ಲೆಗಳ ಉಪ/ಸಹಾಯಕ ನಿರ್ದೇಶಕರು ವೀಡ್‌ಔಟ್ ಎಂದು ಪರಿಗಣಿಸಿ, ಕ್ರೀಡಾ ಶಾಲೆ/ವಸ ನಿಲಯಗಳಿಂದ ಆಯಾಯ ಶೈಕ್ಷಣಿಕ ವರ್ಷದ ಅಂತ್ಯದಲ್ಲಿ ಬಿಡುಗಡೆಗೊಳಸತಕ್ಕದ್ದು.

- 8ನೇ ತರಗತಿ ಕ್ರೀಡಾ ಶಾಲೆ/ ವಸತಿ ನಿಲಯಗಳ ಪ್ರವೇಶಕ್ಕೆ ಜಿಲ್ಲಾ ಮಟ್ಟ, ವಿಭಾಗ ಮಟ್ಟ ಹಾಗೂ ರಾಜ್ಯ ಮಟ್ಟದ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸವುದು ಕಡ್ಡಾಯ, ಪ್ರಥಮ ಪಿ.ಯು.ಸಿ ಪ್ರವೇಶಕ್ಕೆ ವಿಭಾಗ ಮಟ್ಟದ ಆಯ್ಕೆ ಪ್ರಕ್ರಿಯೆಯಲ್ಲಿ ಕ್ರೀಡಾಪಟುಗಳು ನೇರವಾಗಿ ಭಾಗವಹಿಸತಕ್ಕದ್ದು, ಅರ್ಹರಿಗೆ ರಾಜ್ಯ ಮಟ್ಟದ ಆಯ್ಕೆ ಶಿಬಿರದಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಲಾಗುವುದು.
- ಜಿಲ್ಲಾ ಕ್ರೀಡಾ ಶಾಲೆ/ನಿಲಯಗಳಲ್ಲಿ ಹಾಲಿ ಇರುವ ಕ್ರೀಡಾಪಟುಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿದ್ದಲ್ಲಿ, ಪ್ರಸ್ತುತ ಸಾಲಿನ ಜಿಲ್ಲಾ ಹಾಗೂ ವಿಭಾಗ ಮಟ್ಟದ ಆಯ್ಕೆ ಪ್ರಕ್ರಿಯಯಲ್ಲಿ ಯಾವುದೇ ಕಾರಣದಿಂದ ಪಾಲ್ಗೊಳ್ಳಲು ಸಾಧ್ಯವಾಗದಿದ್ದಲ್ಲಿ ಸಕಾರಣವನ್ನು ಲಿಖಿತವಾಗಿ ನೀಡಿ ಸಂಬಂಧಿಸಿದ ತರಬೇತುದಾರರ ಹಾಗೂ ಉಪ/ಸಹಾಯಕ ನಿರ್ದೇಶಕರುಗಳ ಶಿಫಾರಸ್ಸಿನ ಅನ್ವಯ ನೇರವಾಗಿ ಅಂತಿಮ ಪರಿಶೀಲನಾ ತರಬೇತಿ ಶಿಬಿರದಲ್ಲಿ ಭಾಗವಹಿಸಲು ಅವಕಾಶ ನೀಡಲು ಕೇಂದ್ರ ಕಚೇರಿಯಿಂದ ಅನುಮೋದನೆ ಪಡೆಯುವುದು.
- ಕೋವಿಡ್-19 ಮುನ್ನೆಚ್ಚರಿಕೆ ಕ್ರಮಗಳು :- ಆಯ್ಕೆ ಪ್ರಕ್ರಿಯೆ ನಡೆಯುವ ಸ್ಥಳ (ಕಛೇರಿ ಮತ್ತು ವಸತಿ ಪ್ರದೇಶ) ಸಂಪೂರ್ಣ ಸ್ಯಾನಿಟೈಸ್ ಆಗಿರಬೇಕು. ಇಲ್ಲಿ ಭಾಗವಹಿಸುವ ಪ್ರತಿಯೊಬ್ಬರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಆಯ್ಕೆಗೆ ಬರುವ ಕ್ರೀಡಾಪಟುಗಳು ಕಡ್ಡಾಯವಾಗಿ ಕೋವಿಡ್ ಟೆಸ್ಟ್ ಮಾಡಿಸಿದ ವರದಿಯನ್ನು ತಪ್ಪದೇ ಹಾಜರುಪಡಿಸುವುದು. ವರದಿ ನೆಗೆಟಿವ್ ಬಂದಿದ್ದಲ್ಲಿ ಮಾತ್ರ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡತಕ್ಕದ್ದು. ಹಾಗೂ ಸರ್ಕಾರ ಕೋವಿಡ್-19ಗೆ ಸಂಬಂಧಿಸಿದಂತೆ ಜಾರಿ ಮಾಡಿರುವ ನಿಯಮಗಳನ್ನು ತಪ್ಪದೇ ಪಾಲಿಸುವುದು ಹಾಗೂ ಸಾಮಾಜಿಕ ಅಂತರ ಕಾಯ್ದುಕೊಂಡು, ಪೋಷಕರು ಕ್ರೀಡಾಪಟುಗಳೊಂದಿಗೆ ಯಾವುದೇ ಕಾರಣಕ್ಕೂ ಆಯ್ಕೆ ನಡೆಯುವ ಸ್ಥಳಕ್ಕೆ ತೆರಳದಂತೆ ನೋಡಿಕೊಳ್ಳುವುದು.

ಆಯ್ಕೆ ಹಂತ-1

ಪ್ರಥಮವಾಗಿ ಜಿಲ್ಲೆಯಲ್ಲಿರುವ ವಿವಿಧ ತಾಲ್ಲೂಕುವಾರು ಕೇಂದ್ರಗಳಲ್ಲಿ ಜಿಲ್ಲಾ ಆಯ್ಕೆಯನ್ನು ಸಂಘಟಿಸಿ, ಜಿಲ್ಲಾ ಕೇಂದ್ರಗಳಲ್ಲಿ ಒಟ್ಟಾರೆ ಮತ್ತೊಮ್ಮೆ ಆಯ್ಕೆಯನ್ನು ನಡೆಸುವುದು. ಈ ಆಯ್ಕೆಯಲ್ಲಿ ಕೆಳಕಂಡ ಅರ್ಹತೆಯನ್ನು ಹೊಂದಿರುವ ಭಾವಿ ಕ್ರೀಡಾ ಪ್ರತಿಭೆಗಳಿಗೆ ಮಾತ್ರ ಅವಕಾಶವಿರುತ್ತದೆ.

ಈ ಕೆಳಕಂಡ ಜಿಲ್ಲೆಗಳಲ್ಲಿ ನಮೂದಿಸಲಾಗಿರುವ ಕ್ರೀಡೆಗಳಲ್ಲಿ (5ನೇ ತರಗತಿಗೆ) ಪ್ರವೇಶವನ್ನು ಪಡೆಯಲು ಅವಕಾಶವಿರುತ್ತದೆ. ಆಯ್ಕೆ ಪ್ರಕ್ರಿಯೆಯಲ್ಲಿ ನಡೆಸಲಾಗುವ ದೈಹಿಕ ಸಾಮರ್ಥ್ಯ ಪರೀಕ್ಷೆಯಲ್ಲಿ ಮತ್ತು ಕ್ರೀಡೆಗೆ ಸಂಬಂಧಿಸಿದಂತಹ ಪ್ರಾಥಮಿಕ ಹಾಗೂ ಪ್ರಾಯೋಗಿಕ ಪರೀಕ್ಷೆಯಲ್ಲಿ ಪಡೆಯುವ ಅಂಕಗಳ ಗರಿಷ್ಠ ಪಟ್ಟಿಯ ಕ್ರಮಾನುಕ್ರಮದಲ್ಲಿ ಪ್ರವೇಶವನ್ನು ನಿರ್ಧರಿಸಲಾಗುವುದು.

5ನೇ ತರಗತಿಗೆ ಪ್ರವೇಶ ಪಡೆಯಲು ಲಭ್ಯವಿರುವ ಕ್ರೀಡಾಶಾಲೆಗಳ ಹೆಸರು ಮತ್ತು ಕ್ರೀಡೆಗಳ ವಿವರ

| ಕ್ರ.ಸ | ಜಿಲ್ಲೆಯ ಹೆಸರು | ಕ್ರೀಡೆ |
|---|---|---|
| 01 | ಕ್ರೀಡಾ ವಸತಿ ನಿಲಯ, ಬೀದರ್ | ಅಥ್ಲೆಟಿಕ್ಸ್, ವಾಲಿಬಾಲ್, ಬಾಸ್ಕೆಟ್‌ಬಾಲ್ |
| 02 | ಕ್ರೀಡಾ ವಸತಿ ನಿಲಯ, ಚಿತ್ರದುರ್ಗ | ಅಥ್ಲೆಟಿಕ್ಸ್ ವಾಲಿಬಾಲ್, ಈಜು |
| 03 | ಕ್ರೀಡಾ ವಸತಿ ನಿಲಯ, ಚಿಕ್ಕಮಗಳೂರು | ಅಥ್ಲೆಟಿಕ್ಸ್, ವಾಲಿಬಾಲ್, ಜೂಡೋ |
| 04 | ಕ್ರೀಡಾ ವಸತಿ ನಿಲಯ, ಚಾಮರಾಜನಗರ | ವಾಲಿಬಾಲ್, ಫುಟ್‌ಬಾಲ್ |
| 05 | ಕ್ರೀಡಾ ವಸತಿ ನಿಲಯ, ದಾವಣಗೆರೆ | ಕುಸ್ತಿ, ಅಥ್ಲೆಟಿಕ್ಸ್, ಕಬಡ್ಡಿ, ಖೋಖೋ |
| 06 | ಕ್ರೀಡಾ ವಸತಿ ನಿಲಯ, ಧಾರವಾಡ | ಜಿಮ್ನಾಸ್ಟಿಕ್ಸ್, ಹಾಕಿ, ಅಥ್ಲೆಟಿಕ್ಸ್, ಕುಸ್ತಿ |
| 07 | ಕ್ರೀಡಾ ವಸತಿ ನಿಲಯ, ಗದಗ | ಹಾಕಿ, ಕುಸ್ತಿ ಸೈಕ್ಲಿಂಗ್ |
| 08 | ಕ್ರೀಡಾ ವಸತಿ ನಿಲಯ, ಹಾವೇರಿ | ಅಥ್ಲೆಟಿಕ್ಸ್, ಹಾಕಿ, ಈಜು |
| 09 | ಕ್ರೀಡಾ ವಸತಿ ನಿಲಯ, ಕೊಪ್ಪಳ | ವಾಲಿಬಾಲ್, ಅಥ್ಲೆಟಿಕ್ಸ್, ಈಜು |
| 10 | ಕ್ರೀಡಾ ವಸತಿ ನಿಲಯ, ಶಿವಮೊಗ್ಗ | ಅಥ್ಲೆಟಿಕ್ಸ್, ಹಾಕಿ, ಫುಟ್‌ಬಾಲ್ |
| 11 | ಕ್ರೀಡಾ ವಸತಿ ನಿಲಯ, ತುಮಕೂರು | ಅಥ್ಲೆಟಿಕ್ಸ್, ವಾಲಿಬಾಲ್, ಜಿಮ್ನಾಸ್ಟಿಕ್ಸ್ |
| 12 | ಕ್ರೀಡಾ ವಸತಿ ನಿಲಯ, ಹಳಿಯಾಳ | ಕುಸ್ತಿ |
| 13 | ಕ್ರೀಡಾ ವಸತಿ ನಿಲಯ, ಬಾಗಲಕೋಟೆ | ಕುಸ್ತಿ, ಸೈಕ್ಲಿಂಗ್ |
| 14 | ಕ್ರೀಡಾ ವಸತಿ ನಿಲಯ, ವಿಜಯಪುರ | ಬ್ಯಾಸ್ಕೆಟ್‌ಬಾಲ್, ಸೈಕ್ಲಿಂಗ್, ವಾಲಿಬಾಲ್ |

| | | |
|---|---|---|
| | ಕ್ರೀಡಾ ವಸತಿ ನಿಲಯ, ರಾಮನಗರ | ಅಥ್ಲೆಟಿಕ್ಸ್, ಫುಟ್‌ಬಾಲ್ |
| 16 | ಕ್ರೀಡಾ ವಸತಿ ನಿಲಯ, ಕೋಲಾರ | ಅಥ್ಲೆಟಿಕ್ಸ್, ಫುಟ್‌ಬಾಲ್ |
| 17 | ಕ್ರೀಡಾ ವಸತಿ ನಿಲಯ, ದಕ್ಷಿಣ ಕನ್ನಡ | ಅಥ್ಲೆಟಿಕ್ಸ್, ವಾಲಿಬಾಲ್ |
| 18 | ಕ್ರೀಡಾ ವಸತಿ ನಿಲಯ, ಹಾಸನ | ವಾಲಿಬಾಲ್, ಹಾಕಿ, ಬಾಸ್ಕೆಟ್‌ಬಾಲ್ |
| 19 | ಕ್ರೀಡಾ ವಸತಿ ನಿಲಯ, ಮಂಡ್ಯ | ಅಥ್ಲೆಟಿಕ್ಸ್, ಫುಟ್‌ಬಾಲ್, ಬಾಸ್ಕೆಟ್‌ಬಾಲ್, ಕಬಡ್ಡಿ |
| 20 | ಕ್ರೀಡಾ ವಸತಿ ನಿಲಯ, ರಾಯಚೂರು | ಹಾಕಿ, ಫುಟ್‌ಬಾಲ್ |
| 21 | ಕ್ರೀಡಾ ವಸತಿ ನಿಲಯ, ಉಡುಪಿ | ಅಥ್ಲೆಟಿಕ್ಸ್, ವಾಲಿಬಾಲ್ |
| 22 | ಕ್ರೀಡಾ ವಸತಿ ನಿಲಯ, ಮೈಸೂರು | ಜಿಮ್ನಾಸ್ಟಿಕ್ಸ್, ಅಥ್ಲೆಟಿಕ್ಸ್, ಕುಸ್ತಿ |
| 23 | ಕ್ರೀಡಾ ವಸತಿ ನಿಲಯ, ಬೆಳಗಾವಿ | ವಾಲಿಬಾಲ್, ಕುಸ್ತಿ, ಜೂಡೋ, ಅಥ್ಲೆಟಿಕ್ಸ್ |
| 24 | ಕ್ರೀಡಾ ವಸತಿ ನಿಲಯ, ಯಾದಗಿರಿ | ವಾಲಿಬಾಲ್, ಅಥ್ಲೆಟಿಕ್ಸ್ |
| 25 | ಕ್ರೀಡಾ ವಸತಿ ನಿಲಯ, ಕಲ್ಬುರ್ಗಿ | ಅಥ್ಲೆಟಿಕ್ಸ್, ಹಾಕಿ |
| 26 | ಕ್ರೀಡಾ ವಸತಿ ನಿಲಯ, ಬಳ್ಳಾರಿ | ಅಥ್ಲೆಟಿಕ್ಸ್, ಹಾಕಿ |
| 27 | ಕ್ರೀಡಾ ವಸತಿ ನಿಲಯ, ಚಿಕ್ಕಬಳ್ಳಾಪುರ | ಹಾಕಿ, ಫುಟ್‌ಬಾಲ್ |
| 28 | ಕ್ರೀಡಾ ವಸತಿ ನಿಲಯ, ಕಾರವಾರ | ವಾಲಿಬಾಲ್, ಅಥ್ಲೆಟಿಕ್ಸ್ |
| 29 | ಕ್ರೀಡಾ ವಸತಿ ನಿಲಯ, ಕೊಡಗು (ಮಡಿಕೇರಿ) | ಅಥ್ಲೆಟಿಕ್ಸ್ ಹಾಕಿ, |
| 30 | ಕ್ರೀಡಾ ವಸತಿ ನಿಲಯ, ಸಂತೇಮರಳ್ಳಿ | ಆರ್ಚರಿ, ಫೆನ್ಸಿಂಗ್ |

1) 5ನೇ ತರಗತಿಗೆ ಮಾತ್ರ ಜಿಲ್ಲಾ ಕ್ರೀಡಾಶಾಲೆಗೆ ಪ್ರವೇಶ ನೀಡಲಾಗುವುದು.
2) ಆಯಾ ವರ್ಷದ ಜೂನ್ 1 ಕ್ಕೆ 11 ವರ್ಷದೊಳಗಿರಬೇಕು.

<u>ಆಯ್ಕೆ ಹಂತ-2</u>

ಈ ಕೆಳಕಂಡ ಜಿಲ್ಲಾ ಕ್ರೀಡಾ ಶಾಲೆ/ವಸತಿ ನಿಲಯಗಳಲ್ಲಿ 8ನೇ ತರಗತಿಗೆ ಪ್ರವೇಶವನ್ನು ಪಡೆಯಲು ಅವಕಾಶವಿರುತ್ತದೆ.

**<u>8ನೇ ತರಗತಿಗೆ ಪ್ರವೇಶ ಪಡೆಯಲು ಲಭ್ಯವಿರುವ ಕ್ರೀಡಾ ಶಾಲೆ/ನಿಲಯಗಳ ಹೆಸರು ಮತ್ತು ಕ್ರೀಡೆಗಳ ವಿವರ</u>**

| ಕ್ರ.ಸ | ಜಿಲ್ಲೆಯ ಹೆಸರು | ಕ್ರೀಡೆ |
|---|---|---|
| 01 | ಕ್ರೀಡಾ ವಸತಿ ನಿಲಯ, ಬೀದರ್ | ಅಥ್ಲೆಟಿಕ್ಸ್, ವಾಲಿಬಾಲ್, ಬಾಸ್ಕೆಟ್‌ಬಾಲ್ |
| 02 | ಕ್ರೀಡಾ ವಸತಿ ನಿಲಯ, ಚಿತ್ರದುರ್ಗ | ಅಥ್ಲೆಟಿಕ್ಸ್, ವಾಲಿಬಾಲ್, ಈಜು |
| 03 | ಕ್ರೀಡಾ ವಸತಿ ನಿಲಯ, ಚಿಕ್ಕಮಗಳೂರು | ಅಥ್ಲೆಟಿಕ್ಸ್, ವಾಲಿಬಾಲ್, ಜುಡೋ |
| 04 | ಕ್ರೀಡಾ ವಸತಿ ನಿಲಯ, ಚಾಮರಾಜನಗರ | ವಾಲಿಬಾಲ್, ಫುಟ್‌ಬಾಲ್ |
| 05 | ಕ್ರೀಡಾ ವಸತಿ ನಿಲಯ, ದಾವಣಗೆರೆ | ಕುಸ್ತಿ, ಅಥ್ಲೆಟಿಕ್ಸ್, ಕಬ್ಬಡಿ, ಖೋ-ಖೋ |
| 06 | ಕ್ರೀಡಾ ವಸತಿ ನಿಲಯ, ಧಾರವಾಡ | ಜಿಮ್ನಾಸ್ಟಿಕ್ಸ್, ಹಾಕಿ, ಅಥ್ಲೆಟಿಕ್ಸ್, ಕುಸ್ತಿ |
| 07 | ಕ್ರೀಡಾ ವಸತಿ ನಿಲಯ, ಗದಗ | ಹಾಕಿ, ಕುಸ್ತಿ, ಸೈಕ್ಲಿಂಗ್ |
| 08 | ಕ್ರೀಡಾ ವಸತಿ ನಿಲಯ, ಹಾವೇರಿ | ಅಥ್ಲೆಟಿಕ್ಸ್, ಹಾಕಿ ಈಜು |
| 09 | ಕ್ರೀಡಾ ವಸತಿ ನಿಲಯ, ಕೊಪ್ಪಳ | ವಾಲಿಬಾಲ್, ಅಥ್ಲೆಟಿಕ್ಸ್, ಈಜು |
| 10 | ಕ್ರೀಡಾ ವಸತಿ ನಿಲಯ, ಶಿವಮೊಗ್ಗ | ಅಥ್ಲೆಟಿಕ್ಸ್, ಹಾಕಿ, ಫುಟ್‌ಬಾಲ್ |
| 11 | ಕ್ರೀಡಾ ವಸತಿ ನಿಲಯ, ತುಮಕೂರು | ಅಥ್ಲೆಟಿಕ್ಸ್, ವಾಲಿಬಾಲ್, ಜಿಮ್ನಾಸ್ಟಿಕ್ಸ್ |
| 12 | ಕ್ರೀಡಾ ವಸತಿ ನಿಲಯ, ಹಳಿಯಾಳ | ಕುಸ್ತಿ |
| 13 | ಕ್ರೀಡಾ ವಸತಿ ನಿಲಯ, ಬಾಗಲಕೋಟೆ | ಕುಸ್ತಿ ಸೈಕ್ಲಿಂಗ್ |
| 14 | ಕ್ರೀಡಾ ವಸತಿ ನಿಲಯ, ವಿಜಯಪುರ | ಬ್ಯಾಸ್ಕೆಟ್‌ಬಾಲ್, ಸೈಕ್ಲಿಂಗ್, ವಾಲಿಬಾಲ್ |
| 15 | ಕ್ರೀಡಾ ವಸತಿ ನಿಲಯ, ರಾಮನಗರ | ಅಥ್ಲೆಟಿಕ್ಸ್, ಫುಟ್‌ಬಾಲ್ |
| 16 | ಕ್ರೀಡಾ ವಸತಿ ನಿಲಯ, ಕೋಲಾರ | ಅಥ್ಲೆಟಿಕ್ಸ್, ಫುಟ್‌ಬಾಲ್ |
| 17 | ಕ್ರೀಡಾ ವಸತಿ ನಿಲಯ, ದಕ್ಷಿಣ ಕನ್ನಡ | ಅಥ್ಲೆಟಿಕ್ಸ್, ವಾಲಿಬಾಲ್ |
| 18 | ಕ್ರೀಡಾ ವಸತಿ ನಿಲಯ, ಹಾಸನ | ವಾಲಿಬಾಲ್, ಹಾಕಿ, ಬಾಸ್ಕೆಟ್‌ಬಾಲ್ |
| 19 | ಕ್ರೀಡಾ ವಸತಿ ನಿಲಯ, ಮಂಡ್ಯ | ಫುಟ್‌ಬಾಲ್, ಬಾಸ್ಕೆಟ್‌ಬಾಲ್, ಅಥ್ಲೆಟಿಕ್ಸ್, ಕಬಡ್ಡಿ |
| 20 | ಕ್ರೀಡಾ ವಸತಿ ನಿಲಯ, ರಾಯಚೂರು | ಹಾಕಿ, ಫುಟ್‌ಬಾಲ್ |

| | | |
|---|---|---|
| 21 | ಕ್ರೀಡಾ ವಸತಿ ನಿಲಯ, ಉಡುಪಿ | ಅಥ್ಲೆಟಿಕ್ಸ್, ವಾಲಿಬಾಲ್, |
| 22 | ಕ್ರೀಡಾ ವಸತಿ ನಿಲಯ, ಮೈಸೂರು | ಜಿಮ್ನಾಸ್ಟಿಕ್ಸ್, ಅಥ್ಲೆಟಿಕ್ಸ್, ಕುಸ್ತಿ, ಬಾಸ್ಕೆಟ್‌ಬಾಲ್ |
| 23 | ಕ್ರೀಡಾ ವಸತಿ ನಿಲಯ, ಬೆಳಗಾವಿ | ಕುಸ್ತಿ, ಜೂಡೋ, ಸೈಕ್ಲಿಂಗ್, ವಾಲಿಬಾಲ್ |
| 24 | ಕ್ರೀಡಾ ವಸತಿ ನಿಲಯ, ಕಾರವಾರ | ವಾಲಿಬಾಲ್, ಅಥ್ಲೆಟಿಕ್ಸ್ |
| 25 | ಕ್ರೀಡಾ ವಸತಿ ಶಾಲೆ, ಕೂಡಿಗೆ | ಅಥ್ಲೆಟಿಕ್ಸ್, ಹಾಕಿ, ಜಿಮ್ನಾಸ್ಟಿಕ್ಸ್ |
| 26 | ಕ್ರೀಡಾ ವಸತಿ ಶಾಲೆ, ವಿದ್ಯಾನಗರ | ವಾಲಿಬಾಲ್, ಅಥ್ಲೆಟಿಕ್ಸ್, ಫುಟ್‌ಬಾಲ್, ಬಾಸ್ಕೆಟ್‌ಬಾಲ್, |
| 27 | ಕ್ರೀಡಾ ವಸತಿ ನಿಲಯ, ಸಂತೇಮರಳ್ಳಿ | ಆರ್ಚರಿ, ಫೆನ್ಸಿಂಗ್ |

ಆಯ್ಕೆ ಪ್ರಕ್ರಿಯೆಯಲ್ಲಿ ನಡೆಸಲಾಗುವ ದೈಹಿಕ ಸಾಮರ್ಥ್ಯ ಪರೀಕ್ಷೆಯಲ್ಲಿ ಮತ್ತು ಕ್ರೀಡೆಗೆ ಸಂಬಂಧಿಸಿದಂತಹ ಪ್ರಾಥಮಿಕ ಹಾಗೂ ಪ್ರಾಯೋಗಿಕ ಪರೀಕ್ಷೆಯಲ್ಲಿ ಪಡೆಯುವ ಅಂಕಗಳ ಗರಿಷ್ಟ ಪಟ್ಟಿಯ ಕ್ರಮಾನುಕ್ರಮದಲ್ಲಿ ಪ್ರವೇಶವನ್ನು ನಿರ್ಧರಿಸಲಾಗುವುದು. ಈ ಕ್ರೀಡಾ ಶಾಲೆ/ವಸತಿ ನಿಲಯಗಳಿಗೆ ಆಯಾ ವರ್ಷದ ಜೂನ್-1 ಕ್ಕೆ 14 ವರ್ಷದೊಳಗಿರುವವರಿಗೆ ಪ್ರವೇಶ ನೀಡಲಾಗುವುದು. ಪ್ರಸ್ತುತ ಇಲಾಖಾ ಜಿಲ್ಲಾ ಕ್ರೀಡಾ ಶಾಲೆ/ವಸತಿ ನಿಲಯಗಳಲ್ಲಿ 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಕ್ರೀಡಾಪಟುಗಳು ಸೇರಿದಂತೆ ಎಲ್ಲಾ ಕ್ರೀಡಾಪಟುಗಳು 8ನೇ ತರಗತಿ ಕ್ರೀಡಾ ಶಾಲೆ/ವಸತಿ ನಿಲಯ ಪ್ರವೇಶಕ್ಕೆ ಜಿಲ್ಲಾ, ವಿಭಾಗ ಮತ್ತು ರಾಜ್ಯ ಮಟ್ಟದ ಆಯ್ಕೆ ಪ್ರಕ್ರಿಯೆಗಳಲ್ಲಿ ಭಾಗವಹಿಸುವುದು ಕಡ್ಡಾಯ.

ಪ್ರಥಮ ಪಿಯುಸಿ ಪ್ರವೇಶ ಪಡೆಯಲು ಲಭ್ಯವಿರುವ ಕ್ರೀಡಾ ನಿಲಯಗಳ ಹೆಸರು ಮತ್ತು ಕ್ರೀಡೆಗಳ ವಿವರ:

| ಕ್ರ.ಸ | ಜಿಲ್ಲೆಯ ಹೆಸರು | ಕ್ರೀಡೆ |
|---|---|---|
| 01 | ಕ್ರೀಡಾ ವಸತಿ ನಿಲಯ, ಬೆಂಗಳೂರು | ಅಥ್ಲೆಟಿಕ್ಸ್, ಹಾಕಿ, ವಾಲಿಬಾಲ್, ಬಾಸ್ಕೆಟ್‌ಬಾಲ್ |
| 02 | ಕ್ರೀಡಾ ವಸತಿ ನಿಲಯ, ಮೈಸೂರು | ಅಥ್ಲೆಟಿಕ್ಸ್, ವಾಲಿಬಾಲ್, ಹಾಕಿ, ಬಾಸ್ಕೆಟ್‌ಬಾಲ್, ಕುಸ್ತಿ |
| 03 | ಕ್ರೀಡಾ ವಸತಿ ನಿಲಯ, ಬಳ್ಳಾರಿ | ಫುಟ್‌ಬಾಲ್ |
| 04 | ಕ್ರೀಡಾ ವಸತಿ ನಿಲಯ, ಬೆಳಗಾವಿ | ಜೂಡೋ, ಕುಸ್ತಿ, ವಾಲಿಬಾಲ್ |
| 05 | ಕ್ರೀಡಾ ವಸತಿ ನಿಲಯ, ದಾವಣಗೆರೆ | ಕುಸ್ತಿ, ಖೋ-ಖೋ |
| 06 | ಕ್ರೀಡಾ ವಸತಿ ನಿಲಯ, ವಿಜಯಪುರ | ಸೈಕ್ಲಿಂಗ್, ಬ್ಯಾಸ್ಕೆಟ್‌ಬಾಲ್ |
| 07 | ಕ್ರೀಡಾ ವಸತಿ ನಿಲಯ, ಉಡುಪಿ | ಅಥ್ಲೆಟಿಕ್ಸ್, ವಾಲಿಬಾಲ್ |
| 08 | ಕ್ರೀಡಾ ವಸತಿ ಶಾಲೆ, ವಿದ್ಯಾನಗರ | ಅಥ್ಲೆಟಿಕ್ಸ್, ಬ್ಯಾಸ್ಕೆಟ್‌ಬಾಲ್, ಪುಟ್ಬಾಲ್, ವಾಲಿಬಾಲ್ |
| 09 | ಕ್ರೀಡಾ ವಸತಿ ಶಾಲೆ, ಕೂಡಿಗೆ | ಅಥ್ಲೆಟಿಕ್ಸ್, ಹಾಕಿ, ಜಿಮ್ನಾಸ್ಟಿಕ್ಸ್ |
| 10 | ಕ್ರೀಡಾ ವಸತಿ ನಿಲಯ, ಸಂತೇಮರಳ್ಳಿ | ಆರ್ಚರಿ, ಫೆನ್ಸಿಂಗ್ |

ಪ್ರಸ್ತುತ ಇಲಾಖಾ ಜಿಲ್ಲಾ ಕ್ರೀಡಾ ಶಾಲೆ/ವಸತಿ ನಿಲಯಗಳಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಕ್ರೀಡಾಪಟುಗಳು ಸೇರಿದಂತೆ ಎಲ್ಲಾ ಕ್ರೀಡಾಪಟುಗಳು ಪ್ರಥಮ ಪಿ.ಯು.ಸಿ ಗೆ ಕ್ರೀಡಾ ಶಾಲೆ/ವಸತಿ ನಿಲಯ ಪ್ರವೇಶಕ್ಕೆ ವಿಭಾಗ ಮತ್ತು ರಾಜ್ಯ ಮಟ್ಟದ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ಕಡ್ಡಾಯ.

1) ಆಯಾ ವರ್ಷದ ಜೂನ್ 1ರಂದು 18 ವರ್ಷದೊಳಗಿರಬೇಕು.

2) ಪ್ರಥಮ ಪಿಯುಸಿಗೆ ಮಾತ್ರ ಪ್ರವೇಶ ನೀಡಲಾಗುವುದು.

2021-22 ನೇ ಸಾಲಿನ 8ನೇ ತರಗತಿ ಹಾಗೂ ಪ್ರಥಮ ಪಿ.ಯು.ಸಿ ಪ್ರವೇಶಕ್ಕೆ ವಿಭಾಗ ಮಟ್ಟದ ಆಯ್ಕೆ ಪ್ರಕ್ರಿಯೆಯನ್ನು ಈ ಕೆಳಕಂಡ ಸ್ಥಳ ಮತ್ತು ದಿನಾಂಕಗಳಂದು ಆಯೋಜಿಸಲಾಗುವುದು.

| ಕ್ರ. ಸಂ. | ವಿಭಾಗ | ಆಯ್ಕೆ ಪರೀಕ್ಷೆ ನಡೆಯುವ ಸ್ಥಳ | ಆಯ್ಕೆ ಪ್ರಕ್ರಿಯೆ ನಡೆಯುವ ದಿನಾಂಕ | ಆಯ್ಕೆ ಪ್ರಕ್ರಿಯೆ ನಡೆಸಬೇಕಾದ ಕ್ರೀಡೆಗಳು |
|---|---|---|---|---|
| 01 | ಬೆಳಗಾವಿ | ಡಾ.ಬಿ.ಆರ್. ಅಂಬೇಡ್ಕರ್, ನವನಗರ ಜಿಲ್ಲಾ ಕ್ರೀಡಾಂಗಣ, ಬಾಗಲಕೋಟೆ ಜಿಲ್ಲೆ | 04.01.2021 ಕಿರಿಯರ ವಿಭಾಗ<br>05.01.2021 ಹಿರಿಯರ ವಿಭಾಗ | ಸೈಕ್ಲಿಂಗ್, ಅಥ್ಲೆಟಿಕ್ಸ್, ಬಾಸ್ಕೆಟ್‌ಬಾಲ್, ಫುಟ್‌ಬಾಲ್, ಹಾಕಿ, ವಾಲಿಬಾಲ್ |
| 02 | ಬೆಳಗಾವಿ | ಡಾ.ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣ, ವಿಜಯಪುರ ಜಿಲ್ಲೆ | 07.01.2021 ಕಿರಿಯರ ವಿಭಾಗ<br>08.01.2021 ಹಿರಿಯರ ವಿಭಾಗ | ಸೈಕ್ಲಿಂಗ್ |
| 03 | ಬೆಳಗಾವಿ | ಆರ್.ಎನ್. ಶೆಟ್ಟಿ ಜಿಲ್ಲಾ ಕ್ರೀಡಾಂಗಣ, ಧಾರವಾಡ ಜಿಲ್ಲೆ | 07.01.2021 ಕಿರಿಯರ ವಿಭಾಗ<br>08.01.2021 ಹಿರಿಯರ ವಿಭಾಗ | ಅಥ್ಲೆಟಿಕ್ಸ್, ಜೂಡೋ, ಬಾಸ್ಕೆಟ್‌ಬಾಲ್, ಫುಟ್‌ಬಾಲ್, ಜಿಮ್ನಾಸ್ಟಿಕ್ಸ್, ಹಾಕಿ, ವಾಲಿಬಾಲ್, ಕುಸ್ತಿ. |
| 04 | ಬೆಳಗಾವಿ | ಜಿಲ್ಲಾ ಕ್ರೀಡಾಂಗಣ ಶಿರಸಿ | 10.01.2021 ಕಿರಿಯರ ವಿಭಾಗ<br>11.01.2021 ಹಿರಿಯರ ವಿಭಾಗ | ಅಥ್ಲೆಟಿಕ್ಸ್, ಬಾಸ್ಕೆಟ್‌ಬಾಲ್, ಹಾಕಿ, ವಾಲಿಬಾಲ್. |
| 05 | ಬೆಳಗಾವಿ | ಜಿಲ್ಲಾ ಕ್ರೀಡಾಂಗಣ, ನೆಹರೂ ನಗರ, ಬೆಳಗಾವಿ ಜಿಲ್ಲೆ | 13.01.2021 ಕಿರಿಯರ ವಿಭಾಗ<br>14.01.2021 ಹಿರಿಯರ ವಿಭಾಗ | ಅಥ್ಲೆಟಿಕ್ಸ್, ಬಾಸ್ಕೆಟ್‌ಬಾಲ್, ಜಿಮ್ನಾಸ್ಟಿಕ್ಸ್, ಹಾಕಿ, ಜೂಡೋ, ವಾಲಿಬಾಲ್, ಕುಸ್ತಿ, ಈಜು. |
| 06 | ಕಲ್ಬುರ್ಗಿ | ಚಂದ್ರಶೇಖರ್ ಪಾಟೀಲ್, ಜಿಲ್ಲಾ ಕ್ರೀಡಾಂಗಣ, ಕಲ್ಬುರ್ಗಿ ಜಿಲ್ಲೆ | 16.01.2021 ಕಿರಿಯರ ವಿಭಾಗ<br>17.01.2021 ಹಿರಿಯರ ವಿಭಾಗ | ಅಥ್ಲೆಟಿಕ್ಸ್, ಬಾಸ್ಕೆಟ್‌ಬಾಲ್, ಫುಟ್‌ಬಾಲ್, ಹಾಕಿ, ವಾಲಿಬಾಲ್, ಕುಸ್ತಿ. |
| 07 | ಕಲ್ಬುರ್ಗಿ | ಜಿಲ್ಲಾ ಕ್ರೀಡಾಂಗಣ, ಹೊಸಪೇಟೆ | 19.01.2021 ಕಿರಿಯರ ವಿಭಾಗ<br>20.01.2021 ಹಿರಿಯರ ವಿಭಾಗ | ಅಥ್ಲೆಟಿಕ್ಸ್, ಬಾಸ್ಕೆಟ್‌ಬಾಲ್, ಫುಟ್‌ಬಾಲ್, ಹಾಕಿ, ವಾಲಿಬಾಲ್. |
| 08 | ಬೆಂಗಳೂರು | ನೆಹರೂ ಜಿಲ್ಲಾ ಕ್ರೀಡಾಂಗಣ, ಶಿವಮೊಗ್ಗ ಜಿಲ್ಲೆ | 22.01.2021 ಕಿರಿಯರ ವಿಭಾಗ<br>23.01.2021 ಹಿರಿಯರ ವಿಭಾಗ | ಅಥ್ಲೆಟಿಕ್ಸ್, ಬಾಸ್ಕೆಟ್‌ಬಾಲ್, ಫುಟ್‌ಬಾಲ್, ಹಾಕಿ, ವಾಲಿಬಾಲ್. |
| 09 | ಮೈಸೂರು | ಮಂಗಳಾ ಕ್ರೀಡಾಂಗಣ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ | 27.01.2021 ಕಿರಿಯರ ವಿಭಾಗ<br>28.01.2021 ಹಿರಿಯರ ವಿಭಾಗ | ಅಥ್ಲೆಟಿಕ್ಸ್, ಬಾಸ್ಕೆಟ್‌ಬಾಲ್, ಫುಟ್‌ಬಾಲ್, ಹಾಕಿ, ವಾಲಿಬಾಲ್. |
| 10 | ಮೈಸೂರು | ಕ್ರೀಡಾ ವಸತಿ ಶಾಲೆ/ನಿಲಯ, ಕೂಡಿಗೆ | 30.01.2021 ಕಿರಿಯರ ವಿಭಾಗ<br>31.01.2021 ಹಿರಿಯರ ವಿಭಾಗ | ಅಥ್ಲೆಟಿಕ್ಸ್, ಜಿಮ್ನಾಸ್ಟಿಕ್ಸ್, ಬಾಸ್ಕೆಟ್‌ಬಾಲ್, ಫುಟ್‌ಬಾಲ್, ಹಾಕಿ, ವಾಲಿಬಾಲ್. |
| 11 | ಮೈಸೂರು | ಚಾಮುಂಡಿ ವಿಹಾರ ಜಿಲ್ಲಾ ಕ್ರೀಡಾಂಗಣ, ಮೈಸೂರು ಜಿಲ್ಲೆ | 02-02-2021 ಕಿರಿಯರ ವಿಭಾಗ<br>03-02-2021 ಹಿರಿಯರ ವಿಭಾಗ | ಅಥ್ಲೆಟಿಕ್ಸ್, ಬಾಸ್ಕೆಟ್‌ಬಾಲ್, ಫುಟ್‌ಬಾಲ್, ಜಿಮ್ನಾಸ್ಟಿಕ್ಸ್, ಹಾಕಿ, ಜೂಡೋ, ವಾಲಿಬಾಲ್, ಕುಸ್ತಿ. |
| 12 | ಬೆಂಗಳೂರು | ಮಹಾತ್ಮಗಾಂಧಿ ಕ್ರೀಡಾಂಗಣ ಚಿಕ್ಕಬಳ್ಳಾಪುರ ಜಿಲ್ಲೆ | 05-02-2021 ಕಿರಿಯರ ವಿಭಾಗ<br>06-02-2021 ಹಿರಿಯರ ವಿಭಾಗ | ಅಥ್ಲೆಟಿಕ್ಸ್, ಬಾಸ್ಕೆಟ್‌ಬಾಲ್, ಫುಟ್‌ಬಾಲ್, ಹಾಕಿ, ವಾಲಿಬಾಲ್. |
| 13 | ಬೆಂಗಳೂರು | ಶ್ರೀ ಕಂಠೀರವ ಕ್ರೀಡಾಂಗಣ ಬೆಂಗಳೂರು ನಗರ ಜಿಲ್ಲೆ | 07-02-2021 ಕಿರಿಯರ ವಿಭಾಗ<br>08-02-2021 ಹಿರಿಯರ ವಿಭಾಗ<br>ಹಾಗೂ<br>ವಿಭಾಗಗಳಲ್ಲಿ ಭಾಗವಹಿಸಲು ಆಗದೇ ಇರುವವರಿಗೆ<br>09-02-2021 ಕಿರಿಯರ ವಿಭಾಗ<br>10-02-2021 ಹಿರಿಯರ ವಿಭಾಗ | ಅಥ್ಲೆಟಿಕ್ಸ್, ಈಜು, ಬಾಸ್ಕೆಟ್‌ಬಾಲ್, ಫುಟ್‌ಬಾಲ್, ಜಿಮ್ನಾಸ್ಟಿಕ್ಸ್, ಹಾಕಿ, ಜೂಡೋ, ವಾಲಿಬಾಲ್, ಕುಸ್ತಿ, ಆರ್ಚರಿ, ಫೆನ್ಸಿಂಗ್. |
| 14 | ಬೆಂಗಳೂರು | ಕೇಂದ್ರ ಕಚೇರಿ, ಬೆಂಗಳೂರು | 11-02-2021 ಮತ್ತು 12-02-2021 | ಜೇಷ್ಠತಾ ಪಟ್ಟಿ ಸಲ್ಲಿಸುವುದು. |

- 8ನೇ ತರಗತಿ ಕ್ರೀಡಾ ಶಾಲೆ/ ವಸತಿ ನಿಲಯಗಳ ಪ್ರವೇಶಕ್ಕೆ ಜಿಲ್ಲಾ ಮಟ್ಟ, ವಿಭಾಗ ಮಟ್ಟ ಹಾಗೂ ರಾಜ್ಯ ಮಟ್ಟದ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ಕಡ್ಡಾಯ, ಪ್ರಥಮ ಪಿ.ಯು.ಸಿ ಪ್ರವೇಶಕ್ಕೆ ವಿಭಾಗ ಮಟ್ಟದ ಆಯ್ಕೆ ಪ್ರಕ್ರಿಯೆಯಲ್ಲಿ ಕ್ರೀಡಾಪಟುಗಳು ನೇರವಾಗಿ ಭಾಗವಹಿಸತಕ್ಕದ್ದು, ಅರ್ಹರಿಗೆ ರಾಜ್ಯ ಮಟ್ಟದ ಆಯ್ಕೆ ಶಿಬಿರದಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಲಾಗುವುದು.
- ಆಯ್ಕೆ ಸಮಿತಿಯವರು ಎಲ್ಲಾ ಕ್ರೀಡೆಗಳ ಅಂತಿಮ ಆಯ್ಕೆ ಪಟ್ಟಿಯನ್ನು ದಿನಾಂಕ: 12-02-2021 ರೊಳಗೆ ಕೇಂದ್ರ ಕಛೇರಿಗೆ ಸಲ್ಲಿಸುವುದು.
- ಕೋವಿಡ್-19 ಮುನ್ನೆಚ್ಚರಿಕೆ ಕ್ರಮಗಳು :- ಆಯ್ಕೆ ಪ್ರಕ್ರಿಯೆ ನಡೆಯುವ ಸ್ಥಳ (ಕಛೇರಿ ಮತ್ತು ವಸತಿ ಪ್ರದೇಶ) ಸಂಪೂರ್ಣ ಸ್ಯಾನಿಟೈಸ್ ಆಗಿರಬೇಕು. ಇಲ್ಲಿ ಭಾಗವಹಿಸುವ ಪ್ರತಿಯೊಬ್ಬರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಆಯ್ಕೆಗೆ ಬರುವ ಕ್ರೀಡಾಪಟುಗಳು ಕಡ್ಡಾಯವಾಗಿ ಕೋವಿಡ್ ಟೆಸ್ಟ್ ಮಾಡಿಸಿದ ವರದಿಯನ್ನು ತಪ್ಪದೇ ಹಾಜರುಪಡಿಸುವುದು. ವರದಿ ನೆಗೆಟಿವ್ ಬಂದಿದ್ದಲ್ಲಿ ಮಾತ್ರ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡತಕ್ಕದ್ದು. ಹಾಗೂ ಸರ್ಕಾರ ಕೋವಿಡ್-19ಗೆ ಸಂಬಂಧಿಸಿದಂತೆ ಜಾರಿ ಮಾಡಿರುವ ನಿಯಮಗಳನ್ನು ತಪ್ಪದೇ ಪಾಲಿಸುವುದು ಹಾಗೂ ಸಾಮಾಜಿಕ ಅಂತರ ಕಾಯ್ದುಕೊಂಡು, ಪೋಷಕರು ಕ್ರೀಡಾಪಟುಗಳೊಂದಿಗೆ ಯಾವುದೇ ಕಾರಣಕ್ಕೂ ಆಯ್ಕೆ ನಡೆಯುವ ಸ್ಥಳಕ್ಕೆ ತೆರಳದಂತೆ ನೋಡಿಕೊಳ್ಳುವುದು.
- ರಾಜ್ಯ ಮಟ್ಟದ ಆಯ್ಕೆ ಶಿಬಿರದ ವಿವರಗಳನ್ನು ಪ್ರತ್ಯೇಕವಾಗಿ ನೀಡಲಾಗುವುದು.
- **ವಿ.ಸೂ: ವಿಭಾಗ ಮಟ್ಟದ ಆಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ಅಭ್ಯರ್ಥಿಯ ಸಾಧನೆಯಲ್ಲಿ ಶೇ 15ರಷ್ಟು ಕಡಿತ ಕಂಡುಬಂದಲ್ಲಿ ಉಪ/ಸಹಾಯಕ ನಿರ್ದೇಶಕರುಗಳು ಮತ್ತು ನಿಯೋಜಿಸಲ್ಪಟ್ಟ ತರಬೇತುದಾರರ ಮೇಲೆ ತಪ್ಪು ಮಾಹಿತಿ ನೀಡಿದ ಆಪಾದನೆಯ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು.**

**ಆಯ್ಕೆ ಪ್ರಕ್ರಿಯೆಯ ವೆಚ್ಚ ಭರಿಸುವುದು:**

ಅ) ಕ್ರೀಡಾಶಾಲೆಗಳ ಮೊದಲ ಹಂತದ ಆಯ್ಕೆಯ ಲೆಕ್ಕ ಶೀರ್ಷಿಕೆ "2205-00-104-0-35 050 ಗ್ರಾಮಾಂತರ ಪ್ರದೇಶದಲ್ಲಿ ಕ್ರೀಡೆಗಾಗಿ ಪ್ರೋತ್ಸಾಹ ಅಥವಾ 2205-00-104-0-26- 051 ಕ್ರೀಡಾಕೂಟ ಮತ್ತು ರ್‍ಯಾಲಿಗಳ ಸಂಘಟನೆ ಹಾಗೂ ಅದರಲ್ಲಿ ಭಾಗವಹಿಸುವವರಿಗೆ ಪ್ರಯಾಣ ಭತ್ಯೆ ದಿನಭತ್ಯೆ" ಅಡಿಯಲ್ಲಿ ಭರಿಸತಕ್ಕದ್ದು. ಮೊದಲ ಹಂತದ ಆಯ್ಕೆಯನ್ನು ತಾಲ್ಲೂಕು ಕೇಂದ್ರಗಳಲ್ಲಿ ಮೇಲೆ ತಿಳಿಸಿದಂತೆ ನಡೆಸುವುದು. ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿ ನಡೆಯುವ ಆಯ್ಕೆ ಪರೀಕ್ಷೆ ನಡೆಸುವ ತರಬೇತುದಾರರ/ ಗುರುತುಗಾರರ ಪ್ರಯಾಣ ಭತ್ಯೆ, ಇತ್ಯಾದಿ ವೆಚ್ಚವನ್ನು ತಾಲ್ಲೂಕಿಗೆ ರೂ. 20,000-00 ಮೀರದಂತೆ ಖರ್ಚು ಭರಿಸುವುದು.

ಆ) ವಿಭಾಗ ಮಟ್ಟದ ಆಯ್ಕೆ ಪ್ರಕ್ರಿಯೆಯ ಸಂಬಂಧಿತ ಜಿಲ್ಲೆಗಳ ಉಪ/ಸಹಾಯಕ ನಿರ್ದೇಶಕರು ಗರಿಷ್ಠ ರೂ.75,000-00 ವೆಚ್ಚ ಭರಿಸಲು ಅನುಮತಿ ನೀಡಿದೆ. ಸದರಿ ವೆಚ್ಚವನ್ನು ಲೆಕ್ಕ ಶೀರ್ಷಿಕೆ "2205-00-104-0-35 050 ಗ್ರಾಮಾಂತರ ಪ್ರದೇಶದಲ್ಲಿ ಕ್ರೀಡೆಗಾಗಿ ಪ್ರೋತ್ಸಾಹ ಅಥವಾ 2205-00-104-0-26-051 ಕ್ರೀಡಾಕೂಟ ಮತ್ತು ರ್‍ಯಾಲಿಗಳ ಸಂಘಟನೆ ಹಾಗೂ ಅದರಲ್ಲಿ ಭಾಗವಹಿಸುವವರಿಗೆ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ" ಅಡಿಯಲ್ಲಿ ಭರಿಸತಕ್ಕದ್ದು.

ಉಪ/ಸಹಾಯಕ ನಿರ್ದೇಶಕರು ಮತ್ತು ಎಲ್ಲಾ ಕ್ರೀಡೆಗಳ ಸಂಚಾಲಕರು ತಮ್ಮ ಕ್ರೀಡೆಗೆ ಸಂಬಂಧಿಸಿದ ಆಯ್ಕೆ ನಾರ್ಮ್ಸ್‌ಗಳನ್ನು ಇಲಾಖೆಯ ಕ್ರೀಡಾ ಶಾಲೆ/ನಿಲಯ ವಿಭಾಗದಿಂದ ಮಿಂಚಂಚೆಯ ಮೂಲಕ ಪಡೆದು ಆಯ್ಕೆ ನಡೆಸಲು ಸೂಚಿಸಿದೆ.

ಆಯುಕ್ತರು,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಗೆ,

1. ಮಹಾ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ
2. ಜಂಟಿ ನಿರ್ದೇಶಕರು (ಯುಸೇ/ ಆಡಳಿತ), ಕೇಂದ್ರ ಕಛೇರಿ
3. ಉಪ ನಿರ್ದೇಶಕರುಗಳು, ಕೇಂದ್ರ ಕಛೇರಿ.
4. ಉಪ ನಿರ್ದೇಶಕರು (ಕರ್ನಾಟಕ ಕ್ರೀಡಾ ಪ್ರಾಧಿಕಾರ)
5. ಜಿಲ್ಲಾ ಉಪ/ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
6. ಸಂಬಂಧಪಟ್ಟ ಎಲ್ಲಾ ಸಮಿತಿಯ ಸಂಚಾಲಕರು ಮತ್ತು ಸದಸ್ಯರು. 7. ಹೆಚ್ಚಿನ ಪ್ರತಿಗಳು.
8. ಮುಖ್ಯೋಪಾಧ್ಯಾಯರು, ಕ್ರೀಡೆ ಮತ್ತು ವಿದ್ಯಾನಗರ ಕ್ರೀಡಾಶಾಲೆ

(22)

<u>ಅನುಬಂಧ-ಅ</u>

<u>ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವಕೇಂದ್ರ,</u>

<u>ನೃಪತುಂಗ ರಸ್ತೆ, ಬೆಂಗಳೂರು-01</u>

2021-22 ನೇ ಸಾಲಿನ ಜಿಲ್ಲಾ/ರಾಜ್ಯ ಕ್ರೀಡಾ ವಸತಿ ಶಾಲೆ/ ವಸತಿ ನಿಲಯ

ಆಯ್ಕೆ/ಪ್ರವೇಶ ಅರ್ಜಿ ಕಿರಿಯರ/ ಹಿರಿಯರ ವಿಭಾಗ.

ಭಾವಚಿತ್ರ

| | | |
|---|---|---|
| 1 | ಅರ್ಜಿದಾರರ ಪೂರ್ಣ ಹೆಸರು | |
| 2 | ಅರ್ಜಿದಾರರ ಖಾಯಂ ವಿಳಾಸ | |
| 3 | ಪಾಲಕ/ಪೋಷಕರ ಹೆಸರು<br>ಮತ್ತು ಖಾಯಂ ವಿಳಾಸ. | |
| 4 | ಆಧಾರ್ ಸಂಖ್ಯೆ: (ಕಡ್ಡಾಯವಾಗಿ ಲಗತ್ತಿಸುವುದು)<br>ಮೊಬೈಲ್ ಸಂಖ್ಯೆ: | |
| 5 | ಜನ್ಮ ದಿನಾಂಕ ಹಾಗೂ ಓದುತ್ತಿರುವ ತರಗತಿ<br>(ಶಾಲಾ ದಾಖಲಾತಿ ಅನ್ವಯ)<br>ಲಿಂಗ : ಬಾಲಕ / ಬಾಲಕಿ | ಮುಖ್ಯೋಪಾಧ್ಯಾಯರು/ ಪ್ರಾಚಾರ್ಯರ ಸಹಿ ಹಾಗೂ ಮೊಹರು |
| 6 | ಜಾತಿ: | ಸಾಮಾನ್ಯ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ |
| 7 | ಸೇರಬಯಸುವ ಕ್ರೀಡೆ (ಕೇವಲ ಒಂದು ಕ್ರೀಡೆಯಲ್ಲಿ ಮಾತ್ರ) ಗುರುತು ಹಾಕುವುದು. | ಅಥ್ಲೆಟಿಕ್ಸ್, ಬ್ಯಾಸ್ಕೆಟ್‌ಬಾಲ್, ಸೈಕ್ಲಿಂಗ್, ಜೂಡೋ, ಫುಟ್ಬಾಲ್, ಹಾಕಿ, ಕುಸ್ತಿ ಮತ್ತು ವಾಲಿಬಾಲ್ |
| 8 | ಇಲ್ಲಿಯವರೆಗಿನ ಕ್ರೀಡಾ ಸಾಧನೆ | |
| 9 | ಆರೋಗ್ಯ ಧೃಢೀಕರಣ<br>(ಅರ್ಹ ವೈದ್ಯರಿಂದ) | ವೈದ್ಯಾಧಿಕಾರಿ ಸಹಿ ಹಾಗೂ ಮೊಹರು |
| 10 | ಎತ್ತರ (ಸೆಂ.ಮೀ) | |
| 11 | ತೂಕ (ಕೆ.ಜಿ) | |
| | | ಅಭ್ಯರ್ಥಿಯ ಸಹಿ |

| ಇಲ್ಲಿಯವರೆಗಿನ ಕ್ರೀಡಾ ಸಾಧನೆ | ರಾಜ್ಯ | ವಲಯ | ರಾಷ್ಟ್ರ | ಅಂತರ ರಾಷ್ಟ್ರೀಯ | ವಿ.ವಿ. |
|---|---|---|---|---|---|
| | | | | | |

ಕುಮಾರ/ ಕುಮಾರಿ----------------------------ಇವರ ಪಾಲಕ/ಪೋಷಕನಾದ ನಾನು ಮೇಲೆ ನೀಡಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ. ಏನಾದರೂ ತಪ್ಪು ಎಂದು ಸಾಬೀತಾದಲ್ಲಿ ಇಲಾಖೆಯು ಈ ಸಂಬಂಧವಾಗಿ ನಿಗದಿ ಪಡಿಸಿರುವ ಷರತ್ತು ಹಾಗೂ ನಿಬಂಧನೆಗಳಿಗೆ ಬದ್ಧರಾಗಿರುತ್ತೇನೆ.

ಪೋಷಕರ ಸಹಿ ಮತ್ತು ಹೆಸರು

<u>ಕಛೇರಿ ಉಪಯೋಗಕ್ಕಾಗಿ</u>

ಮೇಲೆ ನೀಡಿರುವ ಎಲ್ಲಾ ಮಾಹಿತಿಗಳು ಸರಿಯಾಗಿವೆ ಹಾಗೂ ಈ ಅಭ್ಯರ್ಥಿಯು ಜಿಲ್ಲಾ/ರಾಜ್ಯ ಕ್ರೀಡಾ ವಸತಿ ಶಾಲೆ/ಕ್ರೀಡಾ ನಿಲಯ ಆಯ್ಕೆಗೆ ಅರ್ಹತಾ ನಿಯಮದ ಪ್ರಕಾರ ಅರ್ಹನಿದ್ದಾನೆ/ಇದ್ದಾಳೆ ಎಂದು ಖಚಿತಪಡಿಸಿಕೊಂಡು ಧೃಢೀಕರಿಸಲಾಗಿದೆ.

ಈ ಅಭ್ಯರ್ಥಿಯನ್ನು ಗುರುತಿಸಿದ ಅಧಿಕಾರಿ /

ತರಬೇತುದಾರರ ಹೆಸರು : -------------..

ಪದನಾಮ : --------------

ವಿಳಾಸ : --------------.

ಜಿಲ್ಲೆಯ ಉಪ/ಸಹಾಯಕ ನಿರ್ದೇಶಕರು.
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ಸಹಿ ಮತ್ತು ಮೊಹರು.

## ಕಛೇರಿ ಉಪಯೋಗಕ್ಕಾಗಿ

2021-22 ನೇ ಸಾಲಿನ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಜಿಲ್ಲಾ/ರಾಜ್ಯ ಕ್ರೀಡಾ ವಸತಿ ಶಾಲೆ/ ವಸತಿ ನಿಲಯ ಆಯ್ಕೆ ಪರೀಕ್ಷಾ ಅಂಕಪಟ್ಟಿ: ಫಲಿತಾಂಶ ನಿರ್ಣಯ.

ಕಿರಿಯರ/ಹಿರಿಯರ ವಿಭಾಗ

ಅಭ್ಯರ್ಥಿಯ ಹೆಸರು ________________________

ಎತ್ತರ __________ ತೂಕ___________ ವಯಸ್ಸು__________

| ಕ್ರ.ಸಂ | ಪರೀಕ್ಷಾ ವಿವರ | ಮೊದಲ ಹಂತದ ಆಯ್ಕೆ | ಎರಡನೇ ಹಂತದ ಆಯ್ಕೆ |
|---|---|---|---|
| | | | |
| ಷರಾ | | | |

ಆಯ್ಕೆ ಸಮಿತಿಯ ಸಹಿ

1.

2.

3.

4.

ಅನುಬಂಧ-02

## ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಕಳೆದ 5 ವರ್ಷಗಳಲ್ಲಿ ಯೋಜನೆಗಳಿಗೆ ಮೀಸಲಿಟ್ಟ ಅನುದಾನ ಮತ್ತು ಬಿಡುಗಡೆ ಮಾಡಿರುವ ಅನುದಾನದ ವಿವರ

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಲೆಕ್ಕ ಶೀರ್ಷಿಕೆ ಮತ್ತು ಯೋಜನೆಯ ಹೆಸರು | 2016-17ನೇ ಸಾಲಿನ ಆಯವ್ಯಯ ಹಂಚಿಕೆ | ಬಿಡುಗಡೆ | ಮಾರ್ಚ್ ಅಂತ್ಯದವರೆಗಿನ ವೆಚ್ಚ/ಪ್ರಗತಿ | 2017-18ನೇ ಸಾಲಿನ ಆಯವ್ಯಯ ಹಂಚಿಕೆ | ಬಿಡುಗಡೆ | ಮಾರ್ಚ್ ಅಂತ್ಯದವರೆಗಿನ ವೆಚ್ಚ/ಪ್ರಗತಿ |
|---|---|---|---|---|---|---|---|
| 1 | 2204-00-102-2-03 117 ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ | 100.00 | 75.00 | 75.00 | 125.00 | 125.00 | 151.14 |
| | 117 ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಸಾಧನೆ ಮಾಡುವ ಎಲ್ಲಾ ಕ್ರೀಡಾಪಟುಗಳ ಶೈಕ್ಷಣಿಕ ಶುಲ್ಕ ಮರುಪಾವತಿ. | 70.00 | 52.50 | 51.76 | 175.00 | 175.00 | |
| | ಒಟ್ಟು | **170.00** | **127.50** | **126.76** | **300.00** | **300.00** | **151.14** |
| 2 | 2204-00-104-0-02 015 ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ 015 (ನಗದು ಪ್ರಶಸ್ತಿ) ಪೂರಕ ವೆಚ್ಚಗಳು | 225.00 | 225.00 | 156.41 | 930.10 | 930.10 | 929.19 |
| | c) 059 ಇತರೇ ಖರ್ಚು, Karnataka Sports Academy for Excellence. | 875.00 | 650.00 | 527.96 | 1550.00 | 1550.00 | 1035.12 |
| | ಒಟ್ಟು | **1100.00** | **875.00** | **527.96** | **1550.00** | **1550.00** | **1035.12** |
| 3 | 2204-00-104-0-25 051 ಸಾಮಾನ್ಯ ವೆಚ್ಚಗಳು, ಕ್ರೀಡಾ ಶಾಲೆ ಮತ್ತು ನಿಲಯಗಳು | 1550.00 | 1162.50 | 785.59 | 3400.00 | 3400.00 | 2705.96 |
| | ಒಟ್ಟು | **1550.00** | **1162.50** | **785.59** | **3400.00** | **3400.00** | **2705.96** |
| 4 | 2204-00-796-0-01 Tribal Area Sub Plan TSP ಗಿರಿಜನ ಉಪಯೋಜನೆ 423 | 587.00 | 440.25 | 44.61 | 966.00 | 966.00 | 93.82 |
| 5 | 2204-00-789-0-01 Special Component Plan SCP ವಿಶೇಷ ಘಟಕ ಯೋಜನೆ 422 | 1449.00 | 1086.75 | 108.66 | 2384.00 | 2384.00 | 216.56 |
| | ಒಟ್ಟು | **2036.00** | **1527.00** | **153.27** | **3350.00** | **3350.00** | **310.38** |
| 6 | 4202-03-102-0-03 ಬಂಡವಾಳ ವೆಚ್ಚ Capital Exp 386 | 1675.00 | 1256.25 | 1289.04 | 1869.00 | 1869.00 | 1869.00 |
| 7 | 422 ಪರಿಶಿಷ್ಟ ಜಾತಿ ಉಪಯೋಜನ | 80.00 | 60.00 | 1.25 | 105.00 | 105.00 | -- |

| | | | | | | | |
|---|---|---|---|---|---|---|---|
| 8 | 423 ಗಿರಿಜನ ಉಪಯೋಜನೆ | 20.00 | 15.00 | 15.00 | 26.00 | 26.00 | -- |
| | 4202-03-102-0-01 132, ರಾಜ್ಯ ಮಟ್ಟದ ಕ್ರೀಡಾಂಗಣ ನಿರ್ಮಾಣ | 350.00 | 350.00 | 340.87 | 500.00 | 500.00 | 499.99 |
| | ರಾಜ್ಯ ವಲಯ, ಒಟ್ಟು ಮೊತ್ತ | **2125.00** | **1681.25** | **1646.16** | **2500.00** | **2500.00** | **2368.99** |

| ಕ್ರ.ಸಂ | ಲೆಕ್ಕ ಶೀರ್ಷಿಕೆ ಮತ್ತು ಯೋಜನೆ ಹೆಸರು | 2018-19ನೇ ಸಾಲಿನ ಆಯ ವ್ಯಯ ಹಂಚಿಕೆ | ಬಿಡುಗಡೆ | ಮಾರ್ಚ್ ಅಂತ್ಯದವರೆಗಿನ ವೆಚ್ಚ/ಪ್ರಗತಿ | 2019-20ನೇ ಸಾಲಿನ ಆಯ ವ್ಯಯ ಹಂಚಿಕೆ | ಬಿಡುಗಡೆ | ಮಾರ್ಚ್ ಅಂತ್ಯದವರೆಗಿನ ವೆಚ್ಚ/ಪ್ರಗತಿ | 2020-21ನೇ ಸಾಲಿನ ಆಯ ವ್ಯಯ ಹಂಚಿಕೆ | ಬಿಡುಗಡೆ | ಮಾರ್ಚ್ ಅಂತ್ಯದವರೆಗಿನ ವೆಚ್ಚ/ಪ್ರಗತಿ |
|---|---|---|---|---|---|---|---|---|---|---|
| 1 | 117 ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ | 80.00 | 80.00 | 80.00 | 200.00 | 190.00 | 189.00 | 100.00 | 0.00 | 0.00 |
| | 117 ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಸಾಧನೆ ಮಾಡುವ ಎಲ್ಲಾ ಕ್ರೀಡಾಪಟುಗಳ ಶೈಕ್ಷಣಿಕ ಶುಲ್ಕ ಮರುಪಾವತಿ. | 120.00 | 120.00 | 120.00 | | | | | | |
| | ಒಟ್ಟು | **200.00** | **200.00** | **200.00** | **200.00** | **190.00** | **189.00** | **100.00** | **0.00** | **0.00** |
| 3 | 015 ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ 015 (ನಗದು ಪ್ರಶಸ್ತಿ) ಪೂರಕ ವೆಚ್ಚಗಳು | 400.00 | 400.00 | 400.00 | 700.00 | **710.00** | 710.00 | 700.00 | 700.00 | 699.77 |
| | 051 ಸಾಮಾನ್ಯ ವೆಚ್ಚಗಳು | 0.00 | 0.00 | 0.00 | 0.00 | 0.00 | 0.00 | 10.00 | 5.00 | 5.00 |
| 4 | 059 ಇತರೇ ಖರ್ಚು, ಕರ್ನಾಟಕ ಸ್ಪೋರ್ಟ್ಸ್ ಅಕಾಡಮಿ ಫಾರ್ ಎಕ್ಸಲೆನ್ಸಿ | 1200.00 | 1200.00 | 1151.50 | 650.00 | 650.00 | 650.00 | 250.00 | 250.00 | 250.00 |
| | ಒಟ್ಟು | **1600.00** | **1600.00** | **1551.50** | **1350.00** | **1360.00** | **1360.00** | **960.00** | **955.00** | **954.77** |
| 5 | 051 ಸಾಮಾನ್ಯ ವೆಚ್ಚಗಳು, ಕ್ರೀಡಾ ಶಾಲೆ ಮತ್ತು ನಿಲಯಗಳು | 2000.00 | 2160.00 | 2143.65 | 1700.00 | 1700.00 | 1700.00 | 705.00 | 705.00 | 703.41 |
| | **ಒಟ್ಟು** | **2000.00** | **2160.00** | **2143.65** | **1700.00** | **1700.00** | **1700.00** | **705.00** | **705.00** | **703.41** |
| 6 | 2204-00-789-0-01 422 ವಿಶೇಷ ಘಟಕ ಯೋಜನೆ | 1812.00 | 1812.00 | 1238.06 | 1178.00 | 1178.00 | 1136.72 | 1000.00 | 1000.00 | 1000.00 |

| | | | | | | | | | | |
|---|---|---|---|---|---|---|---|---|---|---|
| 7 | 2204-00-796-0-01 423 ಗಿರಿಜನ ಉಪಯೋಜನೆ | 734.00 | 734.00 | 436.98 | 559.00 | 559.00 | 540.33 | 500.00 | 500.00 | 500.00 |
| | ಒಟ್ಟು | **2546.00** | **2546.00** | **1675.04** | **1737.00** | **1737.00** | **1677.05** | **1500.00** | **1500.00** | **1500.00** |
| 8 | 4202-03-102-0-01 132, ರಾಜ್ಯ ಮಟ್ಟದ ಕ್ರೀಡಾಂಗಣ ನಿರ್ಮಾಣ | 2000.00 | 844.73 | 799.10 | 4750.00 | 1750.00 | 1750.00 | 1250.00 | 1250.00 | 1242.10 |
| 9 | 4202-03-102-0-03 386 ಬಂಡವಾಳ ವೆಚ್ಚ | 1500.00 | 1211.80 | 1211.80 | 1900.00 | **2750.00** | 2744.13 | 640.00 | 640.00 | 640.00 |
| | 422 ಪರಿಶಿಷ್ಟ ಜಾತಿ ಉಪಯೋಜನೆ | 80.00 | 80.00 | 80.00 | 80.00 | 80.00 | 77.19 | 48.00 | 48.00 | 48.00 |
| | 423 ಗಿರಿಜನ ಉಪಯೋಜನೆ | 20.00 | 20.00 | 20.00 | 20.00 | 20.00 | 20.00 | 12.00 | 12.00 | 12.00 |
| | **ಒಟ್ಟು** | **3600.00** | **2156.53** | **1311.80** | **6750.00** | **4600.00** | **4591.32** | **1950.00** | **1950.00** | **1942.00** |

ಅನುಬಂಧ-3.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸನ್ಮಾನ್ಯ ಮುಖ್ಯಮಂತ್ರಿಗಳು ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸವಿನೆನಪಿಗಾಗಿ ಘೋಷಿಸಿರುವ **"ಅಮೃತ ಕ್ರೀಡಾ ದತ್ತು ಯೋಜನೆ"** ಅನುಷ್ಠಾನಕ್ಕೆ ಅನುಮೋದನೆ ನೀಡುವ ಬಗ್ಗೆ - ಆದೇಶ.

**ಓದಲಾಗಿದೆ:**
1. ಇದೇ ಕ್ರಮಾಂಕದ ಸರ್ಕಾರದ ಆದೇಶ; ದಿನಾಂಕ: 30.07.2021.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ: ಮುಕಾ/736/2021; ದಿನಾಂಕ: 16.08.2021.
3. ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪತ್ರ ಸಂಖ್ಯೆ: ಡಿವೈಇಎಸ್/ಕ್ರೀಚಪ್ರೋ/59/2021-22; ದಿನಾಂಕ: 18.08.2021.

*****

**ಪ್ರಸ್ತಾವನೆ :**

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಮಿಷನ್ ಒಲಂಪಿಕ್ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ ಮಾರ್ಗಸೂಚಿಯ ಷರತ್ತುಗಳಿಗೊಳಪಡಿಸಿ ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಪ್ರತಿ ಕ್ರೀಡಾಪಟುವಿಗೆ ವಾರ್ಷಿಕ ಗರಿಷ್ಠ ಪ್ರೋತ್ಸಾಹ ಧನವನ್ನು ಮಿತವ್ಯಯಕ್ಕೆ ಒಳಪಡಿಸುವ ನಿಬಂಧನೆಗೊಳಪಡಿಸಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿಲಾಗಿರುತ್ತದೆ.

ಸನ್ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 15.08.2021ರ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸದ ಸವಿನೆನಪಿಗಾಗಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವ್ಯಾಪ್ತಿಗೊಳಪಟ್ಟಂತೆ ಅಮೃತ ಕ್ರೀಡಾ ದತ್ತು ಯೋಜನೆಯನ್ನು ಘೋಷಿಸಿದ್ದು, ಇದರಲ್ಲಿ ಮುಂದಿನ ಪ್ಯಾರೀಸ್ ಒಲಂಪಿಕ್ ಕ್ರೀಡಾಕೂಟದಲ್ಲಿ ಉತ್ತಮ ಸಾಧನೆ ತೋರಿ ಪದಕ ವಿಜೇತ ಸಾಮರ್ಥ್ಯವುಳ್ಳ ಆಯ್ದ 75 ಕ್ರೀಡಾಪಟುಗಳನ್ನು ರೂಪಿಸಲು ಅಗತ್ಯವಾದ ತರಬೇತಿ ಮತ್ತು ಪ್ರೋತ್ಸಾಹ ನೀಡಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು ಎಂದು ಸನ್ಮಾನ್ಯ ಮುಖ್ಯಮಂತ್ರಿಗಳು ವಿವರಿಸಿರುತ್ತಾರೆ. ತತ್ಸಂಬಂಧ, ಮೇಲೆ ಕ್ರಮಾಂಕ (2)ರಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಟಿಪ್ಪಣಿಯಲ್ಲಿ ಸದರಿ ಯೋಜನೆಯ ಅನುಷ್ಠಾನಕ್ಕಾಗಿ ಅಗತ್ಯ ಸರ್ಕಾರಿ ಆದೇಶವನ್ನು ಹೊರಡಿಸಲು ಸೂಚಿಸಲಾಗಿದೆ.

ಮೇಲೆ ಕ್ರಮಾಂಕ(3) ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು, ಮಾನ್ಯ ಮುಖ್ಯಮಂತ್ರಿಯವರ ಘೋಷಿಸಿರುವ ಅಮೃತ ಕ್ರೀಡಾ ದತ್ತು ಯೋಜನೆಯು ದಿನಾಂಕ: 30.07.2021ರ ಸರ್ಕಾರದ ಆದೇಶದಲ್ಲಿ ಮಿಷನ್ ಒಲಂಪಿಕ್ಸ್ ಸಂಬಂಧ ನೀಡಿರುವ ಆಡಳಿತಾತ್ಮಕ ಅನುಮೋದನೆಯ ವಿಷಯಕ್ಕೆ ಸಮಾನಾಂತರವಾಗಿರುವುದರಿಂದ ಸದರಿ ಆದೇಶವನ್ನು ಮಾರ್ಪಡಿಸಿ ಪರಿಷ್ಕೃತ ಸರ್ಕಾರಿ ಆದೇಶವನ್ನು ಹೊರಡಿಸಲು ಕೋರಿರುತ್ತಾರೆ.

...2)

ಈ ಬಗ್ಗೆ, ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ,

**ಸರ್ಕಾರದ ಆದೇಶ ಸಂಖ್ಯೆ: ವೈಎಸ್‌ಡಿ/ಇಪಿಇ/28/2021 (ಭಾಗ-1), ಬೆಂಗಳೂರು, ದಿನಾಂಕ: 19.08.2021.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ಸರ್ಕಾರದ ಆದೇಶ; ದಿನಾಂಕ: 30.07.2021ರ ಆದೇಶ ಭಾಗದಲ್ಲಿ ಮಿಷನ್ ಒಲಂಪಿಕ್ಸ್ ಅನುಷ್ಠಾನಕ್ಕೆ ಅನುಮೋದನೆ ನೀಡಿದ ಅಂಶಕ್ಕೆ ಸೀಮಿತಗೊಳಿಸಿ ಸದರಿ ಆದೇಶವನ್ನು ಮಾರ್ಪಡಿಸಿ, ಸನ್ಮಾನ್ಯ ಮುಖ್ಯಮಂತ್ರಿಗಳು ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸವಿನೆನಪಿಗಾಗಿ ಘೋಷಿಸಿರುವ **"ಅಮೃತ ಕ್ರೀಡಾ ದತ್ತು ಯೋಜನೆ" ಅನುಷ್ಠಾನಗೊಳಿಸಲು ಮುಂದಿನ ಪ್ಯಾರೀಸ್ ಒಲಂಪಿಕ್ ಕ್ರೀಡಾಕೂಟದಲ್ಲಿ ಅತ್ಯುತ್ತಮ ಸಾಧನೆ ತೋರಿ ಪದಕ ವಿಜೇತ ಸಾಮರ್ಥ್ಯವುಳ್ಳ ಆಯ್ದ 75 ಕ್ರೀಡಾಪಟುಗಳನ್ನು ರೂಪಿಸಲು ಅಗತ್ಯವಾದ ತರಬೇತಿ ಮತ್ತು ಪ್ರೋತ್ಸಾಹ ಕಲ್ಪಿಸುವ ನಿಟ್ಟಿನಲ್ಲಿ ಈ ಆದೇಶಕ್ಕೆ ಲಗತ್ತಿಸಲಾಗಿರುವ ಅನುಬಂಧ ರೂಪದಲ್ಲಿನ ಮಾರ್ಗಸೂಚಿಯ ಷರತ್ತಿಗೆ ಒಳಪಟ್ಟು ಆಡಳಿತಾತ್ಮಕ** ಅನುಮೋದನೆ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

M. Umesh Shastry
**(ಎಂ. ಉಮೇಶ್ ಶಾಸ್ತ್ರಿ)**
ಸರ್ಕಾರದ ಅಧೀನ ಕಾರ್ಯದರ್ಶಿ, 19/8/2021
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

<u>ಇವರಿಗೆ:</u>

1. ಪ್ರಧಾನ ಮಹಾಲೇಖಪಾಲರು (ಎ ಮತ್ತು ಇ)/ (ಜಿ&ಎಸ್.ಎಸ್.ಎ)/ (ಇ&ಆರ್.ಎಸ್.ಎ), ಕರ್ನಾಟಕ, ಪಿ.ಬಿ.ನಂ.5329, ಬೆಂಗಳೂರು.
2. ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, 3ನೇ ಮಹಡಿ, ವಿಧಾನಸೌಧ, ಬೆಂಗಳೂರು – **ಟಿಪ್ಪಣಿ ಕ್ರಮಾಂಕ: ಮುಕಾ/736/2021; ದಿನಾಂಕ:16.08.2021ರ ಕಡೆಗೆ ಗಮನವನ್ನು ಸೆಳೆದು.**
4. ಮಾನ್ಯ ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಯುಸಕ್ರೀ ಇಲಾಖೆ.
6. ಶಾಖಾ ರಕ್ಷಾಕಡತ/ಹೆಚ್ಚುವರಿ ಪ್ರತಿಗಳು.

## ಅನುಬಂಧ

**ಸರ್ಕಾರದ ಆದೇಶ ಸಂಖ್ಯೆ: ವೈಎಸ್‌ಡಿ/ಇಪಿಇ/28/2021 (ಭಾಗ-1); ದಿನಾಂಕ: 19.08.2021ಕ್ಕೆ ಲಗತ್ತು**

**1. ಪ್ರಸ್ತಾವನೆ:**

ಭಾರತ ಸರ್ಕಾರವು 2024ರ ಪ್ಯಾರಿಸ್ ಒಲಂಪಿಕ್ಸ್ ನಲ್ಲಿ ಪದಕ ಪಟ್ಟಿಯಲ್ಲಿ ಅಗ್ರ ಹತ್ತು ರಾಷ್ಟ್ರಗಳ ಪಟ್ಟಿಯಲ್ಲಿ ಭಾರತ ದೇಶವು ಸ್ಥಾನ ಪಡೆಯುವ ಗುರಿಯನ್ನು ಹೊಂದಿದೆ. ಈ ನಿಟ್ಟಿನಲ್ಲಿ ಹಲವಾರು ನೂತನ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

ಕರ್ನಾಟಕ ಸರ್ಕಾರವು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವಿವಿಧ ಯೋಜನೆಗಳ ಮೂಲಕ ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹಿಸುತ್ತಿದೆ. ಕ್ರೀಡೆಯ ಮೂಲಕ ಮಕ್ಕಳ ಮತ್ತು ಯುವಜನರ ಸರ್ವತೋಮುಖ ಬೆಳವಣಿಗೆ, ಸಾಮಾಜಿಕ ಅಭಿವೃದ್ಧಿ, ಭಾವೈಕ್ಯತೆ, ಲಿಂಗ ಸಮಾನತೆ, ಆರೋಗ್ಯಕರ ಜೀವನಶೈಲಿ, ರಾಜ್ಯ ಮತ್ತು ರಾಷ್ಟ್ರಕ್ಕೆ ಕೀರ್ತಿ ಜೊತೆಗೆ ಆರ್ಥಿಕ ಬೆಳವಣಿಗೆಗೆ ಅವಕಾಶಗಳನ್ನು ಸಾಧಿಸಬಹುದಾಗಿದೆ.

ಒಲಿಂಪಿಕ್ಸ್ ಸೇರಿದಂತೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡುವ ಸಾಮರ್ಥ್ಯ ಹೊಂದಿರುವ ಪ್ರತಿಭಾವಂತ ಕ್ರೀಡಾಪಟುಗಳನ್ನು ಗುರುತಿಸಿ, ಪೋಷಿಸಿ ಸಾಧನೆಗೆ ಅಗತ್ಯವಾದ ಬೆಂಬಲ ವ್ಯವಸ್ಥೆ ನೀಡುವುದು ಇಂದಿನ ಅಗತ್ಯತೆಯಾಗಿದೆ. ಭಾರತ ಸರ್ಕಾರವು ಖೇಲೋ ಇಂಡಿಯಾ ಯೋಜನೆಯಡಿ ಕ್ರೀಡಾ ಪ್ರತಿಭಾನ್ವೇಷಣೆ ಮತ್ತು ಬೆಳವಣಿಗೆಗಾಗಿ ರೂಪಿಸಿರುವ ಮಾನದಂಡಗಳನ್ನು ಆಧಾರವಾಗಿಟ್ಟುಕೊಂಡು **"ಅಮೃತ ಕ್ರೀಡಾ ದತ್ತು ಯೋಜನೆ"**ಯ ಚೌಕಟ್ಟನ್ನು ರೂಪಿಸಲಾಗಿದೆ. ಇಲಾಖೆಯ ಈ ಯೋಜನೆಯ ಲಾಭ ಪಡೆದು ಹೆಚ್ಚಿನ ಸಂಖ್ಯೆಯಲ್ಲಿ ರಾಜ್ಯದ ಪ್ರತಿಭಾನ್ವಿತ ಕ್ರೀಡಾಪಟುಗಳು ಭಾರತ ಸರ್ಕಾರದ ಖೇಲೋ ಇಂಡಿಯಾ ಪ್ರತಿಭಾ ಕಣಜದಲ್ಲಿ ಮತ್ತು ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಯೋಜನೆಯ ಫಲಾನುಭವಿಗಳಾಗಿ ಹೆಚ್ಚಿನ ಸಾಧನೆ ಮಾಡಬೇಕೆಂಬ ಆಶಯ ಹೊಂದಲಾಗಿದೆ. ಅಲ್ಲದೇ ಈ ಯೋಜನೆಯಿಂದ ರಾಜ್ಯದಿಂದ ಹೆಚ್ಚಿನ ಸಂಖ್ಯೆಯಲ್ಲಿ ಕ್ರೀಡಾಪಟುಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಉನ್ನತ ಸಾಧನೆ ಮಾಡಲು ಸಹಕಾರಿಯಾಗಲಿದೆ.

ಈ ನಿಟ್ಟಿನಲ್ಲಿ ಲಭ್ಯವಿರುವ ಸೀಮಿತ ಭೌತಿಕ, ಆರ್ಥಿಕ ಮತ್ತು ಮಾನವ ಸಂಪನ್ಮೂಲಗಳ ಪರಿಣಾಮಕಾರಿ ಉಪಯೋಗಕ್ಕಾಗಿ **ಅಮೃತ ಕ್ರೀಡಾ ದತ್ತು ಯೋಜನೆ**ಯನ್ನು ರೂಪಿಸಲಾಗಿದೆ.

**2. ದೃಷ್ಟಿಕೋನ:**

2024ರ ಪ್ಯಾರೀಸ್ ಒಲಿಂಪಿಕ್ಸ್ ನಲ್ಲಿ ರಾಜ್ಯದ ಕ್ರೀಡಾಪಟುಗಳು ಪದಕ ಸಾಧನೆ ಮಾಡುವುದು.

3. ಗುರಿ :

ಕ್ರೀಡಾ ವಿಜ್ಞಾನ ಆಧಾರಿತ ಕ್ರೀಡಾ ಪ್ರತಿಭಾನ್ವೇಷಣೆಗೆ ಕಾರ್ಯಕ್ರಮದ ಮೂಲಕ ಪ್ರತಿಭೆಗಳನ್ನು ಗುರುತಿಸಿ, ವ್ಯವಸ್ಥಿತ ರೀತಿಯಲ್ಲಿ ಪೋಷಣೆ ನೀಡಿ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸುವ ಮೂಲಕ ಒಲಿಂಪಿಕ್ಸ್ ನಲ್ಲಿ ಪದಕ ಸಾಧನೆ ಮಾಡುವುದು. ಈ ಕಾರ್ಯವನ್ನು ಕರ್ನಾಟಕ ಒಲಿಂಪಿಕ್ಸ್ ಸಂಸ್ಥೆ ಮತ್ತು ಆಯಾ ರಾಜ್ಯ ಕ್ರೀಡಾ ಸ್ಥಂಸ್ಥೆ ಹಾಗೂ ಉನ್ನತ ಸಾಧನೆ ಮಾಡಿದ ಹಿರಿಯ ಕ್ರೀಡಾಪಟುಗಳ ಪಾಲ್ಗೊಳ್ಳುವಿಕೆಯಿಂದ ಅನುಷ್ಠಾನಗೊಳಿಸುವುದು.

4. ಘಟಕಗಳು:

1) ಕ್ರೀಡಾ ವಿಜ್ಞಾನ ಆಧಾರಿತ ಕ್ರೀಡಾ ಪ್ರತಿಭಾನ್ವೇಷಣೆ.
2) ಅರ್ಹ ಕ್ರೀಡಾಪಟುಗಳ ಪಟ್ಟಿಯನ್ನು ಅಂತಿಮಗೊಳಿಸುವುದು.
3) ಕ್ರೀಡಾಪಟುಗಳು, ತರಬೇತಿ ಶಿಬಿರಗಳು, ಪ್ರತಿಭಾವಂತ ಕಾರ್ಯಕ್ರಮಗಳ ಮೂಲಕ ಪ್ರತಿಭೆ ಗುರುತಿಸುವುದು.
4) ಉನ್ನತ ಅಧಿಕಾರ ಸಮಿತಿಯ ಕ್ರೀಡಾ ಪ್ರತಿಭಾನ್ವೇಷಣೆಗೆ ಇತರೆ ಮೂಲಗಳನ್ನು ಆಯ್ಕೆ ಮಾಡಬಹುದು.

5. ಗುರುತಿಸಲಾದ ಕ್ರೀಡೆಗಳು:

ಉನ್ನತ ಅಧಿಕಾರ ಸಮಿತಿಯು ವಿವಿಧ ಭಾಗೀದಾರರ ಶಿಫಾರಸ್ಸಿನಂತೆ ಕಾಲಕಾಲಕ್ಕೆ ಒಲಿಂಪಿಕ್ಸ್ ನಲ್ಲಿರುವ ಕ್ರೀಡೆಗಳನ್ನು ಸೇರಿಸಲು ಅಧಿಕಾರ ಹೊಂದಿರುತ್ತದೆ. ಕ್ರೀಡೆಗಳ ಪಟ್ಟಿಯು ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿಶೇಷವಾಗಿ ಒಲಿಂಪಿಕ್ಸ್ ನಲ್ಲಿ ಸಾಧನೆ ಮಾಡುವ ಸಂಭಾವ್ಯದ ಆಧಾರದಲ್ಲಿ ಬದಲಾಗಬಹುದಾಗಿದೆ.

6. ಪ್ರತಿಭಾವಂತ ಕ್ರೀಡಾಪಟುಗಳನ್ನು ಗುರುತಿಸುವ ವಿಧಾನಗಳು:

ಪ್ರತಿ ಕ್ರೀಡೆಗೆ ಸಂಬಂಧಿಸಿದಂತೆ ಆಯ್ಕೆಗೆ ನಿಗದಿತ ಮಾನದಂಡಗಳಿರಲಿವೆ.

- **ಭಾರತೀಯ ಒಲಂಪಿಕ್ ಸಂಸ್ಥೆಯಲ್ಲಿ ನೋಂದಾಯಿಸಿದ ಹಾಗೂ ಗುರುತಿಸಿದ ಕರ್ನಾಟಕ ರಾಜ್ಯದ ಸಂಘಗಳು / ಸಂಸ್ಥೆಗಳು ಪೋಷಿಸಿರುವ ಅತ್ಯುತ್ತಮ ಸಾಧನೆ ಮಾಡಿದ ಕ್ರೀಡಾಪಟುಗಳ ಪೈಕಿ ಶ್ರೇಷ್ಠರನ್ನು ಆಯ್ಕೆ ಮಾಡುವುದು.**
- ಕ್ರೀಡಾ ವಿಜ್ಞಾನದ ಆಧಾರದಲ್ಲಿ ಕ್ರೀಡಾಪಟುವಿನ ಸಾಮರ್ಥ್ಯ ಮೌಲ್ಯೀಕರಣ ಮಾಡಿ ಉನ್ನತ ಸಾಧನೆಗೆ ಸಂಭಾವ್ಯತೆ ಪರಾಮರ್ಶಿಸುವುದು.
- ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಾಧನೆಯನ್ನು ಪರಿಗಣಿಸುವುದು ಮತ್ತು ಕ್ರೀಡಾ ವಿಜ್ಞಾನದ ಆಧಾರದಲ್ಲಿ ಮೌಲ್ಯೀಕರಣ ಪ್ರಕ್ರಿಯೆಗೆ ಒಳಪಡಿಸಿ ನಂತರ ತೀರ್ಮಾನಿಸುವುದು.
- ಕಿರಿಯ ಕ್ರೀಡಾಪಟು ಅತೀ ಹೆಚ್ಚಿನ ಪ್ರತಿಭೆ ಹೊಂದಿದ್ದಲ್ಲಿ ನೇರವಾಗಿ ಆಯ್ಕೆ ಮಾಡಬಹುದು. Long Term Athletic Development (LTAD)ಗೆ ಒಳಪಡಿಸಿ ಪೋಷಿಸುವುದು.

**7. ಆಯ್ಕೆಯ ಮತ್ತು ಬೆಳವಣಿಗೆಯ ಹಂತ:**

1. ಉನ್ನತ ಅಧಿಕಾರ ಸಮಿತಿ
2. ಕ್ರೀಡಾ ಪ್ರತಿಭಾನ್ವೇಷಣೆ ಮತ್ತು ಬೆಳವಣಿಗೆ ಸಮಿತಿ

**8. ಉನ್ನತ ಅಧಿಕಾರ ಸಮಿತಿ ರಚನೆ:**

1. ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು - ಅಧ್ಯಕ್ಷರು
2. ಅಧ್ಯಕ್ಷರು, ಕರ್ನಾಟಕ ಒಲಂಪಿಕ್ ಸಂಸ್ಥೆ - ಉಪಾಧ್ಯಕ್ಷರು
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ /ಕಾರ್ಯದರ್ಶಿ - ಸದಸ್ಯರು
4. ಆಯುಕ್ತರು / ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ - ಸದಸ್ಯ ಕಾರ್ಯದರ್ಶಿ
5. ಕ್ರೀಡಾ ವಿಜ್ಞಾನ ಕೇಂದ್ರದಿಂದ ತಜ್ಞರು - ಸದಸ್ಯರು
6. ವಿ.ಆರ್. ರಘುನಾಥ್, ಪ್ರಖ್ಯಾತ ಹಾಕಿ ಕ್ರೀಡಾಪಟು ಹಾಗೂ ಅರ್ಜುನ ಪ್ರಶಸ್ತಿ ವಿಜೇತರು - ಸದಸ್ಯರು
7. ನಿಹಾರ್ ಅಮಿನ್, ದ್ರೋಣಾಚಾರ್ಯ ಪ್ರಶಸ್ತಿ ವಿಜೇತರು ಹಾಗೂ ಖ್ಯಾತ ಈಜು ಪಟು - ಸದಸ್ಯರು
8. ಅನೂಪ್ ಶ್ರೀಧರ್, ಖ್ಯಾತ ಬ್ಯಾಡ್ಮಿಂಟನ್ ಆಟಗಾರರು - ಸದಸ್ಯರು

**9. ಉನ್ನತ ಅಧಿಕಾರ ಸಮಿತಿಯ ನಿರ್ವಹಣೆ:**

ಅಧ್ಯಕ್ಷರು ಅಗತ್ಯಾನುಸಾರ ತಜ್ಞರನ್ನು ಸಭೆಗೆ ಆಹ್ವಾನಿಸಬಹುದು. ಸಮಿತಿಯು ಕಾಲಾನುಕಾಲಕ್ಕೆ ಸಭೆ ಸೇರಿ ಆರ್ಥಿಕ ಮತ್ತು ನಿರ್ವಹಣೆಗೆ ಅಗತ್ಯಾನುಸಾರ ಅನುಮೋದನೆ ನೀಡುವುದು. ಸಮಿತಿಯ ಅಧ್ಯಕ್ಷರು ನಿರ್ಣಯ ಕೈಗೊಳ್ಳುವ ನಿರ್ಧಾರವನ್ನು ಪ್ರತ್ಯಾಯೋಜಿಸುವ ಅಧಿಕಾರ ಹೊಂದಿರುತ್ತಾರೆ.

**10. ಉನ್ನತ ಅಧಿಕಾರ ಸಮಿತಿಯ ಕರ್ತವ್ಯ / ಕಾರ್ಯಾಚರಣೆ:**

1. ಯೋಜನೆಯ ಅನುಷ್ಠಾನ, ನಿರ್ವಹಣೆ ಮತ್ತು ಮೇಲ್ವಿಚಾರಣೆ
2. ಈ ಯೋಜನೆಯ ಫಲಾನುಭವಿಯಾಗಲು ಕ್ರೀಡೆಗಳ ಗುರುತಿಸುವಿಕೆ (ಇವೆಂಟ್ ಆಧಾರಿತವಾಗಿಯೂ ಇರಬಹುದು) ಮತ್ತು ಪ್ರತಿ ಕ್ರೀಡೆಯಲ್ಲಿ ಕ್ರೀಡಾಪಟುಗಳ ಸಂಖ್ಯೆಯನ್ನು ನಿರ್ಧರಿಸುವುದು (ಪುರುಷ ಮತ್ತು ಮಹಿಳಾ ಅನುಪಾತ ಸೇರಿದಂತೆ)
3. ಪ್ರತಿ ಕ್ರೀಡೆಗೆ ಮತ್ತು ಇವೆಂಟ್ ಗೆ ವಯೋಮಿತಿ ನಿರ್ಧರಿಸುವುದು (ಪುರುಷ ಮತ್ತು ಮಹಿಳೆಯರಿಗೆ ಪ್ರತ್ಯೇಕ)
4. ಕ್ರೀಡಾ ಪ್ರತಿಭಾನ್ವೇಷಣೆಗೆ ವಿದ್ಯಾರ್ಥಿಗಳನ್ನು ಗುರುತಿಸುವುದು.
5. ಕ್ರೀಡಾಪಟುಗಳ ಆಯ್ಕೆಗೆ ಕ್ರೀಡಾ ವಿಜ್ಞಾನ ಮೌಲ್ಯಮಾಪನವೇ ಆಧಾರವಾಗಿದೆ.
6. ಆರ್ಥಿಕ ಬೆಂಬಲ ನೀಡಲು ವಿಧಾನವನ್ನು ನಿರ್ಧರಿಸುವುದು.

7. ಪ್ರಸ್ತುತ ಖೇಲೋ ಇಂಡಿಯಾ ಯೋಜನೆಯಡಿ ಆಯ್ಕೆಯಾದ ಕ್ರೀಡಾ ಅಕಾಡೆಮಿಗಳಿಗೆ ಆಯ್ಕೆಯಾದ ಕ್ರೀಡಾಪಟುಗಳು ಸೇರಿದಲ್ಲಿ ಪ್ರೋತ್ಸಾಹವನ್ನು ಅಕಾಡೆಮಿಗೆ (ಅಥವಾ ತರಬೇತಿ ಸಂಸ್ಥೆಗಳು / ಕ್ರೀಡಾ ವಿಜ್ಞಾನ ಕೇಂದ್ರಗಳಿಗೆ) ನೀಡುವುದು.
8. ಈ ಸಂಸ್ಥೆಗಳ ಸೇವೆಗಳನ್ನು ಮೇಲ್ವಿಚಾರಣೆ ಮಾಡಲು ವ್ಯವಸ್ಥೆ ರೂಪಿಸುವುದು.
9. ಆಯ್ಕೆಯಾದ ಕ್ರೀಡಾಪಟುಗಳಿಗೆ ವಿವಿಧ ಘಟಕಗಳಡಿ ಆರ್ಥಿಕ ನೆರವು ನೀಡಲು ಮಾರ್ಗಸೂಚಿ ನಿರ್ಧರಿಸುವುದು.
10. ನೆರವು ನೀಡಲು ಕ್ರೀಡಾಪಟುಗಳ ಪಟ್ಟಿಯನ್ನು ಅನುಮೋದಿಸುವುದು.
11. ಪ್ರತಿ ವರ್ಷಕ್ಕೆ ಆಯವ್ಯಯವನ್ನು ನಿಗದಿಪಡಿಸಿ ಅನುಮೋದಿಸುವುದು.
12. ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಇನ್ನಿತರೆ ಯಾವುದೇ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರ ಹೊಂದಿದೆ.
13. ಈ ಸಂಬಂಧ ರಾಜ್ಯ ಕ್ರೀಡಾ ಸಂಸ್ಥೆ / ಇತರೆ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡಬಹುದು.
14. ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಅಗತ್ಯ ತರಬೇತಿದಾರರು, ಸಿಬ್ಬಂದಿ ಮತ್ತು ತಜ್ಞರ ಸೇವೆ ಪಡೆಯುವುದು.

**11. ಕ್ರೀಡಾ ಪ್ರತಿಭಾನ್ವೇಷಣೆ ಮತ್ತು ಬೆಳವಣಿಗೆ ಸಮಿತಿ ರಚನೆ (Talent Identification Development Committee - TIDC )**

ಪ್ರತಿ ಕ್ರೀಡೆಗೆ ಸರ್ಕಾರವು TIDC ರಚಿಸಲಿದ್ದು, ಖ್ಯಾತ ಕ್ರೀಡಾಪಟುಗಳು, ರಾಷ್ಟ್ರೀಯ / ರಾಜ್ಯ ವೀಕ್ಷಕರು, ಖ್ಯಾತ ತರಬೇತುದಾರರು, ಕ್ರೀಡಾ ವಿಜ್ಞಾನ, ಪ್ರತಿಭಾ ಅನ್ವೇಷಣೆ ತಂಡ ಮತ್ತು ಕ್ರೀಡಾ ಸಂಸ್ಥೆಗಳ ಪ್ರತಿಭೆ ಮತ್ತು ಇಲಾಖೆಯ ಆಯುಕ್ತರು / ಪ್ರತಿನಿಧಿ ಒಳಗೊಂಡಿರುತ್ತದೆ.

1. ಆಯುಕ್ತರು/ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ - ಅಧ್ಯಕ್ಷರು
2. ಕಾರ್ಯದರ್ಶಿ, ಕರ್ನಾಟಕ ಒಲಂಪಿಕ್ ಸಂಸ್ಥೆ - ಉಪಾಧ್ಯಕ್ಷರು
3. ಖ್ಯಾತ ಕ್ರೀಡಾಪಟುಗಳು (ಆಯಾ ಕ್ರೀಡೆಗೆ ಸಂಬಂಧಿಸಿದಂತೆ - ಅರ್ಜುನ ಪ್ರಶಸ್ತಿ ವಿಜೇತರು) - ಸದಸ್ಯರು
4. ಖ್ಯಾತ ತರಬೇತುದಾರರು (ಆಯಾ ಕ್ರೀಡೆಗೆ ಸಂಬಂಧಿಸಿದಂತೆ - ದ್ರೋಣಾಚಾರ್ಯ/ ಧ್ಯಾನಚಂದ್/ ಜೀವಮಾನ ಸಾಧನೆ ಪ್ರಶಸ್ತಿ ವಿಜೇತರು) - ಸದಸ್ಯರು
5. ಕ್ರೀಡಾ ವಿಜ್ಞಾನ ತಜ್ಞರು - ಸದಸ್ಯರು
6. ರಾಜ್ಯ ಕ್ರೀಡಾ ಸಂಸ್ಥೆಯ ಪ್ರತಿನಿಧಿ (ಆಯಾ ಕ್ರೀಡೆಗೆ ಸಂಬಂಧಿಸಿದಂತೆ) - ಸದಸ್ಯರು
7. ವಿ.ಆರ್. ರಘುನಾಥ್, ಪ್ರಖ್ಯಾತ ಹಾಕಿ ಕ್ರೀಡಾಪಟು ಹಾಗೂ ಅರ್ಜುನ ಪ್ರಶಸ್ತಿ ವಿಜೇತರು - ಸದಸ್ಯರು
8. ನಿಹಾರ್ ಅಮಿನ್, ದ್ರೋಣಾಚಾರ್ಯ ಪ್ರಶಸ್ತಿ ವಿಜೇತರು ಹಾಗೂ ಖ್ಯಾತ ಈಜು ಪಟು - ಸದಸ್ಯರು
9. ಅನೂಪ್ ಶ್ರೀಧರ್, ಖ್ಯಾತ ಬ್ಯಾಡ್ಮಿಂಟನ್ ಆಟಗಾರರು - ಸದಸ್ಯರು
10. ಜಂಟಿ ನಿರ್ದೇಶಕರು (ಕ್ರೀಡೆ), ಯುಸಕ್ರೀಇಲಾಖೆ - ಸದಸ್ಯ ಕಾರ್ಯದರ್ಶಿ

**12. ಕ್ರೀಡಾ ಪ್ರತಿಭಾನ್ವೇಷಣೆ ಮತ್ತು ಬೆಳವಣಿಗೆ ಸಮಿತಿಯ ಕರ್ತವ್ಯ / ಕಾರ್ಯಾಚರಣೆ:**

1) ಪ್ರತಿಭಾ ನೆರವಿಗೆ ಅಂತಿಮ ಪಟ್ಟಿಯನ್ನು ಶಿಫಾರಸ್ಸುಗೊಳಿಸುವುದು.
2) ಸಾಧನೆಯಲ್ಲಿ ತೋರಿದ ಪ್ರಗತಿ, ಗುರಿ ಸಾಧಿಸುವಲ್ಲಿ ಪ್ರಾಮಾಣಿಕ ಪ್ರಯತ್ನ, ಉದ್ದೀಪನ ಸೇವನೆ ಪರೀಕ್ಷೆಯಲ್ಲಿನ ವರದಿ, ಕ್ರೀಡೆಗೆ / ಸರ್ಕಾರಕ್ಕೆ ಚ್ಯುತಿ ತರುವಂತಹ ಕ್ರೀಡಾಪಟುವಿನ ವ್ಯವಹಾರಗಳ ಆಧಾರದಲ್ಲಿ ಕ್ರೀಡಾಪಟುವನ್ನು ಹೊರ ಹಾಕುವುದು. ಇದನ್ನು ಲಿಖಿತ ರೂಪದಲ್ಲಿ ದಾಖಲಿಸುವುದು.
3) ಉನ್ನತ ಅಧಿಕಾರ ಸಮಿತಿಯು ನೀಡಿದ ಚೌಕಟ್ಟಿನಲ್ಲಿ ಪ್ರತಿಭೆ ಗುರುತಿಸುವುದು ಯೋಜನೆಯ ಗುರಿಯಾದ 2024ರ ಒಲಿಂಪಿಕ್ಸ್ ನಲ್ಲಿ ಪದಕ ಸಾಧನೆಗಾಗಿ ಕಿರಿಯ ವಯಸ್ಸಿನ ಕ್ರೀಡಾಪಟುಗಳನ್ನು ಗುರುತಿಸುವುದು.
4) ಖೇಲೋ ಇಂಡಿಯಾ ಯೋಜನೆಯಡಿ ಗುರುತಿಸಲಾದ ಅಕಾಡೆಮಿಗಳು / ವಿದ್ಯಾ ಸಂಸ್ಥೆಗಳು ತರಬೇತಿ ಸಂಸ್ಥೆಗಳಲ್ಲಿ ಕ್ರೀಡಾಪಟುಗಳ ಸಾಧನೆಗೆ ಅಗತ್ಯವಾದ ನೆರವನ್ನು ನೀಡುವ ಬಗ್ಗೆ ಶಿಫಾರಸ್ಸು.
5) ಕ್ರೀಡಾ ವಿಜ್ಞಾನ, ಕ್ರೀಡಾಪಟುವನ್ನು ಟ್ರ್ಯಾಕ್ ಮಾಡುವ ತಂತ್ರಜ್ಞಾನ, ಮಾಹಿತಿ ವಿಶ್ಲೇಷಣೆ ಬಗ್ಗೆ ತೀರ್ಮಾನಿಸುವುದು.
6) ಈ ಸಮಿತಿಗೆ ಕ್ರೀಡಾ ವಿಜ್ಞಾನ ಕೇಂದ್ರ, ಶ್ರೀ ಕಂಠೀರವ ಕ್ರೀಡಾಂಗಣ ಇವರು ಅಗತ್ಯ ಕ್ರೀಡಾ ವಿಜ್ಞಾನ ಬೆಂಬಲವನ್ನು ನೀಡುವುದು ಮತ್ತು ಪ್ರತಿಭಾನ್ವೇಷಣೆ ಪ್ರಕ್ರಿಯೆಯಲ್ಲಿ ಸಮಿತಿಯೊಂದಿಗೆ ಕಾರ್ಯನಿರ್ವಹಿಸುವುದು.

**13. ಕ್ರೀಡಾ ಪ್ರತಿಭಾನ್ವೇಷಣೆ ಪ್ರಕ್ರಿಯೆ** :

ಕ್ರೀಡಾ ಪ್ರತಿಭಾನ್ವೇಷಣೆಗೆ ಕೆಳಕಂಡ ಪ್ರಮುಖ ಮಾನದಂಡಗಳನ್ನು ಪರಿಗಣಿಸಬಹುದಾಗಿದೆ:-

1. ಖೇಲೋ ಇಂಡಿಯಾ ರಾಷ್ಟ್ರೀಯ / ರಾಜ್ಯ ಮಟ್ಟದ ಶಾಲಾ / ಕಾಲೇಜು / ವಿಶ್ವವಿದ್ಯಾಲಯ ಕ್ರೀಡಾಕೂಟಗಳಿಂದ ಗುರುತಿಸುವುದು.
2. ರಾಷ್ಟ್ರೀಯ / ರಾಜ್ಯ ಮಟ್ಟದ ಕ್ರೀಡಾ ಸಂಸ್ಥೆಗಳ ಕ್ರೀಡಾಕೂಟಗಳಿಂದ
3. ಇಲಾಖೆಯ ಕ್ರೀಡಾ ಶಾಲೆ / ನಿಲಯಗಳಿಂದ
4. ಉನ್ನತ ಅಧಿಕಾರ ಸಮಿತಿಯು ವಿಶ್ವಮಾನ್ಯ ವೈಜ್ಞಾನಿಕ ಕ್ರಮಗಳನ್ನು ಪ್ರತಿಭೆಗಳನ್ನು ಗುರುತಿಸಲು ಬಳಸಬಹುದು.
5. ರಾಜ್ಯಾದ್ಯಂತ ಪ್ರತಿಭೆ ಗುರುತಿಸುವ ಟ್ರಯಲ್ಸ್ ಗಳನ್ನು ಆಯೋಜಿಸುವುದು.
6. ಅಲ್ಪಾವಧಿ, ಮಾಧ್ಯಮಾವಧಿ ಮತ್ತು ದೀರ್ಘಾವಧಿ ಗುರಿಗಳನ್ನು ಪ್ರತಿ ಕ್ರೀಡಾಪಟುವಿಗೆ ನೀಡುವುದು. ಪ್ರತಿ ಕ್ರೀಡಾಪಟುವಿಗೆ ನೀಡುವ ನೆರವು, ಪ್ರತಿ ವರ್ಷವು ಸಾಧನೆಯಲ್ಲಿನ ಪ್ರಗತಿ ಮತ್ತು ಗುರಿಗಳನ್ನು ಸಾಧಿಸಿದ ಆಧಾರದಲ್ಲಿ ನಿರ್ಧರಿತವಾಗುತ್ತದೆ.

7. ಪ್ರತಿ ಕ್ರೀಡಾಪಟುವಿಗೆ ನೀಡಬಹುದಾದ ಕನಿಷ್ಠ ನೆರವನ್ನು ನಿರ್ಧರಿಸುವುದು ಮತ್ತು ಪ್ರತಿ ಕ್ರೀಡಾಪಟು ಹಾಗೂ ತರಬೇತಿ ಸಂಸ್ಥೆಗಳನ್ನು ಕ್ರೀಡಾ ಶ್ರೇಷ್ಠತೆಗೆ ಪ್ರೋತ್ಸಾಹಿಸಲು ನೆರವಿನ ಪ್ರಮಾಣವನ್ನು ಹೆಚ್ಚಿಸಬಹುದು. ಕ್ರೀಡಾಪಟುಗಳ ಶ್ರೇಣಿಯನ್ನುಸಿದ್ಧಪಡಿಸುವುದು.
8. ಕ್ರೀಡಾ ಪ್ರತಿಭಾ ಕಣಜದ ಗಾತ್ರ ಬಹಳ ಕಡಿಮೆ ಇದ್ದಲ್ಲಿ, ವೈಜ್ಞಾನಿಕ ಆಧಾರದಲ್ಲಿ TIDC ಯು ಮುಂದಿನ ದಿನಗಳಲ್ಲಿ ಸಾಧನೆ ಮಾಡುವ ಸಾಮರ್ಥ್ಯ ಹೊಂದಿರುವ ಕಿರಿಯ ಪ್ರತಿಭೆಗಳನ್ನು ಆಯ್ಕೆ ಮಾಡಬಹುದು.

## 14. ಆರ್ಥಿಕ ಸಂಪನ್ಮೂಲ :

ಉನ್ನತ ಅಧಿಕಾರ ಸಮಿತಿಯು ಆಯ್ಕೆ ಮಾಡಿದ ಕ್ರೀಡಾಪಟುಗಳು ಖೇಲೋ ಇಂಡಿಯಾ ಯೋಜನೆಯಡಿ ಮಾನ್ಯತೆ ಪಡೆದ ಪ್ರತಿಷ್ಠಿತ ಅಕಾಡೆಮಿಗಳಲ್ಲಿ ಗುಣಮಟ್ಟದ ತರಬೇತಿ ಪಡೆದು ಉನ್ನತ ಸಾಧನೆ ಮಾಡಲು ಪ್ರೇರೇಪಿಸುವ ನಿಟ್ಟಿನಲ್ಲಿ ವಿವಿಧ ಅಗತ್ಯತೆಗಳಿಗಾಗಿ ಈ ಕೆಳಗಿನಂತೆ ಪ್ರೋತ್ಸಾಹ ಧನ ನೀಡಬಹುದಾಗಿದೆ:-

| ಕ್ರ. ಸಂ | ವಿವರ | ಮಾನದಂಡ | ವಾರ್ಷಿಕ ಗರಿಷ್ಠ ಪ್ರೋತ್ಸಾಹದ ಮೊತ್ತ (ರೂ. ಗಳಲ್ಲಿ) | ಷರಾ |
|---|---|---|---|---|
| 1. | ಕ್ರೀಡಾ ತರಬೇತಿ | ಖೇಲೋ ಇಂಡಿಯಾ ಯೋಜನೆಯಡಿ ಮಾನ್ಯತೆ ಪಡೆದ ಅಕಾಡೆಮಿಗಳಲ್ಲಿ ತರಬೇತಿ ಪಡೆದಲ್ಲಿ ಮಾತ್ರ | 75,000.00 | ನೇರವಾಗಿ ಅಕಾಡೆಮಿಗೆ ನೀಡುವುದು. |
| 2. | ಕ್ರೀಡಾ ವಿಜ್ಞಾನ ಬೆಂಬಲ | ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಂದ ಮಾನ್ಯತೆ ಪಡೆದ ಕ್ರೀಡಾ ವಿಜ್ಞಾನ ಕೇಂದ್ರಗಳಿಂದ ಸೌಲಭ್ಯ ಪಡೆದಲ್ಲಿ | 50,000.00 | ನೇರವಾಗಿ ಕ್ರೀಡಾ ವಿಜ್ಞಾನ ಕೇಂದ್ರಕ್ಕೆ ನೀಡುವುದು. |
| 3. | ಪೌಷ್ಠಿಕ ಆಹಾರಕ್ಕಾಗಿ (Supplements) | ಕ್ರೀಡಾಪಟುವಿನ ಪೌಷ್ಠಿಕ ಅಗತ್ಯತೆಗಳನ್ನು ಭಾರತ ಸರ್ಕಾರವು ಕಿರಿಯ ರಾಷ್ಟ್ರೀಯ ಶಿಬಿರಾರ್ಥಿಗಳಿಗೆ ನಿಗದಿಪಡಿಸಿದಂತೆ | 75,000.00 | ಕ್ರೀಡಾ ವಿಜ್ಞಾನ ಕೇಂದ್ರದ ಶಿಫಾರಸ್ಸಿನಂತೆ, ನೇರವಾಗಿ ಅಕಾಡೆಮಿಗೆ ನೀಡುವುದು. |
| 4. | ಕ್ರೀಡಾ ಕಿಟ್ | ಸಾಮಾನ್ಯ ಕ್ರೀಡಾ ತರಬೇತಿ ಕಿಟ್ - ವರ್ಷಕ್ಕೆ ಒಂದು ಬಾರಿ (ಟ್ರ್ಯಾಕ್ ಸೂಟ್ – 1, ಟಿ-ಶರ್ಟ್ -8, ಶಾರ್ಟ್ಸ್ – 6, ವಾರ್ಮ್ ಅಪ್ ಶೂಸ್ – 2 ಜೊತೆ, ಸಾಕ್ಸ್ – 4 ಜೊತೆ) | 20,000.00 | ನೇರವಾಗಿ ಅಕಾಡೆಮಿಗೆ ನೀಡುವುದು. |

| | | | | |
|---|---|---|---|---|
| 5. | ಅವರ್ತಿತವಾಗುವ ಕ್ರೀಡಾ ಸಾಮಗ್ರಿ ಮತ್ತು ಕ್ರೀಡೆಗೆ ಅನುಗುಣವಾದ ಕಿಟ್ ಗಾಗಿ | ಕ್ರೀಡೆಗೆ ಅನುಗುಣವಾದ ಸ್ಪರ್ಧಾತ್ಮಕ ಕಿಟ್ | 50,000.00 | ನೇರವಾಗಿ ಅಕಾಡೆಮಿಗೆ ನೀಡುವುದು. |
| 6. | ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಲು | ವಸತಿ/ಊಟ, ಪ್ರಯಾಣಭತ್ಯೆ/ದಿನಭತ್ಯೆ, ಮತ್ತಿತರೆ ವೆಚ್ಚಗಳು | 60,000.00 | ನೇರವಾಗಿ ಅಕಾಡೆಮಿಗೆ ನೀಡುವುದು. |
| 7. | ಕ್ರೀಡಾಪಟುವಿಗೆ ನೇರವಾಗಿ ದೈನಂದಿನ ಅಗತ್ಯತೆಗಳಿಗಾಗಿ ಮತ್ತು ಇತರೆ ವೆಚ್ಚಗಳಿಗಾಗಿ | ಆಯ್ಕೆಯಾದ ಕ್ರೀಡಾಪಟುವಿಗೆ ನೇರವಾಗಿ ಬ್ಯಾಂಕ್ ಖಾತೆಗೆ ನೀಡುವುದು. (ಬಳಕೆ ಪ್ರಮಾಣ ಪತ್ರ ಅಗತ್ಯವಿರುವುದಿಲ್ಲ) | 1,20,000.00 | ನೇರವಾಗಿ ಕ್ರೀಡಾಪಟುವಿಗೆ ತ್ರೈಮಾಸಿಕವಾಗಿ ಮುಂಗಡದಲ್ಲಿ ನೀಡುವುದು. |
| 8. | ವಿದ್ಯಾಭ್ಯಾಸ | ಶೈಕ್ಷಣಿಕ ಶುಲ್ಕ ಮರುಪಾವತಿಯ ಯೋಜನೆಯ ಷರತ್ತುಗಳಂತೆ ನೀಡುವುದು. | 50,000.00 | ಶಾಲಾ/ಕಾಲೇಜುಗಳಿಂದ ಶುಲ್ಕ ರಶೀದಿಯನ್ನು ನೀಡಿದಲ್ಲಿ ಅಕಾಡೆಮಿಗೆ ನೀಡುವುದು. |
| | **ಪ್ರತಿ ಕ್ರೀಡಾಪಟುವಿಗೆ ವಾರ್ಷಿಕ ಗರಿಷ್ಠ ಪ್ರೋತ್ಸಾಹ ಧನದ ಮೊತ್ತ** | | **5,00,000.00** | |

1. ಮೇಲಿನ ಮೊತ್ತಗಳು ಗರಿಷ್ಠ ಮಿತಿಯಾಗಿದ್ದು, ನೈಜ ಬಿಲ್ಲುಗಳ ಆಧಾರದಲ್ಲಿ ಸೀಮಿತಗೊಳಿಸಲಾಗುವುದು.
2. ಖೇಲೋ ಇಂಡಿಯಾದಿಂದ ಮಾನ್ಯತೆ ಪಡೆಯದ ಅಕಾಡೆಮಿಗಳಲ್ಲಿ ಕ್ರೀಡಾಪಟು ತರಬೇತಿ ಪಡೆಯಲು ಇಚ್ಛಿಸಿದಲ್ಲಿ ಕ್ರ.ಸಂ. 2 ಮತ್ತು 3 ನ್ನು ಮಾನದಂಡಗಳಂತೆ ಕ್ರೀಡಾ ವಿಜ್ಞಾನ ಕೇಂದ್ರದಿಂದ ದೃಢೀಕೃತ ರಶೀದಿ ಮತ್ತು ವೈಜ್ಞಾನಿಕ ವರದಿ ನೀಡಿದಲ್ಲಿ ಕ್ರೀಡಾಪಟುವಿಗೆ ನೇರವಾಗಿ ನೀಡಲಾಗುವುದು ಹಾಗೂ ಕ್ರ.ಸಂ.7ಅನ್ನು ಕ್ರೀಡಾಪಟುವಿಗೆ ನೇರವಾಗಿ ನೀಡಲಾಗುವುದು.
3. ಭಾರತ ಸರ್ಕಾರ/ ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದ ಕ್ರೀಡಾ ವಿಜ್ಞಾನ ಕೇಂದ್ರದ ವಿಸ್ತೃತ ವೈಜ್ಞಾನಿಕ ಮೌಲ್ಯಮಾಪನ ವರದಿಯಲ್ಲಿ ಕ್ರೀಡಾಪಟುವು ಹೆಚ್ಚಿನ ಸಾಧನೆ ಮಾಡಲು ಸಾಮರ್ಥ್ಯ ಹೊಂದಿರುವುದು ದೃಢಪಟ್ಟಲ್ಲಿ ಜೊತೆಗೆ ಹಿಂದಿನ ವರ್ಷದ ಕ್ರೀಡಾ ಸಾಧನೆ ತೃಪ್ತಿಕರವಾಗಿದ್ದು, ಉತ್ತಮ ನಡತೆ ಹೊಂದಿದ್ದಲ್ಲಿ ಮಾತ್ರ ಮುಂದಿನ ವರ್ಷಕ್ಕೆ ಈ ಯೋಜನೆಯಡಿ ಮುಂದುವರೆಸಲು ತೀರ್ಮಾನಿಸುವುದು. ಈ ಸಂಬಂಧ ಭಾರತೀಯ ಕ್ರೀಡಾ ಪ್ರಾಧಿಕಾರದ ದರಗಳಂತೆ ವೆಚ್ಚ ಭರಿಸುವುದು.
4. ಅಕಾಡೆಮಿಗಳು ಪ್ರತಿ ವೆಚ್ಚಕ್ಕೆ ರಶೀದಿಗಳನ್ನು ಲೆಕ್ಕಪರಿಶೋಧನೆಗೊಳಪಡಿಸಿ ವರದಿ ನೀಡುವುದು.

ಈ ಯೋಜನೆಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ: 2204-00-104-0-02-059 (ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ಇತರೆ ಖರ್ಚು)), 2204-00-104-0-25 051 (ಕ್ರೀಡಾ ಸಂಸ್ಥೆಗಳು ಮತ್ತು ನಿಲಯ), ಲೆಕ್ಕ ಶೀರ್ಷಿಕೆ:2204-00-104-0-29 (ಕರ್ನಾಟಕ ಕ್ರೀಡಾ ಪ್ರಾಧಿಕಾರ) 2204-00-

789-0-01 422 (ವಿಶೇಷ ಘಟಕ ಯೋಜನೆ) ಮತ್ತು 2204-00-796-0-01 423 (ಗಿರಿಜನಉಪಯೋಜನೆ) ಅಡಿಯಲ್ಲಿ ಆಯವ್ಯಯದಲ್ಲಿ ಲಭ್ಯಪಡಿಸಿರುವ ಅನುದಾನದಲ್ಲಿ ಭರಿಸುವುದು.

**ಇದಲ್ಲದೇ, ಆಕಾಂಕ್ಷಾ ಪೋರ್ಟಲ್ ಮೂಲಕ ಸಿಎಸ್ಆರ್ ಸಂಸ್ಥೆಗಳನ್ನು ಸಂಪರ್ಕಿಸಿ ಹೆಚ್ಚಿನ ಪ್ರೋತ್ಸಾಹಕ್ಕಾಗಿ ಅಮೃತ ಕ್ರೀಡಾ ದತ್ತು ಯೋಜನೆಯನ್ನು ವಿಸ್ತರಿಸಬಹುದು.**

-----

M. Umesh Shastry
19/8/2022